

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 8 ಮಂಗಳವಾರ 2022

ಸಂಪುಟ: 43 | ಸಂಚಿಕೆ: 201 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಚೆನ್ನೈ–ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಯೋಗಾರ್ಥ ಸಂಚಾರ ಯಶಸ್ವಿ

ನಿಗದಿತ ಸಮಯಕ್ಕಿಂತ 15 ನಿಮಿಷ ಮೊದಲೇ ಮೈಸೂರು ತಲುಪಿದ ಸೂಪರ್ ಫಾಸ್ಟ್ ರೈಲು



ಮೈಸೂರು, ನ. 7(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನ.11ರಂದು ಚಾಲನೆ ನೀಡಲಿರುವ ಚೆನ್ನೈ–ಬೆಂಗಳೂರು–ಮೈಸೂರು ನಡುವಿನ ವಂದೇ ಭಾರತ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನ ಪ್ರಯೋಗಾರ್ಥ ಸಂಚಾರ ಯಶಸ್ವಿಯಾಗಿದೆ.

ಇಂದು ಮುಂಜಾನೆ 5.50 ಗಂಟೆಗೆ ಚೆನ್ನೈನ ಎಂಜಿಆರ್ ಸೆಂಟ್ರಲ್ ರೈಲು ನಿಲ್ದಾಣದಿಂದ ಹೊರಟ ವಂದೇ ಭಾರತ್ ಎಕ್ಸ್‌ಪ್ರೆಸ್, 497 ಕಿ.ಮೀ. ದೂರವನ್ನು 15 ನಿಮಿಷ ಮುನ್ನವೇ, ಕೇವಲ ಆರೂವರೆ ಗಂಟೆಯೊಳಗೆ ಮೈಸೂರು ರೈಲ್ವೇ ನಿಲ್ದಾಣ ತಲುಪಿತು. ಚೆನ್ನೈನಿಂದ ಬೆಂಗಳೂರು ಮಾರ್ಗ ಮೈಸೂರು ತಲುಪಿದ 16 ಬೋಗಿಗಳುಳ್ಳ ಈ ವೇಗದ ರೈಲಿನಲ್ಲಿ ನೈರುತ್ಯ ರೈಲ್ವೇ ವಿಭಾಗದ ಪ್ರಧಾನ ವ್ಯವಸ್ಥಾಪಕ ಸಂಜೀವ ಕಿಶೋರ್, ದಕ್ಷಿಣ ರೈಲ್ವೇ ಜನರಲ್ ಮ್ಯಾನೇಜರ್ ಬಿ.ಜಿ.ಮಲ್ಯ, ಕೆಲ ಹಿರಿಯ ಅಧಿಕಾರಿಗಳು, ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಆಗಮಿಸಿದರು. ಮುಂಜಾನೆ ಚೆನ್ನೈನಿಂದ ಹೊರಟ ಈ ರೈಲು, ಬೆಳಗ್ಗೆ 7.23 ಗಂಟೆಗೆ ಕಟ್ಪಾಡಿ ಜಂಕ್ಷನ್‌ನಲ್ಲಿ 2 ನಿಮಿಷ ನಿಲುಗಡೆ ಅಲ್ಲಿಂದ 7.25 ಗಂಟೆಗೆ ಪ್ರಯಾಣ ಆರಂಭಿಸಿ, 8.30ಕ್ಕೆ ಜೋಲಾರ್‌ಪೆಟ್ಟಾಯ್ ಜಂಕ್ಷನ್ ▶ 8ನೇ ಪುಟಕ್ಕೆ

ಈ ರೈಲು ಎರಡು ಇಂಜಿನ್‌ಗಳನ್ನು ಹೊಂದಿದ್ದು, 16 ಬೋಗಿಗಳಿವೆ. ಆ ಪೈಕಿ ಎರಡು ಎಕ್ಸಿಕ್ಯೂಟಿವ್ ಚೇರ್ ಬೋಗಿಗಳಾಗಿದ್ದು, 180 ಡಿಗ್ರಿ ಕೋನದ ಆಸನಗಳನ್ನು ಹೊಂದಿದೆ. ಪ್ರತೀ ಬೋಗಿಯಲ್ಲಿ 80 ಆಸನಗಳಿದ್ದು, ಪೂರ್ಣ ಹವಾನಿಯಂತ್ರಿತವಾಗಿದೆ.

❝ ಜಿಪಿಎಸ್ ಆಧಾರಿತ ಆಡಿಯೋ–ವಿಷ್ಯುಯಲ್ ಪ್ಯಾಸೆಂಜರ್ ಇನ್‌ಫರ್ಮೇಷನ್ ಸಿಸ್ಟಂ, ಆನ್ ಬೋರ್ಡ್ ಹಾಟ್‌ಸ್ಪಾಟ್ ವೈ–ಫೈ ವ್ಯವಸ್ಥೆಯೊಂದಿಗೆ ಮೈಸೂರು–ಚೆನ್ನೈ ನಗರಗಳ ನಡುವೆ ವಾರದಲ್ಲಿ 6 ದಿನ ಸಂಚರಿಸಲಿದೆ. ಅಧಿಕೃತ ವೇಳಾಪಟ್ಟಿಯನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು. ಮೈಸೂರು–ಬೆಂಗಳೂರು ನಡುವೆ ಕಡಿದಾದ ತಿರುವುಗಳು, ಸಾಕಷ್ಟು ಸೇತುವೆಗಳಿರುವುದರಿಂದ ವಂದೇ ಭಾರತ್ ಹೈಸ್ಪೀಡ್ ಎಕ್ಸ್‌ಪ್ರೆಸ್ ರೈಲು ಸಾಧಾರಣ ವೇಗದಲ್ಲಿ ಸಂಚರಿಸಲಿದ್ದು, ಬೆಂಗಳೂರಿನಿಂದ ಚೆನ್ನೈಗೆ ಅತೀ ವೇಗವಾಗಿ ಸಂಚರಿಸಲಿದೆ. ಇಂದು ಪ್ರಯೋಗಾರ್ಥ ಸಂಚಾರ ಯಶಸ್ವಿಯಾಗಿದೆ.

–ಇ.ವಿಜಯ, ನೈರುತ್ಯ ರೈಲ್ವೆ ಸಹಾಯಕ ಪ್ರಧಾನ ವ್ಯವಸ್ಥಾಪಕಿ





ಬೇಕಾಗಿದ್ದಾರೆ

1. ವಾಷಿಂಗ್ (ಪುರುಷ) ಪಾರ್ಟ್ ಟೈಮ್
ದಿ ಕೋರಂ ಹೋಟೆಲ್
#2257/1 ವಿನೋಬಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು
ಸಂಪರ್ಕಿಸಿ 9620274629 9620274630

ಬೇಕಾಗಿದ್ದಾರೆ


1. ಹೌಸ್‌ಕೀಪಿಂಗ್ (ಪುರುಷ)
ದಿ ಕೋರಂ ಹೋಟೆಲ್
#2257/1 ವಿನೋಬಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು
ಸಂಪರ್ಕಿಸಿ 9620274629 9620274630

GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 5500
8884304444



ಇಂದು ವರ್ಷದ ಕೊನೇ ಚಂದ್ರ ಗ್ರಹಣ



ಬೆಂಗಳೂರು: ಈ ವರ್ಷದ ಕೊನೆಯ ಚಂದ್ರ ಗ್ರಹಣವು ನವೆಂಬರ್ 8ರಂದು ಸಂಭವಿಸಲಿದೆ. ದೀಪಾವಳಿಯ ಮರುದಿನ ಕೊನೆಯ ಸೂರ್ಯಗ್ರಹಣ ಸಂಭವಿಸಿದೆ. ಈಗ ಕೊನೆಯ ಚಂದ್ರಗ್ರಹಣವು ನ.8ರಂದು ಅಂದರೆ ಸೂರ್ಯ ಗ್ರಹಣ ನಡೆದು ನಿಖರವಾಗಿ 15 ದಿನಗಳ ನಂತರ ಸಂಭವಿಸಲಿದೆ. ವರ್ಷದ ಮೊದಲ ಚಂದ್ರ ಗ್ರಹಣವು 16 ಮೇ 2022ರಂದು ಸಂಭವಿಸಿತು.

ಕೊನೆಯ ಚಂದ್ರ ಗ್ರಹಣವು ಭಾರತೀಯ ಕಾಲಮಾನದ ಪ್ರಕಾರ ನವೆಂಬರ್ 8 ರಂದು ಸಂಜೆ 5:32ಕ್ಕೆ ಪ್ರಾರಂಭವಾಗುತ್ತದೆ ಮತ್ತು ರಾತ್ರಿ 7.27ರವರೆಗೆ ಇರುತ್ತದೆ. ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ದರ್ಶನ ಇಲ್ಲ

ಮೈಸೂರು: ಚಂದ್ರಗ್ರಹಣದ ಕಾರಣ ನ.8 ಮಧ್ಯಾಹ್ನ 1ರಿಂದ ಚಾಮುಂಡೇಶ್ವರಿ ದರ್ಶನಕ್ಕೆ ಅವಕಾಶವಿರುವುದಿಲ್ಲ. ಬೆಳಗ್ಗೆಯಿಂದ ಮಧ್ಯಾಹ್ನ 1ರವರೆಗೂ ದೇವಸ್ಥಾನ ತೆರೆದಿರುತ್ತದೆ. ಭಕ್ತಾದಿಗಳು ದೇವಿ ದರ್ಶನ ಪಡೆಯಬಹುದು. ಗ್ರಹಣ ಕಾಲ ಅಂದರೆ ಮಧ್ಯಾಹ್ನ 1ರಿಂದ ಯಾವುದೇ ಪೂಜೆ, ದರ್ಶನ ಇರುವುದಿಲ್ಲ.

ಚಂದ್ರ ಗ್ರಹಣ ಸಮಯ

ಭಾಗಶಃ – ಮಧ್ಯಾಹ್ನ 2.39
ಪೂರ್ಣ – ಮಧ್ಯಾಹ್ನ 3.46
ಗರಿಷ್ಠ – ಅಪರಾಹ್ನ 4:29
ಕೊನೆಗೊಳ್ಳುವ ಸಮಯ – ಸಂಜೆ 5:11

ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಶೇ.10 ಮೀಸಲಾತಿ

'ಸುಪ್ರೀಂ' ಅಸ್ತು

ಕೇಂದ್ರದ ಕಾನೂನು ಎತ್ತಿ ಹಿಡಿದ ಸರ್ವೋಚ್ಚ ನ್ಯಾಯಾಲಯ

ದೆಹಲಿ: ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿ ಒದಗಿಸುವ ಕೇಂದ್ರ ಸರ್ಕಾರದ ಕಾನೂನನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿ ಹಿಡಿದಿದೆ.



ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ. 10ರಷ್ಟು ಮೀಸಲಾತಿ ಒದಗಿಸುವುದಕ್ಕೆ ಸಂಬಂಧಿಸುವ ಕಾನೂನಿನ ಸಿಂಧುತ್ವಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಪರಿಶೀಲಿಸಿತು. ಐವರು ನ್ಯಾಯಮೂರ್ತಿಗಳಿದ್ದ ನ್ಯಾಯಪೀಠದಲ್ಲಿ ನಾಲ್ವರು ಮೀಸಲಾತಿ ಪರವಾಗಿ ಹಾಗೂ ಒಬ್ಬರು ಭಿನ್ನಮತದ ತೀರ್ಪು ನೀಡಿದರು. ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ, ತ್ರಿವೇದಿ, ಫಾರ್ದಿವಾಲ, ಯು.ಯು. ಲಲಿತ್ ಮೀಸಲಾತಿ ಪರವಾಗಿ ತೀರ್ಪು ಕೊಟ್ಟರು. ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಭಿನ್ನಮತ ತೀರ್ಪು ನೀಡಿದರು.

ಆರ್ಥಿಕ ಮಾನದಂಡಗಳನ್ನು ಆಧರಿಸಿದ ಮೀಸಲಾತಿ ನಿಯಮಗಳನ್ನು ರೂಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆಯೇ? ಹೀಗೆ ಮಾಡಿದರೆ ಸಂವಿಧಾನದ 103ನೇ ತಿದ್ದುಪಡಿಯು ಸಂವಿಧಾನದ ಮೂಲ ಆಶಯದ ಉಲ್ಲಂಘನೆಯಾಗುತ್ತದೆಯೇ? ಖಾಸಗಿ ಸಂಸ್ಥೆಗಳಿಗೆ ನೇಮಕಾತಿ ಅಥವಾ ದಾಖಲಾತಿಗೆ ಸಂಬಂಧಿಸಿದ ವಿಚಾರದಲ್ಲಿ ನಿರ್ದೇಶನ ನೀಡಲು ಸರ್ಕಾರಗಳಿಗೆ ವಿಶೇಷ ಅಧಿಕಾರ ನೀಡಲು ಅವಕಾಶವಿದೆಯೇ? ಎಂಬ ಅಂಶಗಳನ್ನೂ ನ್ಯಾಯಾಲಯವು ಪರಿಶೀಲನೆಗೆ ಒಳಪಡಿಸಿತು.

ಸಂವಿಧಾನದ 15 (6) ಮತ್ತು 16 (6) 103ನೇ ತಿದ್ದುಪಡಿಯ ಅನ್ವಯ ಉದ್ಯೋಗ ಮತ್ತು ಶಿಕ್ಷಣದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ನೀಡಲು ಅನುವು ಮಾಡಿಕೊಳ್ಳಲಾಯಿತು. ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ) ಮತ್ತು ಇತರ ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರದ ವ್ಯಕ್ತಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 8 ಲಕ್ಷಕ್ಕೂ ಕಡಿಮೆಯಿದ್ದರೆ ಈ ಕಾನೂನಿನ ಅನ್ವಯ ಮೀಸಲಾತಿ ನೀಡಲು ಅವಕಾಶ ಸಿಗುತ್ತದೆ. ಸಂವಿಧಾನದ 103ನೇ ತಿದ್ದುಪಡಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಪರಿಗಣಿಸಿದ ಮತ್ತೊಂದು ಅಂಶ ಶೇ.50ರ ಮೀಸಲಾತಿ ನಿಯಮ. 1992ರ ಇಂದ್ರಾ ಸಾಹ್ನಿ ಪ್ರಕರಣದಲ್ಲಿ (ಮಂಡಲ್ ಆಯೋಗ ಪ್ರಕರಣ) 9 ಸದಸ್ಯರಿದ್ದ ನ್ಯಾಯಪೀಠವು ಮೀಸಲಾತಿಯ ಒಟ್ಟು ಪ್ರಮಾಣ ಶೇ.50 ಮೀರಬಾರದು. ವಿಶೇಷ ಸಂದರ್ಭದಲ್ಲಿ ಈ ನಿರ್ಬಂಧಕ್ಕೆ ವಿನಾಯ್ತಿಯಿದೆ ಎಂದು ಹೇಳಿತ್ತು. ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ನಿವೃತ್ತಿಗೆ ಒಂದು ದಿನ ಮೊದಲು ಈ ಮಹತ್ವದ ತೀರ್ಪು ಬಂದಿದೆ. ಲಲಿತ್ ಅವರು ನಾಳೆ (ನವೆಂಬರ್ 8) ನಿವೃತ್ತರಾಗಲಿದ್ದಾರೆ.

ಖರ್ಗೆ ಸ್ವಾಗತ: ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿ ಒದಗಿಸುವ ಕೇಂದ್ರ ಸರ್ಕಾರದ ಕಾನೂನನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿರುವುದನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವಾಗತಿಸಿದ್ದಾರೆ. ಈ ವಿಚಾರವಾಗಿ ಬೆಂಗಳೂರಿನಲ್ಲಿ ಮಾತನಾಡಿ, ಮೀಸಲಾತಿಗೆ ಸಂಸತ್‌ನಲ್ಲಿ ನಾವೆಲ್ಲಾ ಒಮ್ಮತದಿಂದ ಒಪ್ಪಿಗೆ ನೀಡಿದ್ದೆವು. ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ, ಅದನ್ನು ಸ್ವಾಗತಿಸುತ್ತೇವೆ ಎಂದರು.

ವಿಪಕ್ಷಗಳ ಪಾದಯಾತ್ರೆ ನಡುವೆ ಬಿಜೆಪಿ ರಥಯಾತ್ರೆಗೆ ಸಿದ್ಧತೆ

● ಮಾಜಿ ಸಿಎಂ ಯಡಿಯೂರಪ್ಪ, ಹಾಲಿ ಸಿಎಂ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉಸ್ತುವಾರಿ ಅರುಣ್‌ಸಿಂಗ್ ನೇತೃತ್ವ ● ಅಲ್ಲಲ್ಲಿ ಸಭೆ–ಸಮಾರಂಭ, ರಾಜ್ಯ, ರಾಷ್ಟ್ರ ನಾಯಕರೂ ಭಾಗಿ

ಬೆಂಗಳೂರುನ.7(ಕೆಎಂಶಿ)–ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಬಿಜೆಪಿ ರಾಜ್ಯಾದ್ಯಂತ ರಥಯಾತ್ರೆ ನಡೆಸಲು ತೀರ್ಮಾನಿಸಿದೆ. ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ನೇತೃತ್ವದಲ್ಲಿ ಪ್ರತ್ಯೇಕವಾಗಿ ರಥಯಾತ್ರೆನಡೆಸಲು ನಿರ್ಧರಿಸಲಾಗಿದೆ. ಡಿಸೆಂಬರ್ ಮಧ್ಯೆ ಭಾಗದಿಂದ ಆರಂಭಗೊಳ್ಳುವ ಈ ಚುನಾವಣಾ ಯಾತ್ರೆ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಸಂಚರಿಸಿ ಮತದಾರರನ್ನು ಓಲೈಸಿಕೊಳ್ಳುವ ಕೆಲಸ ಮಾಡಲಿದೆ. ರಾಜ್ಯ ನಾಯಕರೂ ರಥಯಾತ್ರೆಯ ಕೆಲ ಭಾಗಗಳಲ್ಲಿ ಪಕ್ಷದ ಪರ ಕೆಲಸ ಮಾಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ರಥಯಾತ್ರೆಗಾಗಿ ಈಗಾಗಲೇ 2 ವಿಶೇಷ ವಾಹನಗಳು ಸಿದ್ಧಗೊಂಡಿದ್ದು ಇನ್ನು 4 ವಾಹನಗಳು ಸಿದ್ಧತಾ ▶ 8ನೇ ಪುಟಕ್ಕೆ



ಕೆಆರ್‌ಎಸ್‌ನಲ್ಲಿ ಚಿರತೆಗಳ ಕಣ್ಣಾಮುಚ್ಚಾಲೆ ಆಟ

ಚಿರತೆ ಬಳಗವೇ ಬೀಡುಬಿಟ್ಟಿರುವ ಶಂಕೆ!

ಶ್ರೀರಂಗಪಟ್ಟಣ, ನ.7–ಕೆಲ ದಿನಗಳಿಂದ ಕೆಆರ್‌ಎಸ್ ಅಣೆಕಟ್ಟೆ ಹಾಗೂ ಬೃಂದಾವನದಲ್ಲಿ ದಿನಕ್ಕೆ ಎರಡೆರಡು ಬಾರಿ ಚಿರತೆ ಕಾಣಿಸಿಕೊಂಡು ಆತಂಕ ಹೆಚ್ಚಿಸಿದೆ. ಇಂದೂ ಮಧ್ಯಾಹ್ನ ರಾಯಲ್ ಆರ್ಕಿಡ್ ಹೋಟೆಲ್ ಬಳಿ ನಾಯಿ ಒಂದರ ಮೇಲೆ ಚಿರತೆ ದಾಳಿ ಮಾಡಿದೆ. ಅದೃಷ್ಟವಶಾತ್ ನಾಯಿ ಚಿರತೆಯ ಬಾಯಿಂದ ತಪ್ಪಿಸಿಕೊಂಡು ಜೀವ ಉಳಿಸಿಕೊಂಡಿದೆ.

ಎರಡು ಬಾರಿ ಸೋಮವಾರ ಚಿರತೆ ಕಾಣಿಸಿಕೊಂಡಿದ್ದು, ಮಧ್ಯಾಹ್ನ ರಾಯಲ್ ಆರ್ಕಿಡ್ ಬಳಿ, ಸಂಜೆ 7 ಗಂಟೆ ವೇಳೆಗೆ ಸೌತ್ ಗೇಟ್ ಬಳಿ ಹಾದು ಹೋಗುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಚಿರತೆ ಬಳಗವೇ ಇರುವ ಶಂಕೆ: ಹೆಸರೇಳಲು ಇಚ್ಛಿಸದ ಸಿಬ್ಬಂದಿ ಪ್ರಕಾರ ಕೆಆರ್‌ಎಸ್ ಅಣೆಕಟ್ಟೆ ಹಾಗೂ ಬೃಂದಾವನಗಳಲ್ಲಿ ನಿರಂತರವಾಗಿ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಇಲ್ಲಿರುವುದು ಒಂದಲ್ಲ, ಚಿರತೆಯ ಬಳಗವೇ ಇರುವಂತಿದೆ. ಅಧಿಕಾರಿಗಳು ಈ ಹಿಂದೆ ನೋಡಿರುವ ಚಿರತೆ ಅತ್ಯಂತ ದಷ್ಟಪುಷ್ಟವಾಗಿದ್ದು, ಉತ್ತಮ ಮೈಕಟ್ಟು ಹೊಂದಿದೆ. ಆದರೆ ಇಂದು ಸೌತ್ ಗೇಟ್ ಬಳಿ ಕಾಣಿಸಿಕೊಂಡಿರುವ ಚಿರತೆ ಇನ್ನು ಮರಿ. ಹಾಗಾಗಿ ಇಲ್ಲಿ ಹಲವು ಚಿರತೆಗಳು ಇರಬಹುದು ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಕಳೆದ 20 ದಿನಗಳಿಂದ ಅರಣ್ಯ ಇಲಾಖೆ ಸಿಬ್ಬಂದಿ ▶ 8ನೇ ಪುಟಕ್ಕೆ

ಪೋಕ್ಸೋ ಪ್ರಕರಣ: ಮುರುಘಾಶ್ರೀ ವಿರುದ್ಧ 694 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

ಚಿತ್ರದುರ್ಗ: ಮುರುಘಾ ಮಠ ಶ್ರೀಗಳ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 694 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗಿದೆ.



ಪ್ರಕರಣದ ತನಿಖೆ ನಡೆಸಿರುವ ಡಿವೈಎಸ್ಪಿ ಅನಿಲ್ ನೇತೃತ್ವದ ತಂಡ 2ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಒಟ್ಟು 694 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಪೋಕ್ಸೋ, ಅಟ್ರಾಸಿಟಿ ಮತ್ತು ಧಾರ್ಮಿಕ ಕೇಂದ್ರ ದುರುಪಯೋಗ ಕಾಯ್ದೆ ಅಡಿಯಲ್ಲೂ ಕೇಸ್ ದಾಖಲಾಗಿದ್ದು, 342 ಪುಟಗಳ 2 ಸೆಟ್‌ನಂತೆ ಒಟ್ಟು 694 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗಿದೆ.

ಮುರುಘಾಶ್ರೀ, ಲೇಡಿ ವಾರ್ಡನ್ (ರಶ್ಮಿ), ಕಾರ್ಯದರ್ಶಿ ಪರಮಶಿವಯ್ಯ ವಿರುದ್ಧ ಚಾರ್ಜ್‌ಶೀಟ್‌ನಲ್ಲಿ ಆರೋಪಿಸಲಾಗಿದೆ. ಆದರೆ ವಕೀಲ ಗಂಗಾಧರಯ್ಯ ಅವರು ಪ್ರಕರಣದಲ್ಲಿ ಭಾಗಿಯಾಗಿರುವ ಮಾಹಿತಿ ಇಲ್ಲ, ಈ ಬಗ್ಗೆಯೂ ತನಿಖೆ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಠದಲ್ಲಿ ಕೊಲೆ ಆರೋಪ: ಅಲ್ಲದೇ ಕೆಲ ವರ್ಷದ ಹಿಂದೆ ಮಠದಲ್ಲಿ ಓರ್ವ ಬಾಲಕಿಯ ರೇಪ್ ಅಂಡ್ ಮರ್ಡರ್ ಸಹ ಆಗಿದೆ ಎಂದು ಹೇಳಲಾಗಿದ್ದು, ಈ ಬಗ್ಗೆ ಸಂತ್ರಸ್ತ ಬಾಲಕಿಯರಿಂದ ಹೇಳಿಕೆ ಪಡೆದು, ಆಂಧ್ರ ಪ್ರದೇಶಕ್ಕೆ ತೆರಳಿದ್ದ ಪೊಲೀಸ್ ತಂಡ ಹಲವು ಮಾಹಿತಿಗಳನ್ನು ಕಲೆ ಹಾಕಿದೆ. ಮಠದ ಹಾಸ್ಟೆಲ್‌ನಲ್ಲಿದ್ದ ಮತ್ತಷ್ಟು ಮಕ್ಕಳ ವಿಚಾರಣೆ ನಡೆಸಲಾಗುತ್ತಿದ್ದು, ಶ್ರೀಗಳ ವಿರುದ್ಧ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಚಿತ್ರದುರ್ಗ ಎಸ್ಪಿ ಪರಶುರಾಮ್, ಅಕ್ಟೋಬರ್ 27 ರಂದೇ ತನಿಖಾಧಿಕಾರಿ ಅನಿಲ್ ಎರಡನೇ ಹೆಚ್ಚುವರಿ ಸೆಷನ್ಸ್ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಚಾರ್ಜ್‌ಶೀಟ್‌ನ ಸಿಸಿ ನಂಬರ್ ಬರುವುದು ಬಾಕಿಯಿದೆ. ಈ ಮಧ್ಯೆ, ಡಾ.ಶಿವಮೂರ್ತಿ ಮುರುಘಾ ಶರಣರು, ವಾರ್ಡನ್ ರಶ್ಮಿ ಮತ್ತು ಪರಮಶಿವಯ್ಯ ▶ 6ನೇ ಪುಟಕ್ಕೆ

ರಾಹುಲ್, ಸೋನಿಯಾಗೆ ಮತ್ತೆ ಇಡಿ ಸಮನ್ಸ್

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಿಂದ ಗಾಂಧಿ ಕುಟುಂಬಕ್ಕೆ ಸದ್ಯಕ್ಕೆ ಮುಕ್ತಿ ದೊರೆತಂತೆ ಕಾಣುತ್ತಿಲ್ಲ. ಕಾಂಗ್ರೆಸ್ ಒಡೆತನದ ಯಂಗ್ ಇಂಡಿಯನ್‌ನಲ್ಲಿ ಸಂಶಯಾಸ್ಪದ ವಹಿವಾಟುಗಳು ನಡೆದಿದ್ದು, ಜಾರಿ ನಿರ್ದೇಶನಾಲಯ ಮತ್ತೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರಿಗೆ ಸಮನ್ಸ್ ನೀಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.



ಶೆಲ್ ಕಂಪನಿಗಳ ಮೂಲಕ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸುಮಾರು 4ರಿಂದ 5 ಕೋಟಿ ರೂ.ಗಳ ವಹಿವಾಟು ನಡೆದಿದೆ. ಈ ಹೇಳಿಕೆಯನ್ನು ಇ.ಡಿ ದಾಖಲಿಸಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಪವನ್ ಬನ್ಸಾಲ್, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸೇರಿದಂತೆ ಯಂಗ್ ಇಂಡಿಯನ್‌ನ ಎಲ್ಲಾ ಪದಾಧಿಕಾರಿಗಳನ್ನು ಶೀಘ್ರದಲ್ಲೇ ವಿಚಾರಣೆಗೆ ಕರೆಸಲಾಗುತ್ತದೆ. ಜೊತೆಗೆ ಅನುಮಾನಾಸ್ಪದ ▶ 6ನೇ ಪುಟಕ್ಕೆ

ಹತ್ಯೆಯಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅಂತ್ಯಕ್ರಿಯೆ

ಮೈಸೂರು, ನ. 7 (ಆರ್‌ಕೆ)– ಶುಕ್ರವಾರ ಸಂಜೆ ಹತ್ಯೆಗೀಡಾಗಿದ್ದ ನಿವೃತ್ತ, ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ (ಐಬಿ) ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು.



ಪತ್ನಿ, ಪುತ್ರ, ಪುತ್ರಿ, ಸಂಬಂಧಿಕರಿಂದ ಅಂತಿಮ ವಿಧಿ–ವಿಧಾನಗಳು ನೆರವೇರಿದ ನಂತರ ಬೆಳಗ್ಗೆ 10.45 ಗಂಟೆಗೆ ಕುಲಕರ್ಣಿ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಭಾನುವಾರ ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ದೇಹವನ್ನು ಹಸ್ತಾಂತರಿಸಲಾಗಿತ್ತಾದರೂ, ವಿದೇಶದಿಂದ ಪುತ್ರ, ಪುತ್ರಿ ಬರಬೇಕಾಗಿದ್ದರಿಂದ ಕುಲಕರ್ಣಿ ಅವರ ದೇಹವನ್ನು ಖಾಸಗಿ ಆಸ್ಪತ್ರೆ ಶವಾಗಾರದ ಫ್ರೀಜರ್‌ನಲ್ಲಿ ಇರಿಸಲಾಗಿತ್ತು.

ನಿನ್ನೆ ಸಂಜೆ ಪುತ್ರ, ಇಂದು ಮುಂಜಾನೆ ಪುತ್ರಿ ಮೈಸೂರು ತಲುಪಿದ ನಂತರ ಬೆಳಗ್ಗೆ 8 ಗಂಟೆಗೆ ಆಸ್ಪತ್ರೆಯಿಂದ ಮನೆಗೆ ಕುಲಕರ್ಣಿ ಅವರ ಪಾರ್ಥಿವ ಶರೀರ ತಂದು, ಕೆಲ ಸಮಯ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಈ ವೇಳೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ, ಔಟ್‌ಲುಕ್ ಮ್ಯಾಗ್‌ಝೀನ್ ಮಾಜಿ ಸಂಪಾದಕ ಕೃಷ್ಣ ಪ್ರಸಾದ್, ರೋಟೇರಿಯನ್‌ಗಳು ಸೇರಿ ಹಲವರು ಅಂತಿಮ ದರ್ಶನ ಪಡೆದರು. ಬೆಳಗ್ಗೆ 10 ಗಂಟೆಗೆ ಪಾರ್ಥಿವ ಶರೀರವನ್ನು ಹರಿಶ್ಚಂದ್ರ ಘಾಟ್‌ಗೆ ಸಾಗಿಸಿ, ಅಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನನಗೆ ಕ್ಷೇತ್ರದ ಸಮಸ್ಯೆ ಇಲ್ಲ; ಎಲ್ಲಿಂದ ಸ್ಪರ್ಧಿಸಬೇಕೆಂದು ನಿರ್ಧರಿಸಬೇಕಷ್ಟೇ...

● ವಿಪಕ್ಷ ನಾಯಕ ಸಿದ್ದರಾಮಯ್ಯ ಸ್ಪಷ್ಟನೆ ● ಬಿಜೆಪಿ ಆರೋಪಗಳಿಗೆ ತೀಕ್ಷ್ಣ ಪ್ರತಿಕ್ರಿಯೆ



ಬೆಂಗಳೂರು ನ. 7(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಕ್ಷೇತ್ರದ ಸಮಸ್ಯೆ ಇಲ್ಲ. ಆದರೆ ನಾನು ಎಲ್ಲಿ ಸ್ಪರ್ಧಿಸಬೇಕು ಎನ್ನುವುದರ ಬಗ್ಗೆ ಮುಂದಿನ ದಿನಗಳಲ್ಲಿ ಬಹಿರಂಗಪಡಿಸುವುದಾಗಿ ವಿಧಾನಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ ಎಂಬುದರ ಬಗ್ಗೆ ಚರ್ಚೆ ನಡೆದಿದೆ. ನಾನು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ವಿಧಾನ ಸಭೆಗೆ ಆಯ್ಕೆಯಾಗುತ್ತೇನೆ. ಆಡಳಿತಾರೂಢ ಬಿಜೆಪಿಗೆ ಮಾಡಲು ಕೆಲಸವಿಲ್ಲ. ನಾನು ಸ್ಪರ್ಧಿಸುವ ವಿಚಾರದ ಬಗ್ಗೆ ಅಪಪ್ರಚಾರ ಮಾಡಿ ರಾಜಕೀಯ ಲಾಭ ಪಡೆಯುತ್ತಿದೆ ಎಂದು ದೂರಿದರು.

ನನಗೆ ಕ್ಷೇತ್ರದ ಕೊರತೆ ಇದ್ದರೆ ನಮ್ಮಲ್ಲಿ ಸ್ಪರ್ಧಿಸಿ ಎಂಬ ಆಹ್ವಾನ ಬರುತ್ತಿರಲಿಲ್ಲ ಎಂದು ಹೇಳಿದ್ದಾರೆ. ವರುಣಾ, ಕೋಲಾರ, ಚಾಮರಾಜಪೇಟೆ, ಬಾದಾಮಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನನಗೆ ಆಹ್ವಾನವಿದೆ. ನನಗೆ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರವೇ ಇಲ್ಲದೆ ಹೋದರೆ ನನ್ನನ್ನು ಬೇರೆ ಕಡೆಗಳಲ್ಲಿ ಬಂದು ಇಲ್ಲಿಂದಲೇ ಸ್ಪರ್ಧೆ ಮಾಡಿ ಎಂದು ಕರೆಯುತ್ತಾರಾ? ಎಂದು ಪ್ರಶ್ನಿಸಿದರು.

ಬಾದಾಮಿಯಿಂದಲೇ ಸ್ಪರ್ಧೆ ಮಾಡುವಂತೆ ನನಗೆ ಒತ್ತಾಯ ಮಾಡುತ್ತಿದ್ದಾರೆ. ಸಾವಿರಾರು ಜನ ಮಹಿಳೆಯರು ಬಂದು ನಮ್ಮ ಮುಂದೆ ಕೂತುಕೊಳ್ಳೇವೆ ಎಂದು ನಾಯಕರುಗಳು ಪತ್ರ ಬರೆದಿದ್ದಾರೆ. ಆದರೆ ನನ್ನ ಯೋಚನೆ ಏನೆಂದರೆ ಪ್ರತಿ ವಾರಕ್ಕೊಮ್ಮೆ ಬಾದಾಮಿ ಕ್ಷೇತ್ರಕ್ಕೆ ಭೇಟಿ ನೀಡಿ, ಕಾರ್ಯಕರ್ತರನ್ನು ಭೇಟಿಯಾಗಿ, ಜನರ ಸಮಸ್ಯೆಗಳಿಗೆ ತತ್‌ಕ್ಷಣದಲ್ಲಿ ಸ್ಪಂದನೆ ನೀಡಲು ಸಾಧ್ಯವಾಗುವುದಿಲ್ಲ ಎಂದರು.

ಆದರೆ ಜನ ನೀವು ನಿರಂತರ ಭೇಟಿ ನೀಡದಿದ್ದರೂ ಪರವಾಗಿಲ್ಲ ಇಲ್ಲಿಂದಲೇ ಸ್ಪರ್ಧೆ ಮಾಡಿ ಎಂದು ಹೇಳಬಹುದು. ಆದರೆ ನನ್ನ ಮನಸ್ಸು ಇದಕ್ಕೆ ಒಪ್ಪುತ್ತಿಲ್ಲ. ನಾನು ಬಾದಾಮಿಗೆ ಹೋಗದೆ 2 ತಿಂಗಳು ಕಳೆದಿದೆ. ನಾಳೆ ಭೇಟಿ ನೀಡಬೇಕು ಎಂದುಕೊಂಡಿದ್ದೆ ಬೇರೆ ಯಾವುದೋ ತುರ್ತು ಕೆಲಸ ಬಂದಿರುವುದರಿಂದ ನಾಳೆಯೂ ಹೋಗಲು ಆಗಲ್ಲ ಎಂದರು.

ಕೋಲಾರದಿಂದ ಸ್ಪರ್ಧೆ ಮಾಡಿ ಎಂದು ಕರೆಯುತ್ತಿ ದ್ದಾರೆ. ವರುಣಾದಿಂದ ಸ್ಪರ್ಧೆಮಾಡಿ ಎಂದು ನನ್ನ ಪುತ್ರ ಡಾ. ಯತೀಂದ್ರ ಹೇಳುತ್ತಿದ್ದಾರೆ. ಚಾಮರಾಜಪೇಟೆಯಿಂದ ಸ್ಪರ್ಧೆ ಮಾಡುವಂತೆ ಜಮೀರ್ ಅಹಮದ್ ▶ 8ನೇ ಪುಟಕ್ಕೆ

❝ ನಾನು ಎಲ್ಲಿಂದ ಚುನಾವಣೆಗೆ ನಿಲ್ಲಬೇಕು ಎಂದು ನಮ್ಮ ಪಕ್ಷ ತೀರ್ಮಾನ ಮಾಡುತ್ತದೆ. ಜೆಡಿಎಸ್ ಪಕ್ಷ ಅಲ್ಲ. ಆತ್ಮೀಯನಾಗಿ ಬೇಕಾದರೆ ವೈಯಕ್ತಿಕವಾಗಿ ಭೇಟಿ ಮಾಡಿ ಸಲಹೆ ನೀಡಲಿ. ಹಾಲಿ ಶಾಸಕರ ಟಿಕೆಟ್ ತಪ್ಪಿಸಿ ಇಬ್ರಾಹಿಂ ಅವರಿಗೆ ಭದ್ರಾವತಿಯಲ್ಲಿ ಟಿಕೆಟ್ ನೀಡಿದ್ದೆವು. ಆದರೆ ಭದ್ರಾವತಿಯಲ್ಲಿ ಡೆಪಾಸಿಟ್ ಕಳೆದುಕೊಂಡಿದ್ದರು ಅಂದರೆ ಅವರ ಲೆಕ್ಕಾಚಾರ ಸರಿಯಿಲ್ಲ ಎಂದರ್ಥವಲ್ಲವೇ? ನನ್ನ ಜೊತೆ ಇಷ್ಟೊಂದು ಜನ ಶಾಸಕರು, ಪಕ್ಷದ ಹಿರಿಯ ನಾಯಕರು, ಎಲ್ಲಾ ಜಾತಿ ಧರ್ಮಗಳ ನಾಯಕರು ಇದ್ದಾರೆ. ಒಬ್ಬಂಟಿಯಾಗಿದ್ದರೆ ಇವರೆಲ್ಲ ನನ್ನ ಜೊತೆ ಇಲ್ಲಿ ಇರುತ್ತಿದ್ದರಾ? ಜನಾರ್ದನ ರೆಡ್ಡಿಯವರು ಕಾಂಗ್ರೆಸ್ ಸೇರುವ ಬಗ್ಗೆ ನಮ್ಮ ಜೊತೆ ಮಾತನಾಡಿಲ್ಲ. ಈ ಬಗ್ಗೆ ಮಾತುಕತೆ ನಡೆಸದೆ ಸುಮ್ಮನೆ ಏನೋ ಉತ್ತರ ಕೊಡೋಕೆ ಬರಲ್ಲ.

–ಸಿದ್ದರಾಮಯ್ಯ, ವಿಪಕ್ಷ ನಾಯಕ

FOR SALE
Layout by ARAMANE NAGARA DEVELOPERS
"Commercial Sites Available"
attached to NH 275
Mysore-Madikeri Highway, Near Yelwala.
For more details contact
95131 57993, 74062 84792

ಸ್ವಯಂ ಉದ್ಯೋಗಕ್ಕೆ ಮೀಸಲಾದ 89 ಲಕ್ಷ ರೂ. ದುರುಪಯೋಗ

ಮೈಸೂರು, ನ. 7– ಇದು ಬೇಲಿಯೇ ಎದ್ದು ಹೊಲ ಮೇಯ್ದು ಕಥೆ. ಮೈಸೂರಿನ ಪ್ರವಾಸೋದ್ಯಮ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಮತ್ತು ಡಿಟಿಸಿ ಸೇರಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಇಲಾಖೆಯ 89 ಲಕ್ಷ ರೂ. ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ಇಬ್ಬರು ಸಿಬ್ಬಂದಿ ವಿರುದ್ಧ ಕೇಸ್ ದಾಖಲು

ಕ್ರೈಂ ಬಾಕ್ಸ್

ಮೈಸೂರು ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿ ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ 2–3 ಲಕ್ಷದವರೆಗೆ ಸಹಾಯಧನ ನೀಡುವ ಸಲುವಾಗಿ ಕಳೆದ ಫೆಬ್ರವರಿಯಲ್ಲಿ ಅರ್ಜಿ ಕರೆಯಲಾಗಿತ್ತು. ಜುಲೈ ತಿಂಗಳಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ನಡೆದು 117 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. ಅವರಲ್ಲಿ 78 ಫಲಾನುಭವಿಗಳಿಗೆ 1.79 ಕೋಟಿ ರೂ. ಸಹಾಯಧನ ವಿತರಣೆ ಮಾಡಲಾಗಿತ್ತು.

ಈ ಮಧ್ಯೆ ಫಲಾನುಭವಿಗಳ ಆಯ್ಕೆಗೂ ಮುನ್ನವೇ ಜನವರಿಯಿಂದ ಜುಲೈವರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇರುವ ಹಾಗೂ ಇಲಾಖೆಯ ಫಲಾನುಭವಿಗಳಲ್ಲದ 43 ವ್ಯಕ್ತಿಗಳ ಹೆಸರು ಹಾಗೂ ವಿಳಾಸಗಳನ್ನು ನಮೂದಿಸಿ ಪ್ರವಾಸೋದ್ಯಮ ಇಲಾಖೆಯ ಲೆಟರ್‌ಹೆಡ್ ಸೇರಿದಂತೆ ದಾಖಲಾತಿಗಳನ್ನು ನಕಲಿಯಾಗಿ ಸೃಷ್ಟಿಸಿಕೊಂಡು ಇಲಾಖೆಯ ಸಹಾಯಕ ನಿರ್ದೇಶಕ ರಾಘವೇಂದ್ರ ಅವರ ಸಹಿಯನ್ನೂ ಕೂಡ ಫೋರ್ಜರಿ ಮಾಡಿ ಪ್ರಥಮ ದರ್ಜೆ ಸಹಾಯಕ ಅಭಿಷೇಕ್ ಮತ್ತು ಹಿಂದಿನ ಡಿಟಿಸಿ ಉಮೇಶ್ ನರಗುಂದ ಇತರರು 89 ಲಕ್ಷ ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಲಾಗಿದೆ. ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 120ಬಿ, 409, 420, 465, 468, 471, 34ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಚಿತ್ರ ನಿರ್ಮಾಣದಲ್ಲಿ ಹಣ ಹೂಡಿ ಲಾಭದ ಆಮಿಷ; 27.64 ಲಕ್ಷ ವಂಚನೆ

ಮೈಸೂರು, ನ. 7–ಚಲನಚಿತ್ರ ನಿರ್ಮಾಣ ವ್ಯವಹಾರದಲ್ಲಿ ಹಣ ತೊಡಗಿಸುವುದಾಗಿ ನಂಬಿಸಿ ವ್ಯಕ್ತಿಯೋರ್ವರಿಂದ ಒಂದೇ ಕುಟುಂಬದ ಮೂವರು 27.64 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿವೇಕಾನಂದ ಸರ್ಕಲ್ ನಿವಾಸಿ ಕೆ.ಎಸ್.ಸಿದ್ದಾರ್ಥ(33) ವಂಚನೆಗೊಳಗಾದವರಾಗಿದ್ದು, ಇವರು ಈ ಹಿಂದೆ ಕುವೆಂಪುನಗರದ ಗಗನಚುಂಬಿ ರಸ್ತೆಯಲ್ಲಿರುವ ಸುಂದರಂ ಫೈನಾನ್ಸ್‌ನಲ್ಲಿ ಬ್ಯುಸಿನೆಸ್ ಡೆವಲಪ್‌ಮೆಂಟ್ ಆಫೀಸರ್ ಆಗಿದ್ದು, ಅಲ್ಲಿ ಕೆಲಸ ಮಾಡುತ್ತಿದ್ದಾಗ ಅದೇ ಕಂಪನಿಯಲ್ಲಿ ಕ್ಲಸ್ಟರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಶ್ರೀಧರ್.ಎಸ್ ನವುಂದ ಅವರು ತಮ್ಮ ಸಹೋದರ ಭರತ್ ಎಸ್. ನವುಂದ ಮತ್ತು ಸಹೋದರಿ ನಾಗರತ್ನ ಎಸ್. ನವುಂದ ಅವರುಗಳು ಚಲನಚಿತ್ರ ನಿರ್ಮಾಣ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿ ಲಾಭ ಗಳಿಸುತ್ತಿದ್ದಾರೆ ಎಂದು ನಂಬಿಸಿ ಸಿದ್ಧಾರ್ಥ ಅವರಿಂದ 2021ರ ಜುಲೈ 27ರಿಂದ 2022ರ ಫೆ.1ರವರೆಗೆ 55 ಲಕ್ಷ ರೂ.ಗಳನ್ನು ಪಡೆದಿದ್ದಾರೆ. ನಂತರ 27,35,800 ರೂ. ಮಾತ್ರ ಹಿಂತಿರುಗಿಸಿದ್ದು, ಉಳಿದ 27,64,200 ರೂ. ನೀಡದೇ ವಂಚಿಸಿದ್ದಾರೆ. ತಮ್ಮ ಹಣ ಹಿಂತಿರುಗಿಸುವಂತೆ ಕೇಳಿದಾಗ ಮೂವರು ಆರೋಪಿಗಳು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುತ್ತಿದ್ದಾರೆ.

ಪ್ರಧಾನಿ ಮೋದಿ ಖಾಸಗಿ ಸೆಕ್ಯೂರಿಟಿ ಆಫೀಸರ್ ಎಂದು ಹೇಳಿ ಗೃಹಿಣಿಗೆ ವಂಚನೆ

ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ 12 ಲಕ್ಷ ಮೋಸ

ಮೈಸೂರು, ನ. 7– ಮಕ್ಕಳಿಗೆ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಗೃಹಿಣಿಗೆ ದಂಪತಿ 12 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ಸರಸ್ವತಿಪುರಂನಲ್ಲಿ ವಾಸವಿದ್ದ ಮುರಳಿ ಗೌಡ(46) ಮತ್ತು ವೀಣಾ(37) ದಂಪತಿ ಆರೋಪಕ್ಕೆ ಗುರಿಯಾದವರಾಗಿದ್ದಾರೆ.

ಇವರು ಹುಣಸೂರಿನ ಶಾರದಾದೇವಿನಗರದಲ್ಲಿ ವಾಸವಾಗಿದ್ದ ಗೃಹಿಣಿ ಎಂ.ಎನ್.ನೇತ್ರಾವತಿ (53) ಅವರನ್ನು ಪರಿಚಯ ಮಾಡಿಕೊಂಡಿದ್ದಾರೆ.

ಮುರಳಿಗೌಡ ಪ್ರಧಾನಿ ನರೇಂದ್ರ ಮೋದಿ ಅವರ ಪರ್ಸನಲ್ ಸೆಕ್ಯೂರಿಟಿ ವಿಂಗ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿಯೂ ಆತನಿಗೆ ಮಲ್ಟಿನ್ಯಾಷನಲ್ ಕಂಪನಿಯ ಸಿಇಒಗಳು ಪರಿಚಯವಿರುವುದಾಗಿಯೂ ನಂಬಿಸಿದ್ದಾರೆ. ನೇತ್ರಾವತಿ ಮಕ್ಕಳಾದ ನಾಗರಾಜೇ ಅರಸ್ ಹಾಗೂ ಈಶ್ವರರಾಜೇ ಅರಸ್ ಅವರಿಗೆ ತಿಂಗಳಿಗೆ 2 ಲಕ್ಷ ರೂ. ಸಂಬಳ ಬರುವಂತಹ ಕೆಲಸ ಕೊಡಿಸುವುದಾಗಿ ತಿಳಿಸಿ 2021ರ ಅಕ್ಟೋಬರ್ 4 ಮತ್ತು 18ರಂದು ಎರಡು ಹಂತಗಳಲ್ಲಿ ಒಟ್ಟು 12 ಲಕ್ಷ ರೂ. ಪಡೆದಿದ್ದಾರೆ. ಮಕ್ಕಳಿಗೆ ಕೆಲಸ ಸಿಗದೇ ಇರುವ ಬಗ್ಗೆ ನೇತ್ರಾವತಿ ಕೇಳಿದಾಗ ದಾಖಲೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿರುವುದಾಗಿ ಸಬೂಬು ಹೇಳುತ್ತಿದ್ದ ದಂಪತಿ ಇತ್ತೀಚೆಗೆ ಸರಸ್ವತಿಪುರಂನ ಮನೆಯನ್ನು ಖಾಲಿ ಮಾಡಿಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ನೇತ್ರಾವತಿ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಇದೇ ದಂಪತಿ ಕೆ.ಆರ್.ನಗರ ತಾಲೂಕು ಮಾವತ್ತೂರು ಗ್ರಾಮದ ಗೃಹಿಣಿ ಸಾವಿತ್ರಮ್ಮಣಿ ಎಂಬವರ ಮಗನಿಗೆ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 10.94 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ಈಗಾಗಲೇ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿಯ ಸರ ಕಳವು

ಮೈಸೂರು,ನ.7–ಗೃಹಿಣಿಯೊಬ್ಬರ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಸಿದ್ಧಾರ್ಥನಗರ ಆನಂದಮಾರ್ಗದಲ್ಲಿ ನಡೆದಿದೆ. ಸಿದ್ಧಾರ್ಥನಗರ ಸನ್ಮಾರ್ಗ ರಸ್ತೆ ನಿವಾಸಿ ಶ್ರೀಮತಿ ಎಲಿಜಬೆತ್(60) ಸರ ಕಳೆದುಕೊಂಡವರಾಗಿದ್ದು, ಇವರು ನ.5ರಂದು ಬೆಂಗಳೂರಿಗೆ ತೆರಳಿ ಸಂಜೆ



7.10ರ ಸಮಯದಲ್ಲಿ ಹಿಂತಿರುಗಿ ಮನೆಗೆ ಹೋಗಲು ಆನಂದಮಾರ್ಗದ 7ನೇ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಸರಗಳ್ಳರು ಇವರ ಕತ್ತಿನಲ್ಲಿದ್ದ 50 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಗನವಾಡಿ ಕೇಂದ್ರದಲ್ಲಿ ಸಿಲಿಂಡರ್ ಕಳವು

ಮೈಸೂರು, ನ. 7– ಅಂಗನವಾಡಿ ಕೇಂದ್ರದ ಬೀಗ ಮುರಿದು ಗ್ಯಾಸ್ ಸಿಲಿಂಡರ್‌ಗಳನ್ನು ಕಳವು ಮಾಡಿರುವ ಪ್ರಕರಣ ಮೈಸೂರು ತಾಲೂಕು ನಾಡನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಅಂಗನವಾಡಿ ಎರಡನೇ ಕೇಂದ್ರದ ಸಹಾಯಕಿ ಪ್ರೇಮಾ ಅವರು ನ.4ರಂದು ಕೇಂದ್ರಕ್ಕೆ ಬೀಗ ಹಾಕಿಕೊಂಡು ಹೋಗಿದ್ದು, ಮರುದಿನ ಬೆಳಗ್ಗೆ ಆಗಮಿಸಿದಾಗ ಕೇಂದ್ರದ ಬೀಗ ಮುರಿದು ಎರಡು ಸಿಲಿಂಡರ್‌ಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧನ ಎಟಿಎಂ ಕಾರ್ಡ್ ಬದಲಾಯಿಸಿ 33 ಸಾವಿರ ಡ್ರಾ ಮಾಡಿಕೊಂಡು ವಂಚನೆ

ಹೆಚ್.ಡಿ.ಕೋಟೆ, ನ. 7– ಎಟಿಎಂನಲ್ಲಿ ಹಣ ಡ್ರಾ ಮಾಡುತ್ತಿದ್ದ ವೇಳೆ ವೃದ್ಧರೊಬ್ಬರ ಗಮನ ಬೇರೆಡೆ ಸೆಳೆದು ಎಟಿಎಂ ಕಾರ್ಡ್ ಬದಲಾಯಿಸಿ 33 ಸಾವಿರ ರೂ. ಡ್ರಾ ಮಾಡಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಹೆಚ್.ಡಿ.ಕೋಟೆಯ ಆಸ್ಪತ್ರೆ ಬಡಾವಣೆ ನಿವಾಸಿ ನಿವೃತ್ತ ಎಫ್‌ಡಿಎ ಹೆಚ್.ಎಸ್. ವಾಸುದೇವ (69) ಅವರು ಅ.27ರಂದು ಸಂಜೆ ಹೆಚ್.ಡಿ.ಕೋಟೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಕರ್ನಾಟಕ ಬ್ಯಾಂಕ್ ಎಟಿಎಂನಲ್ಲಿ 5 ಸಾವಿರ ರೂ. ಡ್ರಾ ಮಾಡಿದ್ದಾರೆ. ಆ ವೇಳೆ ಅವರ ಹಿಂದೆ ನಿಂತಿದ್ದ ವ್ಯಕ್ತಿ, ವೃದ್ಧರ ಗಮನ ಬೇರೆಡೆ ಸೆಳೆದು ಎಟಿಎಂ ಕಾರ್ಡನ್ನು ಬದಲಾಯಿಸಿದ್ದಾನೆ. ಅಂದು ಮತ್ತು ಮರುದಿನ ಎರಡು ಹಂತಗಳಲ್ಲಿ ಅವರ ಖಾತೆಯಿಂದ 33 ಸಾವಿರ ರೂ. ಕಡಿತಗೊಂಡಿದೆ. ಈ ಸಂಬಂಧ ವಾಸುದೇವ ಅವರು ನ.5ರಂದು ನೀಡಿದ್ದ ದೂರನ್ನು ದಾಖಲಿಸಿಕೊಂಡಿರುವ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಲಬಾರ್ ಚಾರಿಟಬಲ್ ಟ್ರಸ್ಟ್‌ನಿಂದ ವಿದ್ಯಾರ್ಥಿವೇತನ ವಿತರಣೆ

ಶಿಕ್ಷಣ ಮೊಟಕುಗೊಳಿಸದೆ ಕಷ್ಟಪಟ್ಟು ಓದಿ, ಉತ್ತಮ ಅಂಕ ಗಳಿಸಿ: ಯದುವೀರ್




ಮೈಸೂರು, ನ.7(ಆರ್‌ಕೆಬಿ)– ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮೈಸೂರು ಸಂಸ್ಥೆಯ ಮಲಬಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ಜಿಲ್ಲೆಯ ವಿವಿಧ ಸರ್ಕಾರಿ ಕಾಲೇಜುಗಳ 357 ವಿದ್ಯಾರ್ಥಿನಿಯರಿಗೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿದ್ಯಾರ್ಥಿ ವೇತನ ವಿತರಿಸಿದರು.

> “ಪಾರಂಪರಿಕ ಕಟ್ಟಡಗಳ ಸರ್ವೆ ನಡೆಸಲಾಗುತ್ತಿರುವುದು ಉತ್ತಮ ಬೆಳವಣಿಗೆ, ಪಾರಂಪರಿಕ ಕಲೆ ಉಳಿಸಲು ಅವರು ಸರಿಯಾದ ಕೆಲಸ ಮಾಡುತ್ತಿದ್ದಾರೆ. ಇಡೀ ದೇಶಕ್ಕೆ ಒಂದು ಪಾರಂಪರಿಕ ಕಟ್ಟಡ ಉಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಅನ್ವಯವಾಗುವಂತಹ ಕಾನೂನು ರೂಪಿಸಬೇಕು. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಆಗಬೇಕು.
> **–ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್**

ನಂತರ ಮಾತನಾಡಿದ ಅವರು, ಮೈಸೂರು ಪಾರಂಪರಿಕ ಕಟ್ಟಡಗಳಿರುವ ಸುಂದರ ನಗರ. ಅದರ ಸಂರಕ್ಷಣೆಗೆ ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಸಂದೇಶ ನೀಡಿದರು. ಶಿಕ್ಷಣದ ಮಹತ್ವದ ಬಗ್ಗೆ ಮನದಟ್ಟು ಮಾಡಿಕೊಟ್ಟ ಅವರು, ವಿದ್ಯಾರ್ಥಿನಿಯರು ತಮಗೆ ಸಿಕ್ಕಿದ ವಿದ್ಯಾರ್ಥಿವೇತನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಶಿಕ್ಷಣವನ್ನು ಮೊಟಕುಗೊಳಿಸದೆ ಕಷ್ಟಪಟ್ಟು ಓದಿ, ಅತ್ಯುತ್ತಮ ಅಂಕ ಗಳಿಸಿ, ದೇಶದ ಉತ್ತಮ ಪ್ರಜೆಯಾಗಿ ರೂಪುಗೊಳ್ಳಬೇಕು ಎಂಬ ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಕಾಲೇಜು ಅಧ್ಯಾಪಕರುಗಳೊಂದಿಗೆ ಪ್ರತಿಭಾವಂತ ವಿದ್ಯಾರ್ಥಿನಿಯರು, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮೈಸೂರು ಶಾಖೆಯ ಸ್ಟೋರ್ ಮುಖ್ಯಸ್ಥ ಪಿ.ಶರಫುದ್ದೀನ್, ಸ್ಟೋರ್ ಸಹಾಯಕ ಮುಖ್ಯಸ್ಥ ಫಜ್ಲಲ್ ಇನ್ನಿತರರು ಉಪಸ್ಥಿತರಿದ್ದರು.

ನ.14ರಿಂದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ

ಮೈಸೂರು, ನ.7–ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ನ.14ರಿಂದ 20ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ರಾಜ್ಯಾದ್ಯಂತ ಆಚರಿಸಲಾಗುತ್ತಿದ್ದು ಮೈಸೂರು ನಗರ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಸಂಯುಕ್ತಾಶ್ರಯದಲ್ಲಿ ನಜರ್‌ಬಾದ್ ಪೀಪಲ್ಸ್ ಪಾರ್ಕ್ ನಗರ ಕೇಂದ್ರ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ನ.13 ಭಾನುವಾರದಂದು ಬೆಳಿಗ್ಗೆ 10.30ರಿಂದ 1ರವರೆಗೆ ನಗರ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಶಾಲಾ ಕಾಲೇಜು ಫೈನ್ ಆರ್ಟ್ಸ್ ಕಾಲೇಜು ವಿದ್ಯಾರ್ಥಿಗಳಿಗಾಗಿ ಚಿತ್ರಕಲೆ ಹಾಗೂ ಭಿತ್ತಿಪತ್ರಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಆಸಕ್ತರು ನ.10 ಸಂಜೆ 5 ಗಂಟೆಯ ಒಳಗಾಗಿ ನಗರ ಕೇಂದ್ರ ಗ್ರಂಥಾಲಯದಲ್ಲಿ ನೇರವಾಗಿ ನೋಂದಾಯಿಸಬಹುದು ಅಥವಾ ದೂರವಾಣಿ ಸಂಖ್ಯೆ: 0821–2423678 ಮತ್ತು 0821–2430343 ಕಚೇರಿ ವೇಳೆಯಲ್ಲಿ ರಜಾದಿನ ಹೊರತುಪಡಿಸಿ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು.

ಜೂನಿಯರ್ ವಿಭಾಗ 1ನೇ ತರಗತಿಯಿಂದ 3ನೇ ತರಗತಿ ಮಕ್ಕಳು ವಿಷಯ: ಪ್ರಕೃತಿ ಚಿತ್ರಣ, ಸಬ್ ಜೂನಿಯರ್ ವಿಭಾಗ 4ನೇ ತರಗತಿಯಿಂದ 6ನೇ ತರಗತಿ ಮಕ್ಕಳು ವಿಷಯ: ನಾನು ಮತ್ತು ಪುಸ್ತಕ, ಸೀನಿಯರ್ ವಿಭಾಗ 7ನೇ ತರಗತಿಯಿಂದ 10ನೇ ತರಗತಿ ಮಕ್ಕಳು ವಿಷಯ: ನನ್ನ ಕಲ್ಪನೆಯ ಗ್ರಂಥಾಲಯ, ಮಾಸ್ಟರ್ ವಿಭಾಗ ಕಲಾ ಶಾಲೆ ಹಾಗೂ ಇತರ ಕಾಲೇಜು ವಿದ್ಯಾರ್ಥಿಗಳು ವಿಷಯ: ಬಿತ್ತಿ ಪತ್ರ ಡಿಜಿಟಲ್ ಗ್ರಂಥಾಲಯ.

ಪ್ರತಿ ವಿಭಾಗದಲ್ಲಿ 3 ಬಹುಮಾನಗಳಿದ್ದು ನ.14ರಂದು ಬೆಳಗ್ಗೆ 11 ಗಂಟೆಗೆ ನಗರ ಕೇಂದ್ರ ಗ್ರಂಥಾಲಯದಲ್ಲಿ ಜರುಗುವ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಬಹುಮಾನಗಳನ್ನು ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಗುವುದು ಭಾಗವಹಿಸುವ ಎಲ್ಲಾ ಸ್ಪರ್ಧಿಗಳಿಗೆ ಪ್ರಮಾಣ ಪತ್ರ ನೀಡಲಾಗುವುದು. ಚಿತ್ರಕಲೆ ಹಾಗೂ ಬಿತ್ತಿಪತ್ರ ಸ್ಪರ್ಧೆಗೆ ಪ್ರವೇಶ ಉಚಿತವಾಗಿದ್ದು, ಎಲ್ಲಾ ಸ್ಪರ್ಧಿಗಳಿಗೆ ಡ್ರಾಯಿಂಗ್ ಶೀಟ್ ಮಾತ್ರ ಒದಗಿಸಲಾಗುವುದು. ಉಳಿದ ಸಾಮಗ್ರಿಗಳನ್ನು ತಾವೇ ತರಬೇಕು ನೋಂದಾಯಿಸಿದ ಸ್ಪರ್ಧಿಗಳು ಸ್ಪರ್ಧೆಯ ದಿನದಂದು 40 ನಿಮಿಷಗಳ ಮುಂಚೆ ಸ್ಥಳದಲ್ಲಿ ಹಾಜರಿರುವುದು ಕಡ್ಡಾಯವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ಆಕ್ಯುಪ್ರೆಶರ್, ಸುಜೋಕ್ ಥೆರಪಿ ಉಚಿತ ಶಿಬಿರ ಸಪ್ತಾಹ

ಮೈಸೂರು, ನ.7(ಆರ್‌ಕೆಬಿ)– ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಮತ್ತು ಮೈಸೂರು ವೆಸ್ಟ್ ಇನ್ನರ್ ವೀಲ್ ಮತ್ತು ವಲಯ 7 ಮತ್ತು 8ರ ಕ್ಲಬ್‌ಗಳು ಜಂಟಿ ಆಶ್ರಯದಲ್ಲಿ ನವೆಂಬರ್ 9 ರಿಂದ 15 ರವರೆಗೆ ರೋಟರಿ ವೆಸ್ಟ್ ಹಾಲ್‌ನಲ್ಲಿ ಆಕ್ಯುಪ್ರೆಶರ್ ಮತ್ತು ಸುಜೋಕ್ ಥೆರಪಿ ವೈದ್ಯಕೀಯ ಶಿಬಿರ ಏರ್ಪಡಿಸಲಾಗಿದೆ.

ಆಕ್ಯುಪ್ರೆಶರ್ ಎನ್ನುವುದು ಅಕ್ಯುಪಂಕ್ಚರ್‌ಗೆ ಸಮಾನವಾದ ಪರ್ಯಾಯ ಔಷಧ ತಂತ್ರವಾಗಿದೆ. ಇದು ದೇಹದಲ್ಲಿ ‘ಮೆರಿಡಿಯನ್ಸ್’ ಮೂಲಕ ಹರಿಯುವ ಜೀವ ಶಕ್ತಿಯ ಪರಿಕಲ್ಪನೆಯನ್ನು ಆಧರಿಸಿದೆ. ಚಿಕಿತ್ಸೆಯಲ್ಲಿ, ಈ ಮೆರಿಡಿಯನ್‌ಗಳಲ್ಲಿನ ಅಡೆತಡೆಗಳನ್ನು ತೆರವುಗೊಳಿಸುವ ಗುರಿಯೊಂದಿಗೆ ಪ್ರಚೋದಕ ಬಿಂದುಗಳಿಗೆ ದೈಹಿಕ ಒತ್ತಡವನ್ನು ಅನ್ವಯಿಸಲಾಗುತ್ತದೆ. ಈ ಚಿಕಿತ್ಸೆಗೆ ಒಳಗಾಗುವುದರಿಂದ, ವಿವಿಧ ಕಾಯಿಲೆಗಳು ಅಂದರೆ ರಕ್ತದೊತ್ತಡ, ಸಕ್ಕರೆ, ಗ್ಯಾಸ್ಟ್ರಬಲ್, ದೇಹ ನೋವು, ಮೊಣಕಾಲು ನೋವು, ಬೆನ್ನು ನೋವು, ಕುತ್ತಿಗೆ ನೋವು, ತಲೆ ನೋವು, ಹೊಟ್ಟೆ ನೋವು, ಮಲಬದ್ಧತೆ, ಅಸ್ತಮಾ ಇತ್ಯಾದಿಗಳಿಂದ ಗುಣಮುಖರಾಗಬಹುದಾಗಿದೆ. ನೈಸರ್ಗಿಕ ಚಿಕಿತ್ಸೆಯಾದ ಇದರಿಂದ ಯಾವುದೇ ಅಡ್ಡಪರಿಣಾಮಗಳಿಲ್ಲ, ಆದ್ದರಿಂದ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ. ಈ ಕಾಯಿಲೆ ಇರುವ ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆಯುವಂತೆ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷ ಉಲ್ಲಾಸ್ ಪಂಡಿತ್ ತಿಳಿಸಿದ್ದಾರೆ.

ಈಗಾಗಲೇ ಅನೇಕ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿರುವ ಜೋಧ್‌ಪುರದ ಡಾ.ಆರ್.ಕೆ.ಶರ್ಮಾ ಈ ಶಿಬಿರ ನಡೆಸುತ್ತಿದ್ದಾರೆ. ಉಚಿತ ಶಿಬಿರವು ಬೆಳಗ್ಗೆ 9 ರಿಂದ 12, ಮಧ್ಯಾಹ್ನ 4ರಿಂದ ಸಂಜೆ 7 ಗಂಟೆಯವರೆಗೆ ನಡೆಯಲಿದೆ.



ಮೈಸೂರಿನ ಬೆಳವಾಡಿಯಲ್ಲಿರುವ ಸೈನಿಕ್ ಅಕಾಡೆಮಿ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಗ್ನಿವೀರರಾಗಿ ಸೈನ್ಯಕ್ಕೆ ಆಯ್ಕೆಯಾಗಿರುವ 72 ಯುವ ಸೈನಿಕರನ್ನು ಅಭಿನಂದಿಸಲಾಯಿತು. ಈ ವೇಳೆ ಹಾಸನದ ತಣ್ಣೀರ್‌ಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎನ್.ಮಂಜೇಗೌಡ, ಜಿ.ಪಂ. ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ಸೈನಿಕ್ ಅಕಾಡೆಮಿ ಅಧ್ಯಕ್ಷ ಶ್ರೀಧರ್, ಅನಿತಾ ಶ್ರೀಧರ್, ಮಾಜಿ ಯೋಧರ ಸಂಘದ ಜಿಲ್ಲಾಧ್ಯಕ್ಷ ದಿವಾಕರ್, ವಸಂತ, ಅನಂತಕುಮಾರ್, ಸುದರ್ಶನ್, ರಮೇಶ್, ಮಲ್ಲೇಶ್, ಗಂಗಾ, ಶ್ವೇತಾ, ರವಿ ಪ್ರಫುಲ್ಲಾ ಇತರರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ. ಎಂ.ಎನ್. ಅನಿಲ್‌ಕುಮಾರ್ ಮಾರ್ಗದರ್ಶನದಲ್ಲಿ ಎಂ.ಸಿ.ಜಗದೀಶ್ ರೇಷ್ಮೆ ವಿಜ್ಞಾನ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.


ಧನಶಕ್ತಿ ಕೋ-ಆಪರೇಟಿವ್ ಸೊಸೈಟಿ ಉದ್ಘಾಟನೆ



ಮೈಸೂರು,ನ.7–ಮೈಸೂರು ಗಾಂಧಿನಗರದಲ್ಲಿ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಸೇರಿ ಸ್ಥಾಪಿಸಿರುವ ಧನಶಕ್ತಿ ಕೋ ಆಪರೇಟಿವ್ ಸೊಸೈಟಿಯನ್ನು ಶಾಸಕ ಎನ್.ಮಹೇಶ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಎಂಸಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷ ಸದಾನಂದ್, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ ಅನಿಲ್ ಥಾಮಸ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಪ್ರಭಾಕರ್ ಶಿಂಧೆ, ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಕಾರ್ಯದರ್ಶಿ ಪರಮಾನಂದ ಎಂ.ಎಸ್, ಧನಶಕ್ತಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾದ ಶರತ್ ಎಸ್. ಉಪಾಧ್ಯಕ್ಷ ರಾಜೇಶ್, ನಿರ್ದೇಶಕರಾದ ಸುರೇಶ್, ವಿಜಯ್, ಸುರೇಂದ್ರ, ವಿಶ್ವಮೂರ್ತಿ, ಮುರಳಿಧರ್, ದಾನಿಯಮ್ಮ, ಮಂಜುನಾಥ್ ದೊರೆ, ಕಸ್ತೂರಿ, ಆರೋಕ್ಯ ಉಪಸ್ಥಿತರಿದ್ದರು.

ಬಿ.ಎಸ್. ನಾಗರಾಜ್ ನಿಧನ



ಮೈಸೂರು,ನ.7– ಮೈಸೂರಿನ ಬ್ಯಾತಹಳ್ಳಿ ಗ್ರಾಮದ ನಿವಾಸಿ ಬಿ.ಎಸ್. ನಾಗರಾಜ್(55) ಹೃದಯಾಘಾತದಿಂದ ಸೋಮವಾರ ನಿಧನರಾದರು. ಮೃತರು ಪತ್ನಿ ಪುಷ್ಪಲತ, ಓರ್ವ ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮಂಗಳವಾರ(ನ.8) ಮಧ್ಯಾಹ್ನ 12 ಗಂಟೆಗೆ ಬ್ಯಾತಹಳ್ಳಿಯ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಹಂಚ್ಯಾ–ಸಾತಗಳ್ಳಿಯಲ್ಲಿ ಎಸ್‌ಟಿಪಿ ಘಟಕ ನಿರ್ಮಾಣ ಸ್ಥಳಕ್ಕೆ ಮುಡಾ ಅಧಿಕಾರಿಗಳ ಭೇಟಿ, ಪರಿಶೀಲನೆ



ಮೈಸೂರು, ನ.7(ಆರ್‌ಕೆಬಿ)– ಮೈಸೂರಿನ ಹೊರವಲಯದ ಹಂಚ್ಯಾ–ಸಾತಗಳ್ಳಿ ಬಿ ವಲಯದ ಉದ್ಯಾನವನದಲ್ಲಿ ಮುಡಾ ನಿರ್ಮಿಸಲು ಉದ್ದೇಶಿಸಿದ್ದ ಕೊಳಚೆ ನೀರಿನ ಸಂಸ್ಕರಣಾ ಘಟಕ (ಎಸ್‌ಟಿಪಿ ಘಟಕ) ಕಾಮಗಾರಿ ಸ್ಥಳಕ್ಕೆ ಮುಡಾ ಅಧಿಕಾರಿಗಳು ಸೋಮವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಎಸ್‌ಟಿಪಿ ಘಟಕ ನಿರ್ಮಾಣ ಕಾಮಗಾರಿಗೆ ಸಾರ್ವಜನಿಕರು ಮತ್ತು ಎಸ್‌ಟಿಎಫ್ ನಿವೃತ್ತ ಅಧಿಕಾರಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಭಾನುವಾರ ಆರಂಭವಾಗಿದ್ದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ.

ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಲಾಗಿದ್ದ ಕಾಮಗಾರಿ ಸ್ಥಳಕ್ಕೆ ಮುಡಾ ಎಇಇ ಮೋಹನ್ ಕುಮಾರ್, ಎಇ ಚೇತನ್‌ಬಾಬು, ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ ಸಾರ್ವಜನಿಕರು ಮತ್ತು ಎಸ್‌ಟಿಎಫ್ ನಿವೃತ್ತ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಆದರೆ ಯಾವುದೇ ಕಾರಣಕ್ಕೂ ಈ ಸ್ಥಳದಲ್ಲಿ ಎಸ್‌ಟಿಪಿ ಘಟಕ ನಿರ್ಮಿಸಬಾರದು, ಬೇರೆ ವಿಶಾಲವಾದ ಸ್ಥಳದಲ್ಲಿ ಘಟಕ ನಿರ್ಮಿಸಿಕೊಳ್ಳುವಂತೆ ಅಧಿಕಾರಿಗಳನ್ನು ಒತ್ತಾಯಿಸಿದರು. ಹೀಗಾಗಿ ಕಾಮಗಾರಿ ಸೋಮವಾರವೂ ನಡೆಯಲಿಲ್ಲ.

ಈ ಸಂಬಂಧ ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ ಎಇಇ ಮೋಹನ್‌ಕುಮಾರ್, ಸದ್ಯಕ್ಕೆ ಕಾಮಗಾರಿ ಸ್ಥಗಿತಗೊಂಡಿದ್ದು, ಈ ಬಗ್ಗೆ ನಮ್ಮ ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದೇವೆ. ನಾಳೆ (ಮಂಗಳವಾರ) ಮುಡಾ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಅವರು ಕಾಮಗಾರಿಯನ್ನು ಬೇರೆಡೆಗೆ ಸ್ಥಳಾಂತರಿಸಲು ಸೂಚಿಸಿದರೆ ಅದರ ಪ್ರಕಾರ ನಡೆಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು, ಎಸ್‌ಟಿಎಫ್ ನಿವೃತ್ತ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.11.2022 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಪೂರ್ಣಿಮಾ, ನಕ್ಷತ್ರ : ಭರಣಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಉನ್ನತ ಶಿಕ್ಷಣದಲ್ಲಿ ಸಂಶೋಧನೆ ಮತ್ತು ಅರ್ಹತಾ ಪರೀಕ್ಷೆಗಳ ಸವಾಲು ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಪ್ರಾಧ್ಯಾಪಕರಾದ ಪ್ರೊ. ನಿಂಗಮ್ಮ ಸಿ. ಬೆಟ್ಸೂರ್, ಉಪನ್ಯಾಸ : ಡಾ. ಟಿ.ವಿ. ಸೋಮಶೇಖರ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಉಪಸ್ಥಿತರು : ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ ದಳಪತಿ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ

■ **ತನುಮನ ಸಂಸ್ಥೆ:** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ಚಿಕ್ಕಜವರಪ್ಪ, ವೆಂಕಟೇಶ್, ದೇವಗಳ್ಳಿ ಸೋಮಶೇಖರ್, ಪಾಳ್ಯ ಸುರೇಶ್, ಹೆಚ್.ಎ.ಸೋಮಶೇಖರ್, ಎಸ್.ಡಿ. ಸಣ್ಣಸ್ವಾಮಿ, ರಾಘವೇಂದ್ರ ಅಪುರಾ, ಎಂ. ಮಂಜುನಾಥ್, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಸಂಜೆ 5.30ಕ್ಕೆ.

■ **ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಬೆಳದಿಂಗಳ ಸಂಗೀತ–248, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ರೇಖಾ ಹೆಗಡೆ ಅವರಿಂದ ಗಾಯನ, ಪಂಡಿತ್ ರವಿಚಂದ್ರ ಢಗೆ–ಹಾರ್ಮೋನಿಯಂ, ಪಂಡಿತ್ ರಮೇಶ್ ದನ್ನೂರ್–ತಬಲ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸಿ.ವಿಶ್ವನಾಥ್, ಕೆ.ಬಿ. ಸುನೀತಾ ಆಚಾರ್ಯ, ಎನ್. ಹೇಮಾ, ವ್ಯಾಖ್ಯಾನ– ಡಾ. ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 8.30 “ಉಲಿ ಉಯ್ಯಾಲೆ” ಸರಣಿಯ ಮೊದಲ ಕಾರ್ಯಕ್ರಮ “ವಿಶ್ವ ಸೃಷ್ಟಿ ಲೋಕ ದೃಷ್ಟಿ”, ಲೇಖನ– ಡಾ.ಜಯಪ್ರಕಾಶ ಶೆಟ್ಟಿ , ನಿರೂಪಣೆ– ದಿವಾಕರ ಹೆಗಡೆ ಹಾಗೂ ಕೆ.ಬಿ.ಮೀನಾ, 9.00 ಕನ್ನಡ ಕಜ್ಜಾಯ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮ ಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಸಾಹಿತ್ಯ ಮತ್ತು ನಿರೂಪಣೆ– ಪ್ರೊ.ಆರ್.ರಮಾನಂದ್, ನಿರ್ಮಾಣ–ಗೀತಾ ರಮಾನಂದ್, 10.30 ನಮ್ಮ ಆರೋಗ್ಯ–ಪ್ರಣವ ಹೆಲ್ತ್ ಕೇರ್ ಪ್ರಾಯೋಜಿತ ಕಾರ್ಯಕ್ರಮ, ವಿಷಯ–ಕ್ಯಾನ್ಸರ್, ಲಕ್ಷಣಗಳೂ ಮತ್ತು ಸ್ಕ್ರೀನಿಂಗ್ ವಿಧಾನ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಸುಪ್ರಿಯಾ ರಘುನಂದನ್, ವೃಂದಗಾನ, 12.45 ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು–ಮಡ್ಡೀಕೆರೆ ಗೋಪಾಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು–ಮಧುಲಿಕಾ ಶ್ರೀನಿವಾಸ್, ವೀಣಾ ಶ್ರೀನಿವಾಸ್, ವಿದ್ಯಾ ನಟರಾಜ್, 4.00 ಕಥಾ ಕಾಲಕ್ಷೇಪ “ಶ್ರೀ ತುಳಸೀ ಮಹಾತ್ಮೆ”, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತ ದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ– ಹೈನುರಾಸುಗಳಲ್ಲಿ ಕೆಚ್ಚಲ ಬಾವು ಮತ್ತು ನಿರ್ವಹಣೆ ಕುರಿತು ಡಾ.ಸವಿತಾ ಎಸ್.ಟಿ. ಅವರೊಡನೆ ಸಂದರ್ಶನ, 9.30 ಆರ್.ಕೆ.ಪದ್ಮನಾಭ–ವೀಣಾವಾದನ, 10.00 ಗಮಕ ವ್ಯಾಖ್ಯಾನ, ವಾಚನ– ಹೆಚ್.ಯಜ್ಞೇಶ್, ವ್ಯಾಖ್ಯಾನ–ಸರ್ಪಂಗಳ ಈಶ್ವರಭಟ್, 10.30 ಸವಿನೆನಪು

ಭಾರತೀಯ ಹಬ್ಬಗಳ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ

ನವೆಂಬರ್ 8

■ ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, **ಬೆಂಗಳೂರು–ಮೈಸೂರು** ‘ತ್ರಿಪುರಾದ ಹಬ್ಬಗಳು’ ಶೀರ್ಷಿಕೆಯಡಿ ಅಗರ್ತಲ ಕಲಾವಿದರಿಂದ ‘ಗುಡ್ಡಗಾಡು ಜನಾಂಗದ’ ನೃತ್ಯಗಳು. ಪಾಂಚಾಲಿ ಡೆಬ್ ವರ್ಮ ಅವರ ನಿರ್ದೇಶನದಲ್ಲಿ ‘ಮಮಿತ’, ‘ಲೆಬಂಗ್ ಬೋಮನಿ’ ಹಾಗೂ ‘ಹೋಜಾಗಿರಿ’ ನೃತ್ಯ ಪ್ರದರ್ಶನ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 6 ರಿಂದ.



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.7–ಚೆಸ್ಕಾಂ ವತಿಯಿಂದ ವಿಜಯನಗರ 4ನೇ ಹಂತ, ಬಸ್ ಡಿಪೋ ವ್ಯಾಪ್ತಿ, ಬೆಳವಾಡಿ, ಕಲ್ಯಾಣಿನಗರ, ಬಸವಪುರ, ರಾಮಯ್ಯ ಲೇಔಟ್, ಕೆ.ಬಿ.ಎಲ್ ಗಾರ್ಡೇನಿಯಾ, ಎಸ್.ಬಿ.ಐ ಶಾಲೆ, ಕುಕ್ಕರಹಳ್ಳಿ, ವಿಶ್ವಮಾನವ ಜೋಡಿರಸ್ತೆ, ಸರಸ್ವತಿಪುರಂ 4ನೇ ಮುಖ್ಯರಸ್ತೆ, ಈಜುಕೊಳ ರಸ್ತೆ, ಅಂಚೆ ಕಚೇರಿ ಸುತ್ತಮುತ್ತ, ಜವರೇಗೌಡ ಪಾರ್ಕ್ ಸುತ್ತಮುತ್ತ, ಮುರುಗನ್ ಮೆಡಿಕಲ್, ಕುವೆಂಪು ಶಾಲೆ ಸುತ್ತಮುತ್ತಲ ಪ್ರದೇಶಗಳಲ್ಲಿ ನ.8ರ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಗೆಯೇ ಸಿ.ಪಿ.ಡಬ್ಲ್ಯೂ.ಯಡಿ ಆಫೀಸ್ ಮತ್ತು ಕ್ವಾಟ್ರರ್ಸ್, ಗಿರಿಯಾಭೋವಿಪಾಳ್ಯ, ರಾಘ ವೇಂದ್ರನಗರ, ಗುರುರಾಜ ಬಡಾವಣೆ, ಯರಗನಹಳ್ಳಿ, ವಿದ್ಯಾನಗರ, ಪಾಪಣ್ಣ ಬಡಾವಣೆ, ಮೌಲೀಂನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಇರುವುದಿಲ್ಲ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ನ. 7– ಮೈಸೂರಿನ ರೇಷ್ಮೆ ಇಲಾಖೆಯ ನಿವೃತ್ತ ನೌಕರರ ಸೇವಾ ಸಂಸ್ಥೆಯು ಬಿಜಿಎಸ್ ಅಪೋಲೋ ಆಸ್ಪತ್ರೆ, ಮೈಸೂರು ರೋಟರಿ ಕ್ಲಬ್ ಸಹಯೋಗದೊಂದಿಗೆ ನ.11ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 1 ರವರೆಗೆ ಶ್ರೀರಾಂಪುರದ ಲಿಸಾಸ್ ಫಸ್ಟ್ ಸ್ಟೆಪ್ ಸ್ಕೂಲ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 2 ಎಂಡೈಎಸ್ 2022–23
ದಿನಾಂಕ : 31–10–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/ಎಸ್‌ಪಿಎನ್/165/2012 ಆವೃತ್ತಿ 3.0 ಇತ್ತೀಚಿನ ತಿದ್ದುಪಡಿಗೆ ಅನುಸಾರವಾಗಿ ಆರ್‌ಇ / ನಾನ್ ಪ್ರದೇಶದಲ್ಲಿ ಇಂಟರ್‌ಲಾಕ್ಡ್ ಎಲ್‌ಸಿ ಗೇಟ್‌ಗಾಗಿ ಎಸ್‌ಎಂಪಿಎಸ್ ಆಧಾರಿತ ಸಂಯೋಜಿತ ವಿದ್ಯುತ್ ಸರಬರಾಜು.	ರೂ. 1,97,29,600/–
2	ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/ಎಸ್‌ಪಿಎನ್/176/2013 ಆವೃತ್ತಿ 3 ಇತ್ತೀಚಿನ ತಿದ್ದುಪಡಿಗೆ ಅನುಸಾರವಾಗಿ ಮಲ್ಟಿ ಸೆಕ್ಷನ್ ಡಿಜಿಟಲ್ ಆಕ್ಸೆಲ್ ಕೌಂಟರ್ ಸಂಪೂರ್ಣ ವ್ಯವಸ್ಥೆಯ ಸರಬರಾಜು, ವಿನ್ಯಾಸ, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.	ರೂ. 2,65,84,400/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–11–2022ರಂದು 11:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಇನ್ ಮಾಡಿ. ಯಾವುದೇ ತಿದ್ದುಪಡಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಮೈಸೂರು

ಪಿಯುಬಿ/466/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

43 ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

MARKS CARD LOST

I, Vidhyashree R/a #345, 'D' Block, Ramakrishnanagar, Mysore-570022 have lost Original SSLC Marks card Reg No. 20080565980, PUC REG.No 133937 and BE Certificate USN No: 4GE10CS052

Finders Please Contact **9538413101**

PUBLIC NOTICE

This is to bring to the notice of the general public and whosoever concerned that Shri Nawab, S/o Shri Mahzar Khan, resident of Bengaluru (Ph: 9353235656) is eager to purchase the schedule properties belonging to Shri Imtiyz Yahya Madani of Mysuru. Hence it is requested to whosoever concerned to rise objections if any within 7 days from the date of this publication. Failing which it is deemed that there is no objection and the purchaser will not be anywhere responsible for the same and cannot be held liable. The schedule properties are as under:

SCHEDULE 'A' PROPERTY

All the piece and parcel of the residential property bearing No. 2707/1, New No. L-10, measuring 30x68 Ft, situated at Pulikeshi Cross Road, Rampattal Street, Lashkar Mohalla, Mysuru City bounded by;

East: Property No. 2707, L-9 ; West: Property No. 2707/1, L-3 ; North: Property No. 2708/1A ; South: Conservancy.

SCHEDULE 'B' PROPERTY

All the piece and parcel of the residential property carved out of residential properties bearing No. 2708/1A, New No. L-3/2 and No. 2709/1A New No. L-3/B, measuring 40x41 Ft out of total 55.8x41 Ft, situated at Pulikeshi Road, Lashkar Mohalla, Mandi Mohalla, Mysuru City bounded by:

East: Private property ; West: Remaining portion of property No. 2709/1, L-3 ; North: Pulikeshi Road; South: Private property.

Sd/- B.M. Shashi Kiran, Advocate
KAR/2433/2011, No. 14, 1st Floor, Kesare III Stage,
Mysuru-570 007. Mob: 93421 23370

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888

ಶ್ರೀ ಗೌರಿಶಂಕರ ಟ್ರಾವೆಲ್ಸ್

10–11–22 (4 ದಿನ) – ಬಾಂಬೆ, ಶಿರಡಿ, ನಾಶಿಕ್, ಎಲ್ಲೋರ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ.
24–12–22 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಆಲಪ್ಪಿ, ಕೊಚಿನ್ ಇತ್ಯಾದಿ.
ವಿಮಾನ / ಬಸ್ / ರೂಂ / ಊಟ

Mob: 9620002114

ಹೋಮ್ ನರ್ಸಿಂಗ್ ಸೇವೆ

ನಮ್ಮ ಸಂಸ್ಥೆಯಿಂದ ರಾಜ್ಯದಾದ್ಯಂತ ವೃದ್ಧರು, ಹಾಸಿಗೆ ಹಿಡಿದ ರೋಗಿಗಳು, ಕ್ಯಾನ್ಸರ್ ಪೀಡಿತರು, ಮಾರಣಾಂತಿಕ ಸ್ಥಿತಿಯಲ್ಲಿರುವ ರೋಗಿಗಳು, ಮರೆಗುಳಿ ರೋಗಿಗಳು ಹಾಗೂ ಎಲ್ಲಾ ರೀತಿಯ ರೋಗಿಗಳ ಆರೈಕೆಗೆ ತರಬೇತಿ ಪಡೆದ ಪುರುಷ ಹಾಗೂ ಮಹಿಳಾ ಹೋಮ್–ನರ್ಸ್‌ಗಳನ್ನು ಸಂಸ್ಥೆಯ ಜವಾಬ್ದಾರಿಯೊಂದಿಗೆ ಕಳುಹಿಸಿ ಕೊಡಲಾಗುವುದು.

Mob: 9513253747

WANTED

Civil Engineer (Male Only) Min 2-3 yrs Exp. as a Site Engineer

7337888386 / 7760135606

Call between : 10AM to 6PM

Mail your CV to: acpltd123@gmail.com

NEEM ಯೋಜನೆಯಡಿ 3 ವರ್ಷದ ತರಬೇತಿಯ ಅವಧಿಯಲ್ಲಿ ಪ್ರೊಡಕ್ಷನಲ್ಲಿ ಕೆಲಸ ಮಾಡಲು ಪುರುಷ & ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ

ಮೈಸೂರಿನ ನಂಜನಗೂಡು ಕೈಗಾರಿಕಾ ಪ್ರದೇಶದ ಪ್ರತಿಷ್ಠಿತ ಕಂಪನಿಗೆ

ಐಟಿಐ & ಡಿಪ್ಲೋಮೊ ಪಾಸ್/ಫೇಲ್

ವಯೋಮಾನ 19–36 ವರ್ಷಗಳು

ಶಿಷ್ಯ ವೇತನ:
ಮೊದಲ ವರ್ಷ ರೂ. 12500/–
ಎರಡನೇ ವರ್ಷ ರೂ. 13250/–
ಮೂರನೇ ವರ್ಷ ರೂ. 14000/–

ಕ್ಯಾಂಟೀನ್ & ಸಾರಿಗೆ ಸೌಲಭ್ಯವಿದೆ
ಯಾವುದೇ ರೀತಿಯ ನೋಂದಣಿ ಶುಲ್ಕ ಇರುವುದಿಲ್ಲ

ಆಸಕ್ತ ಅಭ್ಯರ್ಥಿಗಳು ತಕ್ಷಣ ಸಂಪರ್ಕಿಸಿ

ಅಶೋಕ್ 7760829693 | ಧರ್ಮ 9739327290 | ಕಿಶೋರ್ 8884855059

ಪೀಪಲ್ ಮ್ಯಾನೇಜ್‌ಮೆಂಟ್ ಸರ್ವಿಸಸ್
ನಂ.1017, 8ನೇ ಮೇನ್, 3ನೇ ಹಂತ, ಡಾಕ್ಟರ್ ಕಾರ್ನರ್ ಹತ್ತಿರ, ಗೋಕುಲಂ, ಮೈಸೂರು
Email: peoplemanagementservice@gmail.com
www.peoplemanagementservices.com

ಸಾರ್ವಜನಿಕರ ತಿಳುವಳಿಕೆಗಾಗಿ

ನಮ್ಮ ಕಕ್ಷಿದಾರರು ಈ ಕೆಳಕಂಡ ಪ್ರಕಟಣೆಯನ್ನು ಸಾರ್ವಜನಿಕರ ಗಮನಕ್ಕೆ ತರಲು ಇಚ್ಛಿಸಿರುತ್ತಾರೆ. ಆದ ಕಾರಣ ಈ ಸಾರ್ವಜನಿಕ ಪ್ರಕಟಣೆ ಈ ಕೆಳಕಂಡಂತೆ ಇರುತ್ತದೆ.

ಈ ಪ್ರಕಟಣೆಯ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನು ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ಟೌನ್, ರಾಜೀವ್‌ನಗರ, ಮನೆ ನಂ. 7–440 ರಲ್ಲಿ ವಾಸವಾಗಿರುವ ಲೇಟ್ ನಾಗಭೂಷಣ ರವರ ಮಗನಾದ ಶ್ರೀ ಜಿ. ಪದ್ಮನಾಭ ರಾವ್ ರವರ ಮಾಲೀಕತ್ವ ಮತ್ತು ಅನುಭವದಲ್ಲಿದ್ದ ಜಮೀನನ್ನು, ಈ ಪ್ರಕಟಣೆಯ ಷೆಡ್ಯೂಲ್‌ನಲ್ಲಿ ವಿವರಿಸಿದ್ದು, ಸದರಿ ಷೆಡ್ಯೂಲ್ ಜಮೀನನ್ನು ನಮ್ಮ ಕಕ್ಷಿದಾರರು ಶುದ್ಧ ಕ್ರಯಕ್ಕೆ ಕೊಂಡುಕೊಳ್ಳಲು ಬಾಯಿ ಮಾತಿನಲ್ಲಿ ಮಾತುಕತೆಗಳನ್ನು ನಡೆಸಿರುತ್ತಾರೆ. ಸದರಿ ಸ್ವತ್ತುವಿನ ಮೇಲೆ ಯಾರಿಗಾದರೂ ಭಾಗಾಂಶದ ಹಕ್ಕುಗಳಾಗಲೀ, ಯಾರಿಗಾದರೂ ಸದರಿ ಸ್ವತ್ತುವಿನ ಮೇಲೆ ಋಣಭಾರಗಳು ಇದ್ದಲ್ಲಿ ಹಾಗೂ ಸದರಿ ಸ್ವತ್ತುವಿನ ಮೇಲೆ ಯಾರಿಗಾದರೂ ಕ್ರಯದ ಕರಾರು, ವಗೈರೆಗಳಾಗಲೀ ಇದ್ದಲ್ಲಿ, ಹಾಗೂ ಸದರಿ ಸ್ವತ್ತುವಿನ ಮೇಲೆ ಯಾವುದಾದರೂ ತಂಟೆ, ತಕರಾರುಗಳು ಇದ್ದಲ್ಲಿ, ಸದರಿರವರು ತಮ್ಮ ತಂಟೆ, ತಕರಾರುಗಳನ್ನು ಈ ಪ್ರಕಟಣೆಯಾದ 10 ದಿನಗಳ ವಾಯಿದೆ ಒಳಗೆ ತಮ್ಮ ತಕರಾರುಗಳನ್ನು ಲಿಖಿತ ಮೂಲಕ ಈ ಕೆಳಕಂಡವರನ್ನು ಸಂಪರ್ಕಿಸಿ ತಮ್ಮ ತಂಟೆ, ತಕರಾರುಗಳನ್ನು ಬಗೆಹರಿಸಿಕೊಳ್ಳಲು ಈ ಪ್ರಕಟಣೆಯ ಮೂಲಕ ಕೋರಿದೆ. ಒಂದು ವೇಳೆ ಈ ಪ್ರಕಟಣೆಯಾದ 10 ದಿನಗಳ ನಂತರ ಯಾವ ರೀತಿಯ ತಂಟೆ, ತಕರಾರುಗಳು ಬಂದಲ್ಲಿ ಅದನ್ನು ಗಣನೆಗೆ ತೆಗೆದುಕೊಳ್ಳಲು ಸದರಿ ಜಮೀನಿನ ಮೇಲೆ ಯಾರ ತಂಟೆ, ತಕ ರಾರುಗಳು ಹಾಗೂ ಇನ್ನಿತರೆ ಸಮಸ್ಯೆಗಳು ಇಲ್ಲವೆಂದು ಭಾವಿಸಿ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಜಮೀನಿನ ಬಗ್ಗೆ ಕ್ರಯ ಪತ್ರವನ್ನು ಶ್ರೀ ಜಿ. ಪದ್ಮನಾಭ ರಾವ್ ಮತ್ತು ಅವರ ಕುಟುಂಬ ವರ್ಗದವರಿಂದ ನೋಂದಣಿ ಮಾಡಿಸಿಕೊಳ್ಳುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಚಾಮರಾಜನಗರ ಗ್ರಾಮಕ್ಕೆ ಸೇರಿದ ಸರ್ವೆ ನಂ. 440/5, ವಿಸ್ತೀರ್ಣ 28 1/2 ಗುಂಟೆ ಜಮೀನು. ಈ ಜಮೀನಿಗೆ ಚೆಕ್ಕುಬಂದಿ ಈ ಕೆಳಕಂಡಂತೆ ಇರುತ್ತದೆ. ಪೂರ್ವಕ್ಕೆ: ವೀರಶೈವ ಸಮಾಜ ಜಮೀನು ; ಪಶ್ಚಿಮಕ್ಕೆ: ಸರಾಬು ವೆಂಕಟೇಸ್ವಾರಲು ರವರ ಜಮೀನು ; ಉತ್ತರಕ್ಕೆ: ಕರಿನಂಜಿಪುರಕ್ಕೆ ಹೋಗುವ ರಸ್ತೆ ; ದಕ್ಷಿಣಕ್ಕೆ: ಸಿ.ವಿ. ರಾಮನ್ ಮಕ್ಕಳ ಜಮೀನು.

ದಿನಾಂಕ: 07–11–2022
ಸ್ಥಳ: ಚಾಮರಾಜನಗರ

Sd/- K.R. Kendagannaswamy, Advocate
#1135, Upstair, 'Sammedha', Moksha Marga,
Siddarthanagar, Mysuru-570 011. Mob: 9886256803

ಕೈಲಾಸ ಶಿವಗಣಾರಾಧನೆ ಆಹ್ವಾನ

ದಿನಾಂಕ: 09.11.2022ನೇ ಬುಧವಾರ



ಎಂ.ಎಲ್.ನಾಗಣ್ಣನವರು

(ಶ್ರೀ ಸಂಗಮ ಕ್ಷೇತ್ರ ಸಮಿತಿ ಉಪಾಧ್ಯಕ್ಷರು ಹಾಗೂ ತಾಲ್ಲೂಕು ವೀರಶೈವ ಮುಖಂಡರು)

ಆಹ್ವಾನ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಕಾರ್ಯಕ್ರಮಕ್ಕೆ ಮತ್ತು ಸುತ್ತೂರು ಶ್ರೀಗಳ ಪಾದ ಪೂಜೆಗೆ ಆಗಮಿಸಬೇಕೆಂದು ಮನವಿ.

ಸ್ಥಳ: ಮಲ್ಕುಂಡಿ ಗ್ರಾಮ, ನಂಜನಗೂಡು ತಾಲ್ಲೂಕು
ಸಮಯ: ಬೆಳಗ್ಗೆ 6.00 ಗಂಟೆಗೆ

ದುಃಖತಪ್ತರು: ಪತ್ನಿ ಚಿನ್ನಮ್ಮ ಮತ್ತು ಮಕ್ಕಳು, ಛೇರ್ಮನ್ ಲಿಂಗಪ್ಪನವರ ಕುಟುಂಬವರ್ಗ ಹಾಗೂ ಗ್ರಾಮಸ್ಥರು

ಹಸಿರು ನಮ್ಮ ಉಸಿರು

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ ಹುಣಸೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ಹುಣಸೂರು

ಐ.ಎಫ್.ಟಿ ಸಂಖ್ಯೆ: 10/2022–23 ದಿನಾಂಕ:05.11.2022

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹುಣಸೂರು ವಿಭಾಗ ವ್ಯಾಪ್ತಿಯಲ್ಲಿ 3054 ರಸ್ತೆ ಮತ್ತು ಸೇತುವೆ ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ಒಟ್ಟು 54 ನಿರ್ವಹಣೆ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೋಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕಾಮಗಾರಿಗಳ ಪೈಕಿ ಟೆಂಡರಿಗಿಟ್ಟ ಮೊತ್ತ ರೂ.20.50 ಲಕ್ಷ ಗರಿಷ್ಠ ಹಾಗೂ ರೂ.1.23 ಲಕ್ಷ ಕನಿಷ್ಠ. ಇ.ಎಂ.ಡಿ ರೂ.25,000/– ಲಕ್ಷಗಳು ಗರಿಷ್ಠ ಹಾಗೂ ರೂ.3100/– ಕನಿಷ್ಠ. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ **18.11.2022 16.00 ಗಂಟೆಯವರೆಗೆ**. ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ 45 ದಿವಸಗಳು. (ಮಳೆಗಾಲ ಸೇರಿದಂತೆ).

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ದಿನಾಂಕ: **09.11.2022** ರಂದು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

DIPR/MYS/KAVITA/642/2022-23

ಪುರಸಭಾ ಕಾರ್ಯಾಲಯ, ಬನ್ನೂರು

ಮೈಸೂರು ಮಳವಳ್ಳಿ ರಸ್ತೆ, ಬನ್ನೂರು–571101 ತಿ.ನರಸೀಪುರ ತಾ॥ ಮೈಸೂರು ಜಿಲ್ಲೆ
ವೆಬ್‌ಸೈಟ್: www.bannurtown.mrc.gov.in ಈ–ಮೇಲ್: itsatff_ulb_bannur@yahoo.com
ಫೋನ್:–08227–276058, 08227–276111

ಸಂ/ಪುಸಬ/ಕಿಅ/ಟೆಂಡರ್/ಪಿಆರ್ 01/22–23 ದಿನಾಂಕ: 04.11.2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ 3ನೇ ದರ್ಜೆ, 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ K.W-1 ಮತು K.W-2 ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಕಾಮಗಾರಿಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ http://eproc.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1) ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿ: 21.11.2022 ಸಂಜೆ 4.30 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿ: 23.11.2022ರ ಸಂಜೆ 04.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ	ವಿವರ	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂಗಳಲ್ಲಿ	ಕಾಲಾವಧಿ
1.	DMA/2022-23/OW/WORK_INDENT 136252/CALL-2	28.00	70000	03 ತಿಂಗಳು
2.	DMA/2022-23/OW/WORK_INDENT 136256/CALL-2	3.80	9500	04 ತಿಂಗಳು

ಗುತ್ತಿಗೆದಾರರ ದರ್ಜೆ: 4ನೇ ದರ್ಜೆ ಹಾಗೂ ಮೇಲ್ಪಟ್ಟು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://eproc.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. 2) ಜಿ.ಎಸ್.ಟಿ ತೆರಿಗೆಯನ್ನು ಪ್ರತ್ಯೇಕವಾಗಿ ಕಾಮಗಾರಿಯ ಬಿಲ್ಲಿನಲ್ಲಿ ಸೇರಿಸಲಾಗುವುದು.

ಸಹಿ/– ಅಧ್ಯಕ್ಷರು, ಪುರಸಭೆ, ಬನ್ನೂರು
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬನ್ನೂರು

DIPR/DDMYS/MCA/634/2022-23



ಮುಖ್ಯ ಕಛೇರಿ: 0821–2521631 ಸ್ಥಾಪನೆ: 20–04–1906 ಶಾಖೆ: 0821–2563851

2006ರಲ್ಲಿ ಶತಮಾನೋತ್ಸವವನ್ನು ಆಚರಿಸಿಕೊಂಡ ರಾಜ್ಯದ ಏಕೈಕ ಪಟ್ಟಣ ಸಹಕಾರಿ ಬ್ಯಾಂಕ್

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿ.,

ಮುಖ್ಯ ಶಾಖೆ : ಗಾಂಧಿಚೌಕ, ಮೈಸೂರು. ಶಾಖೆ : ಸಯ್ಯಾಜಿರಾವ್ ರಸ್ತೆ, ಮೈಸೂರು–570001

"ಎ" ಶ್ರೇಣಿಯ ಸಹಕಾರ ಬ್ಯಾಂಕ್



ನಾಡಿನ ಸಮಸ್ತ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಪ್ರಕಟಣೆ

ಠೇವಣಿಗಳ ಮೇಲೆ ಅತ್ಯಾಕರ್ಷಕ ಹೆಚ್ಚಿನ ಬಡ್ಡಿ

ತಾ॥ 04.11.2022 ರಿಂದ 271 ದಿನಗಳಿಂದ 365 ದಿನಗಳ ಅವಧಿಗೆ ಶೇ.7.5% ರಷ್ಟು ನೀಡಲಾಗುತ್ತಿದೆ.

ಸೂಚನೆ :– 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ 0.5% ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುವುದು.

ಮೆಗಾ ಸಾಲಮೇಳ

- ಬ್ಯಾಂಕಿನಲ್ಲಿ ತಾ॥ 02.11.2022 ರಿಂದ ತಾ॥ 30.11.2022ರವರೆಗೆ ಒಂದು ತಿಂಗಳ "ಸಾಲ ಮೇಳವನ್ನು" ನಡೆಸುತ್ತಿದ್ದು ಈ ಅವಧಿಯಲ್ಲಿ ಪಡೆಯುವ ಸ್ಥಿರಾಧಾರ/ಮನೆ ಮುಂಗಡ/EM ON TD ಸಾಲಗಳನ್ನು ಶೀಘ್ರವಾಗಿ, ಯಾವುದೇ ರೀತಿಯ ಸಂಸ್ಕರಣಾ ಶುಲ್ಕಗಳು ಇಲ್ಲದೇ (Zero Processing charges) ಸಾಲವನ್ನು ಮಂಜೂರು ಮಾಡಲಾಗುವುದು.
- ರೂ.5 ಲಕ್ಷ ಮತ್ತು 5 ಲಕ್ಷ ಮೇಲ್ಪಟ್ಟ ಚಿನ್ನಾಭರಣ ಸಾಲಗಳಿಗೆ ಶೇ.9% ರಷ್ಟು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಅಲ್ಲದೇ ನಿಬಂಧನೆಯ ಮೇರೆಗೆ ಬ್ಯಾಂಕಿನ ಬಿ ತರಗತಿಯ ಸದಸ್ಯತ್ವವನ್ನು ನೀಡಲಾಗುವುದು.
- EM ON TD ಸಾಲಗಳನ್ನು ರೂ.5ಲಕ್ಷಗಳವರೆಗೆ, ಜಂಟಿಸಾಲವನ್ನು ರೂ.2ಲಕ್ಷಗಳವರೆಗೆ ನೀಡಲಾಗುತ್ತಿದೆ.



"ಉಚಿತ ಕಣ್ಣಿನ ತಪಾಸಣೆ ಕಾರ್ಯಕ್ರಮ"

ನಮ್ಮ ಬ್ಯಾಂಕು ASG ಕಣ್ಣಿನ ಆಸ್ಪತ್ರೆ (ಸಿದ್ದಪ್ಪ ಚೌಕ, ಮೈಸೂರು) ಇವರ ಸಹಯೋಗದೊಂದಿಗೆ ಬ್ಯಾಂಕಿನ ಸದಸ್ಯರಿಗೆ ಉಚಿತ ಕಣ್ಣಿನ ತಪಾಸಣೆ" ಕಾರ್ಯಕ್ರಮವನ್ನು ತಾ॥10.11.2022 ರಿಂದ ತಾ॥12.11.2022 ರವರೆಗೆ ಬೆಳಿಗ್ಗೆ 10.00 ರಿಂದ ಸಂಜೆ 05.00 ಗಂಟೆಯವರೆಗೆ ಬ್ಯಾಂಕಿನ ಮುಖ್ಯ ಕಛೇರಿಯ ಆವರಣದಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಯಶಸ್ವಿನಿ ಯೋಜನೆ 2022–23ನೇ ಸಾಲಿನ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪ್ರಾರಂಭಿಸಲಾಗಿದೆ

ಸೂಚನೆ:–ಬ್ಯಾಂಕಿನ ಸದಸ್ಯರು ಸದಸ್ಯತ್ವದ ಪುಸ್ತಕ/ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ಕೋರಿದೆ.

ಆಡಳಿತ ಮಂಡಲಿ ಸದಸ್ಯರು



ಶ್ರೀ ಸಿ.ರೇವಣ್ಣ, ಅಧ್ಯಕ್ಷರು, ಮೊ : 9845509941
ಶ್ರೀ ಜೆ.ಯೋಗೇಶ್, ಉಪಾಧ್ಯಕ್ಷರು, ಮೊ : 9900501066

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ಕೆ.ಹರ್ಷಿತ್‌ಗೌಡ ಮುಖ್ಯಕಾರ್ಯನಿರ್ವಹಣಾಧಿಕಾರಿ

ನಕ್ಕರೆ ಅದೇ ಸ್ವರ್ಗ

ಗಂಡ : ಇವತ್ತೇನೋ ಬೇರೆ ಥರ ಕಾಣಸ್ತಿದ್ದೀಯಾ?

ಹೆಂಡತಿ : ಐದು ಕೆಜಿ ತೂಕ ಇಳಿಸಿಕೊಳ್ಳಬೇಕು ಅಂತ ಡಾಕ್ಟ್ರು ಹೇಳಿದ್ರು. ಅದಕ್ಕೆ ಇಳಿಸ್ಕೊಂಡೆ,.

ಗಂಡ : ಒಂದೇ ದಿನದಲ್ಲಿ ಐದು ಕೆಜಿ ತೂಕ ಇಳಿಸ್ಕೊಂಡ್ಯಾ? ಹೇಗೆ?

ಹೆಂಡತಿ : ನಾನು ಮೇಕಪ್ ಮಾಡ್ಕೊಳ್ಳೋದನ್ನು ಬಿಟ್ಟುಬಿಟ್ಟೆ ಐದು ಕೆಜಿ ಕಡಿಮೆ ಆಯಿತು!"

ಮೈಸೂರು ಮಿತ್ರ

ಮಂಗಳವಾರ, 8 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀನು ಹೆಚ್ಚು ಕಾಲ ಬದುಕಬೇಕೆಂದಿದ್ದರೆ, ನಿನ್ನ ಪ್ರಾರಂಭಿಕ ಇಪ್ಪತ್ತು ವರ್ಷ ತುಂಬ ಅಮೂಲ್ಯವಾದದ್ದು ಎಂಬುದು ನೆನಪಿರಲಿ – ಅರವಿಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಂದದ್ದು ಬಿಡಬಾರದು, ಬಾರದ್ದು ಬಯಸಬಾರದು

ನಿಮ್ಮ ಪತ್ರಗಳು

ಸರ್ಕಾರ ಎಲೆಕ್ಟ್ರಿಕ್ ಸ್ಕೂಟರ್‌ಗಳ ಸುರಕ್ಷತೆಗೆ ಆದ್ಯತೆ ನೀಡಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರು ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಮುಗಿಬಿದ್ದು ಖರೀದಿಸುತ್ತಿದ್ದಾರೆ. ಈ ಸ್ಕೂಟರ್‌ಗಳಲ್ಲಿ ಕೆಲವೊಂದು ನಮೂನೆಗೆ ಚಾಲನಾ ಪರವಾನಗಿ, ನಂಬರ್ ಪ್ಲೇಟ್, ನೋಂದಣಿ ಬೇಕಿಲ್ಲ. ಹಾಗಾಗಿ 18 ವರ್ಷದೊಳಗಿನ ವಿದ್ಯಾರ್ಥಿ ಸಮೂಹಕ್ಕೆ ಹೆಚ್ಚು ಅನುಕೂಲ ವಾಗಿದೆ. ಆದರೆ ಕಂಪನಿಗಳು ಇವುಗಳ ಸೇವೆಗಾಗಿ ಸರ್ವಿಸ್ ಸೆಂಟರ್‌ಗಳನ್ನು ತೆರೆದಿಲ್ಲ ಹಾಗೂ ಸುರಕ್ಷತೆಗೆ ಹೆಚ್ಚು ಹೊತ್ತನ್ನು ಕೊಟ್ಟಿಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ಇತ್ತೀಚಿನ ದಿನಗಳಲ್ಲಿ ರಸ್ತೆಯಲ್ಲಿಯೇ ಇ-ಸ್ಕೂಟರ್‌ಗಳ ಜೊತೆ ಅಮೂಲ್ಯ ಜೀವಗಳು ಕೂಡ ಹೊತ್ತಿ ಉರಿದು ಸುಟ್ಟು ಕರಕಲಾಗಿರುವ ಘಟನೆಗಳು ವರದಿಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಈ ದೃಶ್ಯಗಳು ವೈರಲ್ ಆಗುತ್ತಿವೆ. ಇದಲ್ಲದೆ ಸಿಕಂದರಾಬಾದ್‌ನಲ್ಲಿ ಎಲೆಕ್ಟ್ರಿಕ್ ಸ್ಕೂಟರ್ ಶೋರೂಮ್ ಕೂಡ ಬೆಂಕಿ ಹೊತ್ತಿಕೊಂಡು ಏಳು ಜನರು ಸುಟ್ಟು ಕರಕಲಾಗಿದ್ದಾರೆ. ಸರ್ಕಾರ ಇ ಸ್ಕೂಟರ್ ಬಿಡುಗಡೆ ಮುನ್ನವೇ ಸುರಕ್ಷತಾ ಕ್ರಮ, ಮಾನ ದಂಡಗಳನ್ನು ರೂಪಿಸಿ ನಂತರ ಕಂಪನಿಗಳಿಂದ ಸ್ಕೂಟರ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ, ಅಮಾಯಕ ಜೀವಗಳು ಬದುಕುಳಿಯುತ್ತವೆ. ಇದರ ಬಗ್ಗೆ ಇನ್ನಾದರೂ ಎಚ್ಚೆತ್ತುಕೊಂಡು ಸರ್ಕಾರ ಚಿಂತನೆ ನಡೆಸಿ, ಬ್ಯಾಟರಿ ವಿನ್ಯಾಸ, ನಂಬರ್ ಪ್ಲೇಟ್, ನಿರ್ವಹಣೆ ವ್ಯವಸ್ಥೆ, ಕೇಬಲ್‌ಗಳ ಗುಣಮಟ್ಟ, ಶಾರ್ಟ್ ಸರ್ಕ್ಯೂಟ್ ಆಗದಂತೆ ಕ್ರಮವಹಿಸುವುದು, ನೋಂದಣಿ ಕಡ್ಡಾಯದ ಬಗ್ಗೆ ಎಚ್ಚರ ವಹಿಸುವುದು ಸೂಕ್ತ, ಇವುಗಳ ಬಗ್ಗೆ ಸರ್ಕಾರವು ಅತ್ಯಂತ ಕಾಳಜಿ ವಹಿಸಿ ಕ್ರಮಗಳನ್ನು ಕೈಗೊಂಡು ಶ್ರೀಸಾಮಾನ್ಯರ ಜೀವ ಉಳಿಸುವತ್ತ ಗಮನಹರಿಸಬೇಕೆಂದು ಆಶಯ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಎಸ್ಸಿ–ಎಸ್ಟಿ ಮೀಸಲಾತಿ ಹೆಚ್ಚಳ ಸುಗ್ರೀವಾಜ್ಞೆ ರಾಜ್ಯಪಾಲರ ಅಂಕಿತ: ಸಂತಸ

ಮಾನ್ಯರೆ,

ಕರ್ನಾಟಕದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸುವ ಬಗ್ಗೆ ನ್ಯಾಯಮೂರ್ತಿ ನಾಗ ಮೋಹನದಾಸ್ ಅವರ ಶಿಫಾರಸ್ಸನ್ನು ಒಪ್ಪಿ ಆಧ್ಯಾದೇಶವನ್ನು ಮಾಡಲು ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿತ್ತು. ಇದಕ್ಕೆ ರಾಜ್ಯಪಾಲರು ಒಪ್ಪಿಗೆ ಸೂಚಿಸಿರುವುದು ಸಂತಸದ ಸಂಗತಿ.

ಈ ಕುರಿತು ಇಂದು ಅಧಿಕೃತವಾದ ವಿಶೇಷ ರಾಜ್ಯಪತ್ರವನ್ನು ಪ್ರಕಟಿಸಲಾಗಿದೆ. ಈ ಆಧ್ಯಾದೇಶಕ್ಕೆ ವಿಧಾನ ಮಂಡಲದ ಎರಡೂ ಸದನದಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗುವುದು. ಇದರಿಂದ ಇನ್ನು ಮುಂದೆ ಅನುಸೂಚಿತ ಜಾತಿಯ ಮೀಸಲಾತಿ ಪ್ರಮಾಣ 15 ರಿಂದ 17 ಕ್ಕೆ ಏರಲಿದ್ದು, ಅನುಸೂಚಿತ ಪಂಗಡಗಳ ಮೀಸಲಾತಿ ಪ್ರಮಾಣ ಶೇ 3 ರಿಂದ 7ಕ್ಕೆ ಏರಿಸಲಾಗಿದೆ. ನಮ್ಮ ಸರ್ಕಾರವು ಮೀಸಲಾತಿ ಪ್ರಮಾಣ ಹೆಚ್ಚಿಸಿ ಬದ್ಧತೆಯಿಂದ ನಡೆದುಕೊಂಡಿದೆ. ಈ ಮೂಲಕ ಅನುಸೂಚಿತ ಜಾತಿ ಮತ್ತು ಪಂಗಡಗಳ ಜನಾಂಗಕ್ಕೆ ನಮ್ಮ ಸರ್ಕಾರ ದೀಪಾವಳಿ ಕೊಡುಗೆ ಕೊಟ್ಟಿದೆ. ರಾಜ್ಯ ಸರ್ಕಾರದ ಸುಗ್ರೀವಾಜ್ಞೆಗೆ ಅಂಕಿತ ಹಾಕಿರುವ ಘನತೆವೆತ್ತ ರಾಜ್ಯಪಾಲರಿಗೆ ಮತ್ತು ಬಿಜೆಪಿ ಸರ್ಕಾರಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್‌ಸಿ ಮೋರ್ಚಾ, ಬಿಜೆಪಿ

ಮಾದೇಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿ: ಸ್ವಾಗತಾರ್ಹ

ಮಾನ್ಯರೆ,

ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಮೈಸೂರಿನ ಮನೆ ಮಾದೇಗೌಡರಿಗೆ ನೀಡಿರುವುದು ಸಮಯೋಚಿತ, ಅಭಿನಂದನಾರ್ಹ ಮತ್ತು ಸ್ವಾಗತಾರ್ಹ ಸಂಗತಿಯಾಗಿದೆ. ಮೈಸೂರಿನ ಅನೇಕ ಜನರಿಗೆ ನೆರಳು ನೀಡಿರುವ ಮಾದೇಗೌಡರಿಗೆ ಈ ಮೂಲಕ ಅಭಿನಂದನೆಗಳು. ಸಮಾಜಮುಖಿ ಕಾರ್ಯಗಳನ್ನು ಹೀಗೆ ಮುಂದುವರೆಸಲೆಂದು ಆಶಿಸುತ್ತೇನೆ.

– ಬಿ. ಶ್ರೀನಾಥ್, ಶಾರದಾದೇವಿನಗರ, ಮೈಸೂರು.

ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗಲಿ

ಮಾನ್ಯರೆ,

ಬ್ಯಾಕ್‌ಲಾಗ್ ಹುದ್ದೆಗಳ ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದ 16(4)ದ ಅನುಸಾರ 'ಸೂಕ್ತ ಪ್ರಾತಿನಿಧ್ಯವಿಲ್ಲದ ಎಲ್ಲಾ ಹಿಂದುಳಿದ ವರ್ಗಗಳ ನೇಮಕಾತಿ ಮಾಡಲು ಸರಕಾರಕ್ಕೆ ಸಂಪೂರ್ಣ ಅಧಿಕಾರವಿದೆ ಮತ್ತು ಆ ಹುದ್ದೆಗಳನ್ನು ಭರ್ತಿ ಮಾಡಬೇಕು. ಆದರೆ ರಾಜ್ಯ ಸರಕಾರವು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ಇರುವಂತದ್ದು ಸಂವಿಧಾನದ ಮೂಲಭೂತ ಹಕ್ಕುಗಳನ್ನು ಉಲ್ಲಂಘನೆ ಮಾಡಿದಂತೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬರಬೇಕು.

ಪ್ರಸ್ತುತ ಖಾಲಿಯಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಿದರೆ ಅರ್ಹ ಅಭ್ಯರ್ಥಿಗಳಿಗೆ ನೌಕರಿ ದೊರೆಯುವ ಮೂಲಕ ಅವರ ಭವಿಷ್ಯ ಉತ್ತಮಗೊಳ್ಳುತ್ತದೆ. ಅಂಕಿ ಅಂಶಗಳ ಪ್ರಕಾರ ಕೇಂದ್ರ ವಿ.ವಿಗಳಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿರಿಸಿದ 1084 ಹುದ್ದೆಗಳು ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ 604 ಹುದ್ದೆಗಳು, ಜೊತೆಗೆ 1684 ಹಿಂದುಳಿದ ವರ್ಗಗಳ ಬೋಧಕ ಹುದ್ದೆಗಳು ಖಾಲಿ ಇದ್ದು ಶೀಘ್ರವಾಗಿ ಈ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಬೇಕು.

ರಾಜ್ಯ ವಿವಿಗಳಲ್ಲಿ ಶೇ. 28 ಪ್ರಮಾಣದ ಬ್ಯಾಕ್‌ಲಾಗ್ ಬೋಧಕ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡಿದರೆ ವಿಶ್ವವಿದ್ಯಾಲಯಗಳ ಆಡಳಿತವು ಸುಗಮವಾಗಿ ಸಾಗಲು ನೆರವಾಗುತ್ತದೆ. ಸುಪ್ರೀಂ ಕೋರ್ಟ್ ಹಲವಾರು ಬಾರಿ ಮಹಾರಾಷ್ಟ್ರ, ಕರ್ನಾಟಕ, ಒಡಿಸ್ಸಾ, ತೆಲಗಾಂಣ, ನಾಗಾಲ್ಯಾಂಡ್, ಪಶ್ಚಿಮ ಬಂಗಾಳ ರಾಜ್ಯಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಸೂಚಿಸಿದ್ದರೂ ರಾಜ್ಯ ಸರ್ಕಾರಗಳ ಜಾಣ ನಿರ್ಲಕ್ಷ್ಯದಿಂದ ಹುದ್ದೆಗಳು ಭರ್ತಿಯಾಗದೆ ಉಳಿದಿವೆ.

ಅದಷ್ಟು ಬೇಗ ಕರ್ನಾಟಕ ಸರ್ಕಾರ ಖಾಲಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಬೇಕು ಮತ್ತು ಕೇಂದ್ರ ಸರ್ಕಾರ ರಾಜ್ಯಗಳಿಗೆ ಈ ಕುರಿತು ಸೂಚನೆ ನೀಡಬೇಕು ಎಂದೂ ರಾಜ್ಯದ ಜನತೆಯ ಪರವಾಗಿ ರಾಜ್ಯ ಸರ್ಕಾರವನ್ನು ಮತ್ತು ಕೇಂದ್ರ ಸರ್ಕಾರವನ್ನು ಆಗ್ರಹಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ನೆಮ್ಮದಿಗೆ ಹಣ ಒಂದಿದ್ದರೆ ಸಾಕೆ...!



ನೀವೇನು ಹೇಳ್ತೀರಾ ಸರ್, ದುಡ್ಡು ಇದ್ರೆ ಸಾಕು ಏನೇ ಆದರೂ ತಡೆದುಕೊಳ್ಳಬಹುದು ! ದುಡ್ಡು ಇದ್ದರೆ ಶೇ.90ರಷ್ಟು ಸಮಸ್ಯೆಗಳೇ ಈ ಜೀವನದಲ್ಲಿ ಇರೊಲ್ಲ ! ನಿಮಗೆ ಅರ್ಥ ಆಗೊಲ್ಲ, ಈ ಪ್ರೀತಿ, ಮಾನವೀಯತೆ ಇವೆಲ್ಲಾ ಕೇವಲ ಕೇಳೋಕೆ ಮಾತ್ರ ಚೆನ್ನಾಗಿರುತ್ತದೆ. ಆದರೆ ಜೀವನ ಮಾಡೋಕೆ ದುಡ್ಡೆ ಮುಖ್ಯ! ಭೋಜನದ ಅವಧಿಯಲ್ಲಿ ಸಹದ್ಯೋಗಿಗಳ ನಡುವೆ ಬಂದ ಚರ್ಚೆಯ ವಿಷಯ ಇದು. ಈ ಚರ್ಚೆ ಕೇವಲ ಒಬ್ಬರಿಗೆ ಸಂಬಂಧಿಸಿದ್ದಲ್ಲ, ಎಲ್ಲರಿಗೂ ಸಂಬಂಧಿಸಿದ್ದು ಅಂತ ಅನಿಸಿತು.

ಮೊದಲಿಗೆ ನಿಜಕ್ಕೂ ದುಡ್ಡು ಒಂದಿದ್ದರೆ ಸಾಕಾ? ಬದುಕಲು ಹಣ ಬಿಟ್ಟರೆ ಬೇರೇನೂ ಬೇಡ್ವ ? ಎಂಬಿತ್ಯಾದಿ ಪ್ರಶ್ನೆಗಳು ತಲೆಯನ್ನು ಕೊರೆಯುತ್ತಿದ್ದವು. ನಿಜ, ಜೀವನ ನಡೆಸಲು, ಇಷ್ಟ ಪಟ್ಟ ಶಾಲೆ, ಕಾಲೇಜು ಸೇರಿ ಓದಲು, ಬೇಕಾಗಿದ್ದನ್ನು ಕೊಂಡುಕೊಳ್ಳಲು, ಬಾಯಿಗೆ ರುಚಿ ಅನಿಸಿದ್ದನ್ನು ತಿನ್ನಲು.... ಹೀಗೆ ಪ್ರತಿಯೊಂದು ಬಯಕೆಯನ್ನು ಈಡೇರಿಸಲು ಹಣ ಅಗತ್ಯವೂ ಹೌದು, ಅನಿವಾರ್ಯವೂ ಹೌದು ! ಆದರೆ ಹಣ ನಿಜಕ್ಕೂ ನೆಮ್ಮದಿಯನ್ನು ತಂದುಕೊಡಬಲ್ಲುದೇ ? ಹಣವಿದ್ದರೆ ಯಾವ ಸಮಸ್ಯೆ ಬರಲಾರದೇ? ಇದನ್ನು ಮಾತ್ರ ನಿಜಕ್ಕೂ ನಿಖರವಾಗಿ ಯಾರಿಂದಲೂ ಉತ್ತರಿಸಲು ಕಷ್ಟಸಾಧ್ಯ.

ಹಣವೊಂದೇ ಮುಖ್ಯ ಎನ್ನುವಹಾಗಿದ್ರೆ, ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಶ್ರೀಮಂತ ಉದ್ಯಮಿಯಾಗಲೀ, ಅಥವಾ ಶ್ರೀಮಂತ ರಾಜಕಾರಣಿಯ ಮೊಮ್ಮಗಳಾಗಲೀ , ಅಥವಾ ಜನಪ್ರಿಯ ನಟನ ತಂಗಿಯಾಗಲೀ ಇವರುಗಳು ಯಾವುದೇ ಕಾರಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳಲೇಬಾರದಿತ್ತು. ಇವರೆಲ್ಲಾ ಜನಪ್ರಿಯರಾದ್ದರಿಂದ ಈ ಘಟನೆಗಳು ಬೆಳಕಿಗೆ ಬಂದಿವೆ. ಬೆಳಕಿಗೆ ಬಾರದ ಈ ತರಹದ ಘಟನೆಗಳು ಸಾವಿರಾರಿವೆ. ಮೇಲೆ ತಿಳಿಸಿದ ವ್ಯಕ್ತಿಗಳು ಹಣದ ವಿಷಯದಲ್ಲಾಗಲೀ, ಜನಪ್ರಿಯತೆಯ ವಿಷಯದಲ್ಲಾಗಲೀ, ಯಾರಿಗೇನೂ ಕಡಿಮೆ ಇರಲಿಲ್ಲ. ಕಡಿಮೆಯಾಗಿ ಇದ್ದದ್ದು ಮಾನಸಿಕವಾಗಿ ನೆಮ್ಮದಿ ಮಾತ್ರ.

ನಾವೆಲ್ಲರೂ ಹಣದ ಹಿಂದೆ ಓಡುವ ಯಂತ್ರಗಳಾಗಿದ್ದೇವೆ. ಓಡಿ ಓಡಿ ದಣಿದಾಗ ಹಿಂತಿರುಗಿ ನೋಡಿದಾಗ ಯಾರೂ ಇರದೇ ನೊಂದು ಬೆಂದು ಆರೋಗ್ಯದ ಕಡೆಗೆ ನಿರ್ಲಕ್ಷ್ಯ ಮಾಡಿದ್ದರ ಪರಿಣಾಮ ಮುಂದೆ ದುಡಿದ ಹಣವನ್ನು ಆರೋಗ್ಯಕ್ಕಾಗಿ ವ್ಯಯಿಸುತ್ತೇವೆ ಅಷ್ಟೇ ! ಕಹಿಯಾದರೂ ವಾಸ್ತವದ ಸ್ಥಿತಿ ಇದು.

ಹಾಗಿದ್ದರೆ ಏನು ನಿಮ್ಮ ಮಾತಿನ ಅರ್ಥ. ದುಡ್ಡು ಬೇಡವೇ ಬೇಡ್ವಾ? ಹಣವಿಲ್ಲದೇ ಬದುಕಿ ಬಿಡ್ತೀರಾ? ಅಂದರೆ ಖಂಡಿತವಾಗಿ ನಾನು ಹಾಗೆ ಹೇಳಲಾರೆ!! ಹಣ ಅನ್ನುವುದು ಉಪ್ಪಿನ ಹಾಗೆ. ಉಪ್ಪಿಲ್ಲದಿದ್ದರೆ ಅಂತಹ ಆಹಾರ ರುಚಿಸಲಾರದು, ಹಾಗೆಯೇ ಉಪ್ಪು ಹೆಚ್ಚಾದರೂ ಅಂತಹ ಆಹಾರವನ್ನೂ ತಿನ್ನಲೂ ಆಗದೇ, ಎಸೆಯಲು ಆಗದೇ ಪರಿತಪಿಸಬೇಕಾಗುತ್ತದೆ. ಹಣದ ಹಿಂದೆ ಬೆಂಬತ್ತಿದವರ ಪರಿಸ್ಥಿತಿಯೂ ಹೀಗೇಯೇ ಇರುತ್ತದೆ. ಈಗ ನಮಗೆ 25 ವರ್ಷ ಎಂದಿಟ್ಟುಕೊಳ್ಳೋಣ. ದುಡಿಯಬೇಕು, ಕೈ ತುಂಬಾ ದುಡ್ಡು ಮಾಡಬೇಕು, 20 ವರ್ಷ ಚೆನ್ನಾಗಿ ದುಡಿದು ಹಣ ಮಾಡಿದ್ರೆ ಮುಂದೆ 20 ವರ್ಷ ಹಾಯಾಗಿ ಇರಬಹುದು ಎಂಬುದು ಬಹುಪಾಲು ಜನರ ನಂಬಿಕೆ. ನಂಗೆ ಇಲ್ಲೇ ಅನುಮಾನ. ಹಣ ಮಾಡಬೇಕು ಅಂತ ನಿದ್ದೆಗೆಟ್ಟು, ಶ್ರಮವಹಿಸಿ ಇಷ್ಟಪಟ್ಟಿದ್ದನ್ನು ತಿನ್ನಲು ಮನಸಿಲ್ಲದಂತೆ, ಇಷ್ಟಪಟ್ಟ ಜಾಗಗಳಿಗೆ ಹೋಗಲು ಆಗದೇ ಒಂದೇ ಸಮನೆ ದುಡಿದು ದುಡಿದು ಆ ಸಮಯವನ್ನು ಬರಿ ಹಣಗಳಿಕೆಗೆ ಮಾತ್ರ ಮೀಸಲಿಟ್ಟರೆ ಹಣ ದೊರಕುತ್ತದೆ. ನಿಜ, ಆದರೆ ಆ ಕಳೆದ ಮಧುರ ಕ್ಷಣಗಳನ್ನು ಮತ್ತೆ ಅನುಭವಿಸಲು ಸಾಧ್ಯವೇ? ಮುಂದೆ ಎಲ್ಲವೂ ಸಿಗುವಷ್ಟರಲ್ಲಿ ರೋಗರುಜಿನಗಳು ಬಂದು ಬಯಕೆ ಪಟ್ಟ ತಿನಿಸುಗಳನ್ನು ತಿನ್ನಲಾಗದೇ ಪರಿತಪಿಸುವುದಾದರೆ ಅಂತಹ ಹಣದಿಂದ ಆಗುವ ಉಪಯೋಗವಾದರೂ ಏನು?

> "ನಾವೆಲ್ಲರೂ ಹಣದ ಹಿಂದೆ ಓಡುವ ಯಂತ್ರಗಳಾಗಿದ್ದೇವೆ. ಓಡಿ ಓಡಿ ದಣಿದಾಗ ಹಿಂತಿರುಗಿ ನೋಡಿದಾಗ ಯಾರೂ ಇರದೇ ನೊಂದು ಬೆಂದು ಆರೋಗ್ಯದ ಕಡೆಗೆ ನಿರ್ಲಕ್ಷ್ಯ ಮಾಡಿದ್ದರ ಪರಿಣಾಮ ಮುಂದೆ ದುಡಿದ ಹಣವನ್ನು ಆರೋಗ್ಯಕ್ಕಾಗಿ ವ್ಯಯಿಸುತ್ತೇವೆ ಅಷ್ಟೇ ! ಕಹಿಯಾದರೂ ವಾಸ್ತವದ ಸ್ಥಿತಿ ಇದು. ಹಣ ಅನ್ನುವುದು ಉಪ್ಪಿನ ಹಾಗೆ. ಉಪ್ಪಿಲ್ಲದಿದ್ದರೆ ಅಂತಹ ಆಹಾರ ರುಚಿಸಲಾರದು, ಹಾಗೆಯೇ ಉಪ್ಪು ಹೆಚ್ಚಾದರೂ ಅಂತಹ ಆಹಾರವನ್ನೂ ತಿನ್ನಲೂ ಆಗದೇ, ಎಸೆಯಲು ಆಗದೇ ಪರಿತಪಿಸಬೇಕಾಗುತ್ತದೆ. ಹಣದ ಹಿಂದೆ ಬೆಂಬತ್ತಿದವರ ಪರಿಸ್ಥಿತಿಯೂ ಹೀಗೇಯೇ ಇರುತ್ತದೆ.

ಜನಪ್ರಿಯ ನಟರೊಬ್ಬರು ಇತ್ತೀಚೆಗೆ ಸಂದರ್ಶನದಲ್ಲಿ ಹೇಳಿದ ಮಾತೊಂದು ನೆನಪಾಗುತ್ತದೆ. ಅವರು ಅವರ ಸ್ನೇಹಿತರೆಲ್ಲಾ ಎಲ್ಲಿಯೋ ಹೋಗಿದ್ದು ಬರುವ ಸಂದರ್ಭದಲ್ಲಿ ರಾತ್ರಿ ತುಂಬಾ ತಡವಾಗಿತ್ತು. ಎಲ್ಲರಿಗೂ ಹೊಟ್ಟೆ ಹಸಿವು, ಆದರೆ ಎಲ್ಲಿಯೂ ಯಾವುದೇ ಹೋಟೆಲ್‌ಗಳು ಇಲ್ಲ, ಮೊಬೈಲ್ ಅಲ್ಲಿ ನೆಟ್‌ವರ್ಕ್ ಇಲ್ಲ. ಕೊನೆಗೆ ಅಲ್ಲೇ ಹತ್ತಿರದಲ್ಲಿದ್ದ ಒಂದು ಮನೆಗೆ ಹೋದಾಗ ಅಲ್ಲಿದ್ದ ಮನೆಯವರು ಇವರನ್ನು ಗುರುತಿಸಿ ಹೊಟ್ಟೆ ತುಂಬುವ ಹಾಗೆ ಪ್ರೀತಿಯಿಂದ ಬಡಿಸಿದ್ದರಂತೆ. ಆಗ ಅವರಿಗೆ ಅನಿಸಿದ್ದು ಹೀಗೆ – ಜೇಬಲ್ಲಿ ಲಕ್ಷಗಟ್ಟಲೇ ಹಣ ಇದೆ, ಜನಪ್ರಿಯತೆ ಇದೆ ಎಲ್ಲವೂ ಇದೆ. ಆದರೆ ಬೇಕಾದಾಗ ಒಂದು ತುತ್ತು ಅನ್ನವಿಲ್ಲ ಎಂದಾಗ ದುಡ್ಡು, ಜನಪ್ರಿಯತೆ ಎಲ್ಲಾ ಇದ್ದು ಏನು ಪ್ರಯೋಜನ? ಪ್ರೀತಿ, ಮಾನವೀಯತೆ ಎಲ್ಲಕ್ಕಿಂತ ಮುಖ್ಯವಾದುದು ಎಂದು ಹೇಳಿದ ಆ ಮಾತು ಅಕ್ಷರಶಃ ನಿಜ ಅನಿಸಿತು.

ನಿಜ ತಾನೇ ಹಣ ಮನುಷ್ಯನಿಗೆ ಅಗತ್ಯವಾಗಿ ಬೇಕಾದುದ್ದೇ, ಪ್ರಸ್ತುತ ದಿನಗಳಲ್ಲಿ ಅಂತೂ ಹಣವಿಲ್ಲದೇ ಜೀವನವೇ ಇಲ್ಲ ಎಂಬುವಷ್ಟರ ಮಟ್ಟಿಗೆ ಹಣದ ಪ್ರಾಮುಖ್ಯತೆ ಎಲ್ಲೆಡೆಯೂ ವ್ಯಕ್ತವಾಗುತ್ತಿದೆ. ಆದರೆ ಹಣ ವೊಂದೇ ಜೀವನದ ಪರಮ ಗುರಿಯಲ್ಲ. ಹಣದಿಂದ ಅವಶ್ಯಕತೆಯನ್ನು ಪೂರೈಸಿಕೊಳ್ಳಬಹುದು ಆದರೆ ನೆಮ್ಮದಿ, ಸುಖವನ್ನಲ್ಲ.


ತಾಯಿ – ತಂದೆ ನಮ್ಮ ಮೇಲಿಟ್ಟ ಪ್ರೀತಿಗೆ ಯಾವ ಬೆಲೆಯನ್ನೂ ಕಟ್ಟಲಾಗದು, ನಮ್ಮ ಮಕ್ಕಳ ಮೇಲೆ ನಮಗಿರುವ ನಂಬಿಕೆ , ಕಾಳಜಿಗೆ ಹಣದ ಮೌಲ್ಯ ಕಟ್ಟಲಾಗದು. ಪ್ರೀತಿಯಿಂದ ಪ್ರಾಣಿಗಳನ್ನು ಮಾತಾಡಿಸಿದ್ರೆ ಸಾಕು ಅವುಗಳಿಗೇನು ನಾವು ಹಣದ ಮಳೆಯನ್ನು ಹರಿಸಬೇಕಿಲ್ಲ. ಎಲ್ಲವನ್ನೂ ಹಣವೇ ತಂದು ಕೊಡಲಾರದು. ಅಗತ್ಯ ವಸ್ತುಗಳಿಗೆ ಹಣ ಬೇಕಾಗುತ್ತದೆ. ಆದರೆ ಪ್ರೀತಿಗೆ, ಸ್ನೇಹಕ್ಕೆ, ಕಷ್ಟದಲ್ಲಿದ್ದಾಗ ಧೈರ್ಯ ತುಂಬುವ ಸಾಂತ್ವನ ನೀಡುವ ಕೈಗಳು ಬೇಕಾಗುತ್ತದೆ ವಿನಹಃ ಹಣವಲ್ಲ. ಈ ಸತ್ಯ ಅರಿತ ದಿನ ನಾವೆಲ್ಲಾ ನಿಜವಾದ ಅರ್ಥದಲ್ಲಿ ಮನುಷ್ಯರಾಗುತ್ತೇವೆ.

ಕೋಟಿಗಟ್ಟಲೇ ಹಣ ಮಾಡಿ ನೆಮ್ಮದಿಯಿಲ್ಲದೇ ಪರಿತಪಿಸುವವರನ್ನು ನೋಡಿದಾಗ, ಆಸ್ತಿಗಳನ್ನು ಮಾಡಿ ಆ ಆಸ್ತಿಗಳಿಗಾಗಿ ಬಡಿದಾಡುವ ಅಣ್ಣ – ತಮ್ಮಂದಿರನ್ನೂ, ಅಕ್ಕ – ತಂಗಿಯರನ್ನು ನೋಡಿದಾಗ ತಿಳಿಯುತ್ತದೆ. ನಮ್ಮ ಹತ್ತಿರ ಏನೂ ಇಲ್ಲದೆ ಇದ್ದಾಗಲೇ ಎಲ್ಲವೂ ಚೆನ್ನಾಗಿತ್ತು. ಒಟ್ಟಾಗಿ ಕುಳಿತು ಮಾತನಾಡುತ್ತಾ, ಕಷ್ಟ–ಸುಖ ಹಂಚಿಕೊಳ್ಳುತ್ತಾ, ಒಬ್ಬರ ನೋವಿಗೆ ಮತ್ತೊಬ್ಬರು ಸ್ಪಂದಿಸುತ್ತಾ ಒಂದಾಗಿದ್ದೆವು. ತುಂಬು ಕುಟುಂಬಗಳು ಎಲ್ಲೆಡೆಯೂ ಇತ್ತು. ಯಾವಾಗ ಹಣದ ಹಿಂದೆ ಬೆನ್ನತ್ತಿ ಹೊರಟೆವೋ ಅಲ್ಲಿಂದ ವಿಭಕ್ತ ಕುಟುಂಬಗಳು ಹೆಚ್ಚಾದವು, ಪರಸ್ಪರ ಗೌರವ ಭಾವನೆಗಳು ಕಣ್ಮರೆಯಾದವು, ನಾನು ಎಂಬ ಸ್ವಾರ್ಥಪರತೆಗಳು ಹೆಚ್ಚಾದವು. ದ್ವೇಷ, ಅಸೂಯೆಗಳಂತಹ ನಕಾರಾತ್ಮಕ ಸಂಗತಿಗಳು ಹೆಚ್ಚಾದವು. ಒಂದೇ ಮನೆಯಲ್ಲಿದ್ದು ಬೇರೆ ಬೇರೆ ಅಡುಗೆ ಮಾಡುವಂತಾದವು ಮಾತುಗಳು ಕಡಿಮೆಯಾದವು.

ಹಿಂದೆ ಕಳೆದ ಮಧುರವಾದ ಕ್ಷಣಗಳು ಈಗಿಲ್ಲ. ಬೆಳದಿಂಗಳ ರಾತ್ರಿಯಲ್ಲಿ ಅಜ್ಜಿಯ ಸುತ್ತ ಕುಳಿತು ಕೈ ತುತ್ತು ತಿನ್ನುವಾಗ ಸಿಗುತ್ತಿದ್ದ ಆನಂದವಾಗಲೀ, ಬಡತನದ ಬೇಗೆಯಲ್ಲಿ ರಾತ್ರಿ ಸಮಯದಲ್ಲಿ ಅನ್ನಕ್ಕೆ ಕಾರದ ಪುಡಿ, ಉಪ್ಪು, ಎಣ್ಣೆ ಬೆರೆಸಿ ತಿನ್ನುವಾಗ ಇದ್ದ ಖುಷಿಯಾಗಲೀ, ಕಾಲು ನೀಡಲು ಜಾಗವಿಲ್ಲದಿದ್ದಷ್ಟು ಜಾಗದಲ್ಲಿ ಸಂತೋಷದಿಂದ ನೆಮ್ಮದಿಯಿಂದ ಇದ್ದ ಕ್ಷಣಗಳು, ಮಗುವಿಗೆ ಅಕ್ಕರೆಯಿಂದ ಚಂದ್ರನನ್ನು ತೋರಿಸಿ ಊಟ ಮಾಡಿಸುತ್ತಿದ್ದ ಕ್ಷಣಗಳು, ವರ್ಷಕ್ಕೊಮ್ಮೆ ಹಬ್ಬದ ದಿನಗಳಲ್ಲಿ ಮಾತ್ರ ತರುತ್ತಿದ್ದ ಬಟ್ಟೆಗಳ ಮೇಲೆ ಆಸೆಗಣ್ಣುಗಳಿಂದ ಕಾದು ಬಟ್ಟೆಯನ್ನು ತೊಟ್ಟು ಪಡುತ್ತಿದ್ದ ಸಂಭ್ರಮವಾಗಲೀ, ಎಲ್ಲೆಡೆ ಒಂದಾಗಿ ಸೇರಿ ಕಾಲ ಕಳೆಯುತ್ತಿದ್ದ ದಿನಗಳಾಗಲೀ ಈಗ ಸಿಗಲಾರವು. ಕಾಲ ಎಲ್ಲವನ್ನೂ ಮರೆಸಿದೆ. ಹಾಗೆಯೇ ನೆಮ್ಮದಿಯನ್ನು ಕಸಿದಿದೆ. ಮಾತು ಒರಟಾದರೂ ಒಪ್ಪಿಕೊಳ್ಳಲೇಬೇಕಾದ ಸತ್ಯವಿದು.

ಇನ್ನೂ ಮುಂದಾದರೂ ಹಣದಿಂದ ಎಲ್ಲವೂ ಸಿಗುತ್ತದೆ ಎಂಬ ಮಾಯದ ಮರೀಚಿಕೆಯ ಬೆನ್ನತ್ತಿ ಓಡುವುದನ್ನು ಬಿಟ್ಟು ಅಗತ್ಯ ಇರುವಷ್ಟು ಹಣವನ್ನು ಗಳಿಸಿ ಇರುವುದರಲ್ಲೇ ಸಂತೋಷವನ್ನು ಪಡುತ್ತಾ, ಹಣದಿಂದ ಸಿಗಲಾರದ ನೆಮ್ಮದಿಯನ್ನು, ಮಾನವೀಯತೆಯನ್ನು, ಮನುಷ್ಯತ್ವವನ್ನು ಹುಡುಕುವ ದಾರಿ ಕಂಡುಕೊಂಡರೆ ಉತ್ತಮ ಬದುಕಿನ ಮತ್ತೊಂದು ರೂಪ ಕಾಣುವುದು.

ರಾಘವೇಂದ್ರ, ಸಿ.ಎಸ್,
ಮೊ: 9036389640



ಚಂದ್ರ ಗ್ರಹಣ

ರಾಶಿಗಳಿಗೆ ಗ್ರಹಣ ಫಲ

ಶುಭ ಫಲ	ಮಿಥುನ	ಕಟಕ	ವೃಶ್ಚಿಕ	ಕುಂಭ
ಮಿಶ್ರ ಫಲ	ಸಿಂಹ	ತುಲಾ	ಧನುಸ್ಸು	ಮೀನಾ
ಅಶುಭ ಫಲ	ಮೇಷ	ವೃಷಭ	ಕನ್ಯಾ	ಮಕರ

ಶ್ರೀ ಶುಭಕೃತು ನಾಮ ಸಂವತ್ಸರ ಕಾರ್ತಿಕ ಮಾಸ ಶುಕ್ಲ ಪಕ್ಷ ಪೂರ್ಣಿಮಾ ತಾ. 8.11.2022 ಮಂಗಳವಾರ ಮೇಷ ರಾಶಿಯಲ್ಲಿ, ಭರಣಿ ನಕ್ಷತ್ರದಲ್ಲಿ ರಾಹುಗ್ರಸ್ಥ ಗ್ರಸ್ತೋದಯ ಚಂದ್ರಗ್ರಹಣ ಸಂಭವಿಸಲಿದೆ. ಗ್ರಹಣವು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಚಂದ್ರೋದಯಾ ನಂತರ ಗ್ರಹಣ ಮೋಕ್ಷ ಮಾತ್ರ ಕಾಣಿಸುತ್ತದೆ. ಮೋಡವಿಲ್ಲದಿದ್ದರೆ ಬರಿಗಣ್ಣಿನಿಂದ ನೋಡಬಹುದು. ಗ್ರಹಣಾಚರಣೆ ಇರುತ್ತದೆ.

ಭೋಜನ ವಿಚಾರ : ತಾ. 8.11.2022 ಮಂಗಳವಾರ ಬಾಲಕರು, ವೃದ್ಧರು, ರೋಗಿಗಳು, ಆಶಕ್ತರು ಈ ದಿನ ಹಗಲು ಪೂರ್ವಾಹ್ನ 11.50 ಗಂಟೆಯವರೆಗೂ ಆಹಾರ ಸೇವಿಸಬಹುದು.

ತರ್ಪಣ ವಿಚಾರ : ತಾ. 8.11.2022 ಮಂಗಳವಾರ ಗ್ರಹಣ ಮಧ್ಯೆ ಮೋಕ್ಷವಾಗುವುದಕ್ಕೆ ಮೊದಲು ತರ್ಪಣ ನಡೆಸತಕ್ಕದ್ದು.

ಶಾಂತಿ ವಿಚಾರ

ಭರಣಿ ನಕ್ಷತ್ರದವರು, ಮೇಷ ರಾಶಿಯವರು ಈ ಕೆಳಗೆ ಕೊಟ್ಟಿರುವ ಶ್ಲೋಕವನ್ನು ಒಂದು ಕಾಗದದ ಮೇಲೆ ಬರೆದು ಗ್ರಹಣ ಮುಗಿಯುವವರೆಗೂ ತಮ್ಮ ಬಳಿ ಇಟ್ಟುಕೊಂಡಿದ್ದು, ಗ್ರಹಣ ಮೋಕ್ಷಾ ನಂತರ, ಶುದ್ಧ ಚಂದ್ರ ದರ್ಶನಾ ನಂತರ ಯಥಾಶಕ್ತಿ ದಕ್ಷಿಣೆ, ಅಕ್ಕಿ, ಕರಿ ಉದ್ದಿನಕಾಳು ಸಮೇತ ದಾನ ಮಾಡತಕ್ಕದ್ದು.

ಗ್ರಹಣ ಸ್ಪರ್ಶಕಾಲ	ಗ್ರಹಣ ಮಧ್ಯಕಾಲ	ಗ್ರಹಣ ಮೋಕ್ಷಕಾಲ
ಮಧ್ಯಾಹ್ನ 2.38 ಗಂಟೆ	ಅಪರಾಹ್ನ 4.29 ಗಂಟೆ	ಸಾಯಂಕಾಲ 6.19 ಗಂಟೆ

ಶ್ರಾದ್ಧ ವಿಚಾರ : ತಾ. 8.11.2022 ಮಂಗಳವಾರ ನಡೆಸಬೇಕಾದ ಕಾರ್ತಿಕ ಶುಕ್ಲ ಪೂರ್ಣಿಮಾ ಶ್ರಾದ್ಧವನ್ನು ತಾ. 9.11.2022 ಬುಧವಾರ ಕೃಷ್ಣ ಪಾಡ್ಯ ದಿನ ನಡೆಸತಕ್ಕದ್ದು.

ಶ್ಲೋಕ : ಯೋ ಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ।

ಚಂದ್ರಗ್ರಹೋಪರಾಗೋತ್ಥಾ ಗ್ರಹಪೀಡಾಂ ವ್ಯಪೋಹತು॥
ಯೋ ಸೌ ದಂಡಧರೋ ದೇವಃ ಯಮೋ ಮಹಿಷಾವಾಹನಃ।
ಚಂದ್ರಗ್ರಹ್ಯೋಪರಾಗೋತ್ಥಾ ಗ್ರಹಪೀಡಾಂ ವ್ಯಪೋಹತು॥
ಯೋ ಸೌ ಶೂಲಧರೋ ದೇವಃ ಪಿನಾಕಿ ವೃಷವಾಹನಃ।
ಚಂದ್ರಗ್ರಹೋಪರಾಗೋತ್ಥಾ ಗ್ರಹಪೀಡಾಂ ವ್ಯಪೋಹತು॥
(ವ್ಯಪೋಹತು ಎಂದರೆ ನಿವಾರಣೆಯಾಗಲಿ ಎಂದು ಅರ್ಥ)

ಸೂಚನೆ: ಧರ್ಮಶಾಸ್ತ್ರ ಗ್ರಂಥದಲ್ಲಿ ತಿಳಿಸಿರುವ ರೀತಿ ಗ್ರಹಣಾಚರಣೆಯನ್ನು ಬರೆದಿರುತ್ತೇವೆ. ಅದರಂತೆ ಆಚರಿಸುವುದು, ಆಚರಿಸದಿರುವುದು ಮಹಾಜನಗಳ ವೈಯಕ್ತಿಕ ಅಭಿಪ್ರಾಯಕ್ಕೆ ಬಿಟ್ಟಿದ್ದು.

–ಚೈತನ್ಯ ಶ್ರೀ ವಿ.ಕೇಶಮೂರ್ತಿ,
ಜ್ಯೋತಿಷ ವಿದ್ವಾಂಸ

ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಎತ್ತಿಹಿಡಿದ 'ಸುಪ್ರೀಂ' ನಿರ್ಧಾರಕ್ಕೆ ಹೆಚ್.ವಿ. ರಾಜೀವ್ ಸ್ವಾಗತ



ಮೈಸೂರು, ನ.7–ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿರುವುದನ್ನು ಮುಡಾ ಮಾಜಿ ಅಧ್ಯಕ್ಷ ಹಾಗೂ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಆದ ಹೆಚ್.ವಿ.ರಾಜೀವ್ ಸ್ವಾಗತಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಕೇಂದ್ರ ಸರ್ಕಾರ ತಂದಿದ್ದ ಐತಿಹಾಸಿಕ ತಿದ್ದುಪಡಿಯನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿರುವುದು ಅತ್ಯಂತ ಸ್ವಾಗತಾರ್ಹ ನಿರ್ಣಯವಾಗಿದೆ. ಯಾವುದೇ ಮೀಸಲಾತಿಯಡಿ ಬಾರದ, ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಿರುವುದು ಸಮ–ಸಮಾಜ ನಿರ್ಮಾಣ ಹಾಗೂ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಒಂದು ಅತೀ ದೊಡ್ಡ ನಿರ್ಣಯ ನರೇಂದ್ರ ಮೋದಿಯವರದ್ದಾಗಿದೆ.

ಯಾವುದೇ ಮೀಸಲಾತಿಗೆ ಸೇರದ ಜಾತಿ ಜನಾಂಗದವರು ಬಡತನದಿಂದ ಗುಣಮಟ್ಟದ ಶಿಕ್ಷಣ ಪಡೆಯಲಾಗದೆ, ಸ್ವತಃ ವ್ಯಾಪಾರ ಉದ್ದಿಮೆ ಪ್ರಾರಂಭಿಸಲಾಗದೆ, ಪರದಾಡುವ ಸ್ಥಿತಿಯಲ್ಲಿರುವ ಕೋಟ್ಯಾಂತರ ಮೇಲ್ವರ್ಗದ ಬಡ ಜನರ ಸ್ಥಿತಿಯನ್ನು ಅರ್ಥ ಮಾಡಿಕೊಂಡ ಕೇಂದ್ರ ಸರ್ಕಾರ ಅತ್ಯಂತ ಮಹತ್ವದ ತಿದ್ದುಪಡಿಯೊಂದಿಗೆ ಮೀಸಲಾತಿ ನೀಡಿರುವುದು ಸಮ– ಸಮಾಜ ನಿರ್ಮಾಣದ ಒಂದು ಮಹತ್ವದ ಹೆಜ್ಜೆಯಾಗಿದೆ ಎಂದು ಬಣ್ಣಿಸಿದ್ದಾರೆ.

ರೈಲ್ವೆ ನಿವೃತ್ತ ವೇತನದಾರರ ಸಂಘದ ಮಾಸಿಕ ಸಭೆ

ಮೈಸೂರು, ನ. 7 – ರೈಲ್ವೆ ನಿವೃತ್ತ ವೇತನದಾರರ ಕ್ಷೇಮಾಭಿವೃದ್ಧಿ ಸಂಘದ ಮಾಸಿಕ ಸಭೆಯು ನ. 12 ರಂದು ಬೆಳಗ್ಗೆ 10 ಗಂಟೆಗೆ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಕಚೇರಿ ಆವರಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಭಾರತೀಯ ಅಂಚೆ ಇಲಾಖೆ ಹಿರಿಯ ಪ್ರಬಂಧಕ ಸುಧಾಕರ್ ಭಾಗವಹಿಸಿ ಇಲಾಖೆಯ ನಾನಾ ಬಗೆಯ ಸೇವೆಗಳನ್ನು ತಿಳಿಸುವರು.

ದೀಪೋತ್ಸವಕ್ಕೆ ಸನಾತನ ಧರ್ಮದಲ್ಲಿ ಸಾಕಷ್ಟು ಮಹತ್ವದ ಸ್ಥಾನವಿದೆ

ದತ್ತ ವಿಜಯಾನಂದ ಶ್ರೀ ಅಭಿಮತ





ಮೈಸೂರು ಅಶೋಕಪುರಂನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯ ಶ್ರೀ ಕತ್ತಿ ಮುನೇಶ್ವರ ಮತ್ತು ಶ್ರೀ ಪಟ್ಟಲದಮ್ಮ ದೇವಸ್ಥಾನದಲ್ಲಿ ರಾಷ್ಟ್ರೀಯ ಹಿಂದೂ ಸಮಿತಿ ವತಿಯಿಂದ ಆಯೋಜಿಸಿದ್ದ 2ನೇ ಕಾರ್ತಿಕ ಸೋಮವಾರ ದೀಪೋತ್ಸವ ಕಾರ್ಯಕ್ರಮಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಉಪಸ್ಥಿತರಿದ್ದರು.

ಮೈಸೂರು, ನ.7(ಎಸ್‌ಪಿಎನ್)– ದೀಪೋತ್ಸವಕ್ಕೆ ಸನಾತನ ಧರ್ಮದಲ್ಲಿ ಸಾಕಷ್ಟು ಮಹತ್ವದ ಸ್ಥಾನವಿದೆ. ಕಾರ್ತಿಕ ಮಾಸದ ದೀಪೋತ್ಸವ ಎಲ್ಲರನ್ನೂ ಒಳಗೊಳ್ಳುವ ಆಚರಣೆಯಾಗಿದೆ ಎಂದು ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಅಶೋಕಪುರಂನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯ ಶ್ರೀ ಕತ್ತಿ ಮುನೇಶ್ವರ ಮತ್ತು ಶ್ರೀ ಪಟ್ಟಲದಮ್ಮ ದೇವಸ್ಥಾನದಲ್ಲಿ ರಾಷ್ಟ್ರೀಯ ಹಿಂದೂ ಸಮಿತಿ ವತಿಯಿಂದ 2ನೇ ಕಾರ್ತಿಕ ಸೋಮವಾರ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸನಾತನ ಧರ್ಮದಲ್ಲಿ ದೀಪ ಕುರಿತು ಅನೇಕ ಅರ್ಥಗಳಿವೆ. ಹಾಗಾಗಿ ಪೌರ ಕಾರ್ಮಿಕ ನಡುವೆ ಈ ಬಾರಿ 2ನೇ ಕಾರ್ತಿಕ ಸೋಮವಾರದ ದೀಪೋತ್ಸವದಲ್ಲಿ ಭಾಗಿಯಾಗಿ, ಆಚರಣೆ ಮಾಡುತ್ತಿರುವುದು ನನಗೆ ಸಂತಸ ತಂದಿದೆ. ಒಂದು ದೀಪವನ್ನು ಹಚ್ಚಲು ಒಬ್ಬರು ಎಣ್ಣೆ ಹಾಕಬೇಕು. ಮತ್ತೊಬ್ಬರು ಬತ್ತಿ ಹೊಸೆದು ಹಾಕಬೇಕು. ಮಗದೊಬ್ಬರು ದೀಪವನ್ನು ಹಚ್ಚಿ ಇಡೀ ಕಾರ್ಯಕ್ರಮಕ್ಕೆ ಕಳೆಗಟ್ಟುವಂತೆ ಮಾಡುತ್ತಾರೆ. ನಂತರ ಇಡೀ ಪ್ರದೇಶದ ಬೆಳಕಿನಿಂದ ಕೂಡಿರುತ್ತದೆ. ಕಾಲೋನಿಯ ನಿವಾಸಿಗಳು ಭಕ್ತಿ–ಭಾವದಿಂದ ದೀಪೋತ್ಸವ ಆಚರಿಸಿದರೆ, ಅದಕ್ಕೊಂದು ವಿಶೇಷ ಅರ್ಥವಿದೆ ಎಂದ ಶ್ರೀಗಳು, ಇತ್ತೀಚೆಗೆ ನಮ್ಮ ಆಶ್ರಮದಲ್ಲಿ 83 ವರ್ಷದ ಅಜ್ಜಿಯೊಬ್ಬರು ಭಗವದ್ಗೀತೆ ಪಠಣ ಮಾಡಿದ್ದಾರೆ. ಅದರಂತೆಯೇ 5 ವರ್ಷದ ಪುಟಾಣಿ ಮಗುವೊಂದು ಭಗವದ್ಗೀತೆಯನ್ನು ಪಠಣ ಮಾಡಿರುವುದು ವಿಶೇಷ ಎಂದರು.

ಇದೇ ಮೊದಲ ಬಾರಿಗೆ ಕಾರ್ತಿಕ ಮಾಸದ ದೀಪೋತ್ಸವವನ್ನು ಆಶ್ರಮದಿಂದ ಹೊರಗಡೆ ಹಮ್ಮಿಕೊಳ್ಳಲಾಗಿದೆ. ಇಷ್ಟು ದಿನ ಬೇರೆ ಧಾರ್ಮಿಕ ಸ್ಥಳದಲ್ಲಿ ಹಮ್ಮಿಕೊಂಡು ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲೂ ಈ ಬಾರಿ ಪೌರ ಕಾರ್ಮಿಕರ ಕಾಲೋನಿಯಲ್ಲಿ ದೀಪೋತ್ಸವ ಹಮ್ಮಿಕೊಂಡಿರುವುದು ಸಂತಸ ತಂದಿದೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮ ಕುರಿತು ಹಿರಿಯ ಶ್ರೀಗಳಿಗೆ ತಿಳಿಸಿದಾಗ ತುಂಬಾ ಸಂತೋಷ ಪಟ್ಟ ಅಂಶವನ್ನು ಸಭೆಗೆ ತಿಳಿಸಿದರಲ್ಲದೆ, ಈ ದೇವಸ್ಥಾನದಲ್ಲಿ ನಿತ್ಯ ಪೂಜೆ ಮಾಡುತ್ತಿರುವ ಅರ್ಚಕರಿಗೆ ಈ ಹಿಂದೆ ನಮ್ಮ ಆಶ್ರಮದಲ್ಲಿ ಪೂಜಾ ವಿಧಿ–ವಿಧಾನಗಳ ಬಗ್ಗೆ ತರಬೇತಿ ನೀಡಲಾಗಿದೆ. ತರಬೇತಿ ಪಡೆದವರು ಉತ್ತಮವಾಗಿ ದೇವರ ಪೂಜಾ ಕೈಂಕರ್ಯ ಸಲ್ಲಿಸುತ್ತಿದ್ದಾರೆ ಎಂದರು.

ನಂತರ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಬೇರೆಯವರಿಗಿಂತ ಈ ಕಾಲೋನಿಯ ತಾಯಿಂದಿರು, ಮಕ್ಕಳು ಅತ್ಯಂತ ಭಕ್ತಿ–ಭಾವದಿಂದ ನಮ್ಮ ಧರ್ಮದ ಆಚರಣೆ ಮಾಡುತ್ತಾರೆ. ಅದಕ್ಕೆ ಈ ದೀಪೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಜನರೇ ಸಾಕ್ಷಿ ಎಂದರು.

ಈ ವೇಳೆ ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ರಾಷ್ಟ್ರೀಯ ಹಿಂದೂ ಸಮಿತಿ ಅಧ್ಯಕ್ಷ ವಿಕಾಶ್ ಶಾಸ್ತ್ರೀ, ಕತ್ತಿಮುನೇಶ್ವರ ಮತ್ತು ಪಟ್ಟಲದಮ್ಮ ದೇವಸ್ಥಾನದ ಗುರುನಾಥ್, ಮೈಸೂರು ನಗರ ಪಾಲಿಕೆ, ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾಸಂಘದ ಎನ್.ಮಾರ, ಮುಖಂಡರಾದ ರಂಗಸ್ವಾಮಿ, ಸುಬ್ರಹ್ಮಣಿ, ತೇಜಸ್, ಗಗನ್, ವಿನಯ್ ಸೇರಿದಂತೆ ಇತರರು ಉಪಸ್ಥಿತಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಟ ಒಬ್ಬಂಟಿಯಲ್ಲ; ಒಬ್ಬಂಟಿ ನಟನಾಗಲಾರ

- ರಂಗಾಯಣ ಮಾಜಿ ನಿರ್ದೇಶಕ ಜನ್ನಿ ಅಭಿಮತ
- ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಸಂವಾದ



ಮೈಸೂರು, ನ.7(ಎಂಕೆ)– ಸಾಮಾಜಿಕ ಬದುಕಿನೊಳಗೆ ಹಂಚಿಕೆದಾರನಾಗಿ ಕೆಲಸ ಮಾಡುವ ನಟ ಒಬ್ಬಂಟಿಯಲ್ಲ. ದೇಹ, ಮನಸ್ಸು ಮತ್ತು ಉಸಿರಾಟವನ್ನು ಏಕಾಗ್ರತೆಯಲ್ಲಿರಿಸಿ ಕೊಂಡು ಅಭಿನಯಿಸುತ್ತಲೇ ಚಿಂತನಾಶೀಲನಾಗುತ್ತಾನೆ ಎಂಬುದು ನಟನೆಯ ಮೇಲೆ ನಟರು(ಆಕ್ಟಿಂಗ್ ಆನ್ ಆಕ್ಟರ್) ಸಂವಾದದಲ್ಲಿ ವ್ಯಕ್ತವಾಯಿತು.

ಮೈಸೂರು ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ನಟ, ನಟನೆ, ನಿರ್ದೇಶನ ಹಾಗೂ ಕಲಾವಿದರ ಪ್ರಸ್ತುತೆ ಕುರಿತು ಚರ್ಚಿಸಲಾಯಿತು. ಖ್ಯಾತ ಹಿಂದಿ ರಂಗಭೂಮಿ ಕಲಾವಿದ ಪಂಕಜ್ ತ್ರಿಪಾಠಿ ಮಾತನಾಡಿ, ಅಭಿನಯ ಎಂಬುದು ಸ್ಕ್ರಿಪ್ಟ್ ಅಥವಾ ಸಂಭಾಷಣೆ ಮೇಲೆ ಅವಲಂಬಿತವಾರುತ್ತದೆ. ನಿರಂತರ ತರಬೇತಿಯಿಂದ ನಟನೆಯ ಕೌಶಲ್ಯತೆ ಪಡೆಯಲು ಸಾಧ್ಯ ಎಂದು ತಿಳಿಸಿಕೊಟ್ಟರಲ್ಲದೆ ಕನ್ನಡದಲ್ಲಿ 'ಚಿಗುರಿದ ಕನಸು' ಚಿತ್ರದಲ್ಲಿನ ತಮ್ಮ ಅಭಿನಯ ಹಾಗೂ ಡಾ.ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಮಾತನಾಡಿದ್ದ ಅನುಭವವನ್ನು ಬಿಚ್ಚಿಟ್ಟರು.

> ಬದುಕು ಮತ್ತು ಕಲೆ ಬೇರೆ ಬೇರೆಯಲ್ಲ. ಬದುಕಿನ ಜೊತೆಗೆ ಕಲೆ ಮಿಳಿತವಾಗಿದೆ. ದೇಹವೇ ಒಂದು ಅದ್ಭುತವಾದ ರಂಗ ಪರಿಕರ, ದೇಹದ ವಿಸ್ಮಯವನ್ನು ತಾಯಿ ಕಣ್ಣಿನಿಂದ ನೋಡಿದರೆ ಸಕಲವೂ ಸುಂದರವೇ.
> – ದು.ಸರಸ್ವತಿ, ಹಿರಿಯ ರಂಗಭೂಮಿ ಕಲಾವಿದೆ

ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್(ಜನ್ನಿ) ಮಾತನಾಡಿ, ನಟನು ಒಬ್ಬಂಟಿಯಲ್ಲ. ಒಬ್ಬಂಟಿಯಾದರೆ ನಟನಾಗಲು ಸಾಧ್ಯವಿಲ್ಲ. ಹಾಳಾಗುತ್ತಾನೆ. ಅವನೊಬ್ಬ ಸಾಮಾಜಿಕ ಕಳಕಳಿಯುಳ್ಳವನು. ಯಾವಾಗಲೂ ಅತ್ಯಂತ ಸೂಕ್ಷ್ಮವಾಗಿ, ಜೀವಂತವಾಗಿ, ಸಮಾಜದ ಬದುಕಿನ ಒಳಗೆ ತಾನು ಹಂಚಿಕೆದಾರನಾಗಿ ಕೆಲಸ ಮಾಡುತ್ತಾನೆ. ನಟನೆಯಲ್ಲಿ ಕೊಡುವುದು ಮತ್ತು ತೆಗೆದುಕೊಳ್ಳುವುದ ಹೊರತು ನೆಂಟಸ್ತಿಕೆ ಇರಬಾರದು. ಅಕಸ್ಮಾತ್ ನೆಂಟಸ್ತಿಕೆ ಇದ್ದರೆ ಅದು ಅಪರಾಧವಾಗುತ್ತದೆ ಎಂದರು.

ಶ್ರಮಜೀವಿಯಾದರಷ್ಟೇ ಪ್ರಖ್ಯಾತಿ ಪಡೆಯಲು ಸಾಧ್ಯ. ನಟನು ನೊಂದವರ, ಬದುಕಿನ ಪರ, ನಡೆ–ನುಡಿಯ ಪರ ಇರುತ್ತಾನೆ. ಸಾಧ್ಯವಾದಷ್ಟು ಸ್ವಾಭಾವಿಕವಾಗಿರಲು ಪ್ರಯತ್ನ ಮಾಡುತ್ತಿರುತ್ತಾನೆ. ಅಸಾಮಾನ್ಯನಾದರೆ ಸಾಮಾನ್ಯರ ಕೈಗೆ ಸಿಗುವುದು ಕಷ್ಟ, ಆದ್ದರಿಂದ ಸಾಮಾನ್ಯರಂತೆ ಆತನು ಸಾಮಾನ್ಯನಾಗಿರಬೇಕು. ಮುಗ್ಧತೆ, ಪ್ರೀತಿ, ಸಹನೆ ಇಲ್ಲದೆ ನಟ ಹುಟ್ಟಲು ಸಾಧ್ಯವೇ ಇಲ್ಲ ಎಂದು ತಿಳಿಸಿದರು.

ಇವತ್ತು ನಟರಾಗಬೇಕೆನ್ನುವವರು ನಟನೆಯ ಸೂಕ್ಷ್ಮತೆ ಅರ್ಥಮಾಡಿಕೊಳ್ಳದೆ ಇರುವುದರಿಂದ ನಟನೆ ಪ್ರಖ್ಯಾತಿ ಎಂಬ ಮುಖವಾಡ ಪಡೆದುಕೊಳ್ಳುತ್ತಿದೆ. ದೇಹ ಮತ್ತು ಮನಸ್ಸು ಕಲ್ಮಶವಾಗುತ್ತಿದೆ ಎನ್ನುತ್ತಾ ನೋಡಲು ಸರಳವಾಗಿದ್ದರೂ ಅಭಿನಯ ನೋಡುಗರನ್ನು ಸೆಳೆಯುವಂತಿರಬೇಕು ಎಂದು ನಟನೆ ಕುರಿತು ಉದಾಹರಣೆ ಸಹಿತ ತಿಳಿಸಿಕೊಟ್ಟರು.

ರಂಗ ನಿರ್ದೇಶಕ ಶ್ರೀಪಾದ ಭಟ್ ಮಾತನಾಡಿ, ನಿರ್ದೇಶಕ ನಟನೆಯ ಸಂಘಟಕ. ಅನ್ವೇಷಣೆಯೇ ಆತನ ಕೆಲಸವಾಗಿದೆ. ನಟರನ್ನು ಚಿಂತನಾಶೀಲರನ್ನಾಗಿ ಬೆಳೆಸುವುದು ನಿರ್ದೇಶಕನ ಪಾತ್ರವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನಕಲು ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಯೋಚಿಸುವ ಅನಿವಾರ್ಯತೆ ಇದೆ ಎಂದರು.

ರಂಗಕರ್ಮಿ ಯತೀಶ್ ಎನ್.ಕೊಳ್ಳೆಗಾಲ ಮಾತನಾಡಿ, ಸದಾ ಒಂದಲ್ಲಾ ಒಂದು ಬಗೆಯ ಚಟುವಟಿಕೆಯಿಂದ ಇರುತ್ತಿದ್ದ ಕಲಾವಿದರನ್ನು ಸುಮ್ಮನೇ ಕೂರಿಸಿದ್ದು ಕೊರೊನಾ ಸಂದರ್ಭದಲ್ಲಿ ನಟನೆ ಬದಲಿಗೆ ನಟನೆಯ ಕುರಿತು ಅಧ್ಯಯನವಾಯಿತು. ನಟನಿಗೆ ದೇಹ, ಮನಸ್ಸು ಮತ್ತು ಉಸಿರಾಟದಲ್ಲಿ ನಿಯಂತ್ರಣವಿರಬೇಕು. ನಿರ್ದೇಶಕನಿಗಿಂತಲೂ ಹೆಚ್ಚು ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು. ಕಲಾವಿದ ಕೆ.ಪಿ.ಲಕ್ಷ್ಮಣ್, ಬರಹಗಾರ್ತಿ ಸಂಧ್ಯಾ ಮೆಂಡೋನ್ಸಾ, ಪ್ರೀತಿ ನಾಗರಾಜ್ ಉಪಸ್ಥಿತರಿದ್ದರು.

'ಭಾರತೀಯ ಹಬ್ಬಗಳು' ಸಾಂಸ್ಕೃತಿಕ ಉತ್ಸವ

ವಾದ್ಯಗಳ ನಾದಮಯದಲ್ಲಿ ಶ್ರೋತೃಗಳು ತಲ್ಲೀನ



ಮೈಸೂರು, ನ.7(ಎಂಕೆ)– ಸುಂದರ ಇಳಿಸಂಜೆಯಲ್ಲಿ ಕಿವಿಗೆ ಮುದ ನೀಡಿದ ವಾದ್ಯ ಪರಿಕರಗಳ ಲಯ ಮಿಲನ... ಕೇಳುಗರ ಕಿವಿಗೆ ತಂಪೆರೆದ ತಾಳ ವಾದ್ಯ...

ಮೈಸೂರಿನ ಕಲಾಮಂದಿರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿರುವ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ದಲ್ಲಿ ಹತ್ತಾರು ಬಗೆಯ ವಾದ್ಯ ಪರಿಕರಗಳ ಮಿಲನ ಕಲಾರಸಿಕರ ಸಂಗೀತ ದಾಹವನ್ನು ನೀಗಿಸಿತು.

ವಿದ್ವಾನ್ ಬಿ.ಸಿ.ಮಂಜುನಾಥ್ ನಿರ್ದೇಶನದಲ್ಲಿ ಮೂಡಿದ ವಾದ್ಯ ಸಂಗೀತ ಲಯ ಮಿಲನ ಸಂಗೀತ ಪ್ರಿಯರ ಮನಗೆದ್ದಿತು. ಹತ್ತಾರು ರಾಗಗಳನ್ನು ಸುಮಧುರವಾಗಿ ನುಡಿಸುವ ಮೂಲಕ ಎಲ್ಲರನ್ನು ರಂಜಿಸಿದರು. ಕೊಳಲು ವಾದನದಲ್ಲಿ ಎಲ್.ವಿ. ಮುಕುಂದ್, ಪಿಟೀಲು ವಾದನದಲ್ಲಿ ಜೆ.ಕೆ.ಶ್ರೀಧರ್, ಮೃದಂಗದಲ್ಲಿ ಬಿ.ಸಿ.ಮಂಜುನಾಥ್, ಖಂಜಿರ ವಾದನದಲ್ಲಿ ಎ.ಎಸ್.ಎನ್.ಸ್ವಾಮಿ, ಘಟಂನಲ್ಲಿ ಎಸ್.ಎನ್.ನಾರಾಯಣಮೂರ್ತಿ, ಮೋರ್ಚಿಂಗ್‌ನಲ್ಲಿ ಭಾಗ್ಯಲಕ್ಷ್ಮಿ ಎಂ.ಕೃಷ್ಣ, ಢೋಲಕ್ ವಾದನದಲ್ಲಿ ವಿ.ಶ್ರೀಧರ, ತಬಲಾ ವಾದನದಲ್ಲಿ ರೂಪಕ್ ಕಲ್ಲೂರ್‌ಕರ್, ಚಂಡೆ ಹರ್ಷ ಸಾಮಗ, ಡ್ರಮ್ಸ್‌ನಲ್ಲಿ ಕಾರ್ತಿಕ್ ಮಣಿ ಹಾಗೂ ಕೊನ್ನಕೋಲ್‌ನಲ್ಲಿ ಸೋಮಶೇಖರ್ ಜೋಯಿಸ್ ಮೋಡಿ ಮಾಡಿದರು.

> **ಬಿವಿಬಿ ಹುಟ್ಟುಹಬ್ಬ...**
> ನ.7ರ 1938ರಂದು ಮುಂಬೈನಲ್ಲಿ ಡಾ.ಕೆ.ಎಂ.ಮುನ್ಷಿ ಅವರು ಸ್ಥಾಪಿಸಿದ ಭಾರತೀಯ ವಿದ್ಯಾಭವನಕ್ಕೆ ಇಂದು ಹುಟ್ಟುಹಬ್ಬ. ಅಂದಿನಿಂದಲೂ ಭಾರತೀಯ ಕಲೆ–ಸಾಹಿತ್ಯ, ಸಂಸ್ಕೃತಿ ಬೆಳೆಸಲು ಹಲವು ಬಗೆಯ ಚಟುವಟಿಕೆಗಳ ಮೂಲಕ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದೊಂದಿಗೆ ಏಳು ದಿನಗಳ ಸಾಂಸ್ಕೃತಿಕ ಉತ್ಸವ ಆಯೋಜಿಸಲಾಗಿದೆ.
> – ಕೆ.ಬಿ.ಗಣಪತಿ, ಅಧ್ಯಕ್ಷರು, ಬಿವಿಬಿ ಮೈಸೂರು ಕೇಂದ್ರ

ದೇಶದಲ್ಲಿಯೇ ಮೈಸೂರು ಸಾಂಸ್ಕೃತಿಕ ನಗರಿ: ವಾದ್ಯ ಸಂಗೀತ ಕಾರ್ಯಕ್ರಮದ ಬಳಿಕ ಮಾತನಾಡಿದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ಅವರು, ಮೈಸೂರು ಮಹಾರಾಜರನ್ನು ಹೊರತು ದೇಶದ ಮತ್ಯಾವ ರಾಜಮನೆತನವೂ ದೊಡ್ಡ ಮಟ್ಟದಲ್ಲಿ ಕಲೆ–ಸಾಹಿತ್ಯ, ಸಂಸ್ಕೃತಿಗೆ ಪ್ರೋತ್ಸಾಹ ನೀಡಿಲ್ಲ. ಆದ್ದರಿಂದಲೇ ಮೈಸೂರನ್ನು ಸಾಂಸ್ಕೃತಿಕ ನಗರಿ ಎಂದು ಕರೆಯಲಾಗುತ್ತದೆ ಎಂದು ಹೇಳಿದರು.

ಒಂದು ವಾರಗಳ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮವನ್ನು ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳು ಜಂಟಿಯಾಗಿ ಆಯೋಜಿಸಲಾಗಿದೆ. ಇನ್ನೂ ಮೂರು ದಿನ ಬಾಕಿಯಿದ್ದು, ತ್ರಿಪುರ ಗುಡ್ಡಗಾಡು ಕಲಾವಿದರಿಂದ ನೃತ್ಯ ಪ್ರದರ್ಶನ, ಜಾನಪದ ಹಾಗೂ ಪಿಟೀಲು ವಾದನ ಕಾರ್ಯಕ್ರಗಳು ನಡೆಯಲಿವೆ. ಕಲಾಭಿಮಾನಿಗಳು ಭಾಗವಹಿಸಿ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದರು.

ಬಲಿಜ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸಲು ಆಗ್ರಹ



ಮೈಸೂರು, ನ.7(ಜಿಎ)–ಬಲಿಜ ಸಮುದಾಯವನ್ನು 2ಎ ಪಟ್ಟಿಗೆ ಸೇರ್ಪಡೆ ಮಾಡುವಂತೆ ಆಗ್ರಹಿಸಿ ನಗರದ ರಾಮಸ್ವಾಮಿ ವೃತ್ತದ ಬಳಿ ಕರ್ನಾಟಕ ಬಲಿಜ ಪ್ರವರ್ಗ–2ಎ ಮೀಸಲಾತಿ ಹೋರಾಟ ಸಮಿತಿಯು ಸೋಮವಾರ ಸಂಜೆ ಕ್ಯಾಂಡಲ್ ಹಿಡಿದು ಪ್ರತಿಭಟನೆ ನಡೆಸಿತು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ಕರ್ನಾಟಕ ಸರ್ಕಾರವು ವಿವಿಧ ಸಮುದಾಯಗಳಿಗೆ ಮೀಸಲಾತಿಯಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಅದರಂತೆ ಬಲಿಜ ಹಾಗೂ ಇದರ ಉಪಜಾತಿಗೆ ಸೇರಿರುವ ಸಮುದಾಯವು ಅತ್ಯಂತ ಹಿಂದುಳಿದ ಸಮುದಾಯಗಳಲ್ಲೊಂದಾಗಿದ್ದು, ಈ ಸಮುದಾಯ ಹಿಂದುಳಿದ ಜನಾಂಗದ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ ಅತೀ ಹಿಂದುಳಿದ ಈ ಸಮಾಜವನ್ನು 2ಎ ಪಟ್ಟಿಯಲ್ಲಿ ಸೇರ್ಪಡೆಗೊಳಿಸಬೇಕೆಂಬುದು ಈ ಸಮಾಜದ ಹಲವು ವರ್ಷಗಳ ಪ್ರಮುಖ ಬೇಡಿಕೆಯಾಗಿದೆ.

ಈ ಕುರಿತಂತೆ ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿನ ಬಲಿಜ ಮತ್ತು ಇದರ ಉಪಜಾತಿಗಳ ಅಧ್ಯಯನ ನಡೆಸಿ ಅಗತ್ಯವಾದ ಮಾಹಿತಿಗಳನ್ನು ಪಡೆದುಕೊಂಡಿದ್ದು, ಈ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸಬೇಕಾಗಿದೆ. ಅದರಂತೆ ರಾಜ್ಯ ಸರ್ಕಾರವು ಉದ್ಯೋಗ ಮತ್ತು ರಾಜಕೀಯ ಮೀಸಲಾತಿಯಡಿ ಬಲಿಜ ಸಮಾಜಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವ ಮೂಲಕ ನ್ಯಾಯ ದೊರಕಿಸಿಕೊಡುವುದು ಅವಶ್ಯಕವಾಗಿದೆ. ಆದರೆ ಹಿಂದುಳಿದ ಆಯೋಗವು ಈ ಸಮುದಾಯದ ಬಗ್ಗೆ ಅಧ್ಯಯನ ನಡೆಸಿ, ಪೂರ್ಣ ಪ್ರಮಾಣದ ಮಾಹಿತಿಯನ್ನು ಸರ್ಕಾರಕ್ಕೆ ಇದುವರೆವಿಗೂ ಸಲ್ಲಿಸಿಲ್ಲ.

ಹಾಗಾಗಿ ಈ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಹಿನ್ನಡೆಯಾಗಿದ್ದು, ಈ ಬಗ್ಗೆ ಹಿಂದಿನ ಸರ್ಕಾರಗಳಿಗೂ ಮನವಿ ಸಲ್ಲಿಸಲಾಗಿದೆ. ಪ್ರಸ್ತುತ ಸರ್ಕಾರವು ತಮ್ಮ ಅಧಿಕಾರಾವಧಿಯಲ್ಲಾದರು ಬಲಿಜ ಜನಾಂಗದ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕರ್ನಾಟಕ ಬಲಿಜ ಪ್ರವರ್ಗ–2ಎ ಮೀಸಲಾತಿ ಹೋರಾಟ ಸಮಿತಿಯ ನಗರ ಸಂಚಾಲಕ ಜಿ.ಮಂಜುನಾಥ್, ಮುಖಂಡರಾದ ಕೆ.ಲಿಂಗರಾಜು, ಎಂ.ಎಸ್.ದಾಮೋದರ್, ಕೆ.ಚಿನ್ನಸ್ವಾಮಿ, ಯತಿರಾಜ್, ಡಾ.ಕೃಷ್ಣಪ್ಪ, ಪಿ.ಕಾಮರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಜಲದರ್ಶಿನಿಯಲ್ಲಿ ವಾಲ್ಮೀಕಿ ಮಠದ ಪೂಜ್ಯರಾದ ಶ್ರೀ ಪ್ರಸನ್ನಾನಂದ ಸ್ವಾಮೀಜಿ, ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಛಲವಾದಿ ಪೀಠದ ಶ್ರೀ ಬಸವನಾಗಿ ದೇವ ಸ್ವಾಮೀಜಿ, ಶ್ರೀ ಸಂತ ಸೇವಲಾಲಾ ಸ್ವಾಮೀಜಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಗೌರವ ಸಮರ್ಪಣೆ ಮಾಡಿದರು. ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಾಯಕ ಮತ್ತು ದಲಿತ ಸಮುದಾಯದ ಬಹುತೇಕ ಮುಖಂಡರು ಹಾಜರಿದ್ದರು.



ಹಿರಿಯ ವಕೀಲರು ಹಾಗೂ ಖ್ಯಾತ ಉದ್ಯಮಿ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ಹೋಟೆಲ್ ಏರ್‌ಲೈನ್ಸ್‌ನಲ್ಲಿ ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶ್ ಕುಮಾರ್ ಹಾಗೂ ಹಿತೈಷಿಗಳು ಭಾರೀ ಹಾರ ಹಾಕಿ ಜನ್ಮದಿನದ ಶುಭಾಶಯ ಕೋರಿದರು.

'ಹಿಂದೂ' ಅರ್ಥ ಬಹಳ ಅಶ್ಲೀಲ: ಸತೀಶ್ ಜಾರಕಿಹೊಳಿ

ಚಿಕ್ಕೋಡಿ: 'ಹಿಂದೂ' ಭಾರತೀಯ ಪದವೇ ಅಲ್ಲ, ಪರ್ಷಿಯನ್ ಪದವಾಗಿದ್ದು, ಅದರ ಅರ್ಥ ಬಹಳ ಅಶ್ಲೀಲವಾಗಿದೆ ಎಂದು ಮಾಜಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.



ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಪಟ್ಟಣ ದಲ್ಲಿ ಮಾನವ ಬಂಧುತ್ವ ವೇದಿಕೆ ಯಿಂದ ಆಯೋಜಿಸಿದ್ದ ಮನೆ ಮನೆಗೆ ಬುದ್ಧ, ಬಸವ, ಅಂಬೇಡ್ಕರ್ ಎನ್ನುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತಕ್ಕೂ, ಪರ್ಷಿಯನ್‌ಗೂ ಏನ್ ಸಂಬಂಧ ಹಿಂದೂ ಭಾರತೀಯ ಪದವೇ ಅಲ್ಲ, ಅದು ಪರ್ಷಿಯನ್ ಪದ. ಹಿಂದೂ ನಮ್ಮದು ಹೇಗೆ ಆಯಿತು ಅನ್ನೋದು ಚರ್ಚೆ ಆಗಬೇಕಿದೆ. ಹಿಂದೂ ಪದದ ಅರ್ಥ ಬಹಳ ಅಶ್ಲೀಲವಾಗಿದೆ. ಅದು ನಿಮಗೆ ತಿಳಿದರೆ ನಿಮಗೆ ನಾಚಿಕೆ ಆಗುತ್ತೆ. ಎಲ್ಲಿಂದಲೋ ಬಂದಿರೋ ಧರ್ಮವನ್ನು ತಂದು ಒತ್ತಾಯಪೂರ್ವಕವಾಗಿ ಹೇರಲಾಗುತ್ತಿದೆ ಎಂದು ಹೇಳಿದರು. ಬಿಜೆಪಿ ನಾಯಕರು ಶಿವಾಜಿ ಬಗ್ಗೆ ಮಾತನಾಡುತ್ತಾರೆ. ಆದರೆ ಮಹಾತ್ಮಾ, ಜ್ಯೋತಿಬಾ ಫುಲೆ ಇಲ್ಲದಿದ್ದರೇ ಛತ್ರಪತಿ ಶಿವಾಜಿ ಅವರ ಇತಿಹಾಸ ಹೊರಗೆ ಬರುತ್ತಿರಲಿಲ್ಲ. ಅವರ ಇತಿಹಾಸವನ್ನು ಮುಚ್ಚಿಡಲಾಗಿತ್ತು. ಸತ್ಯ ಶೋಧಕ ಸಂಸ್ಥೆಯಿಂದ ಅವರ ಇತಿಹಾಸ ಹೊರಗೆ ಬಂದಿದೆ. ಶಿವಾಜಿ ಎಲ್ಲರನ್ನು ಸಮಾನತೆಯಿಂದ ನೋಡುತ್ತಿದ್ದರು. ವಿಶ್ವದಲ್ಲಿ ಶಿವಾಜಿ ಅವರ ಒಂದೇ ಪೇಂಟಿಂಗ್ ಇರುವುದು ಅದನ್ನು ಯಾರೋ ಕುಲಕರ್ಣಿ, ದೇಶಪಾಂಡೆ ಅವರು ತಯಾರಿಸಿಲ್ಲ. ಮೊಹಮ್ಮದ್ ಮದಾರಿ ಎನ್ನುವ ಚಿತ್ರಕಾರ ಆ ಪೇಂಟಿಂಗ್ ತಯಾರಿಸಿದ್ದರು ಎಂದು ತಿಳಿಸಿದ್ದಾರೆ.

ಪ್ರತಾಪಗಡ್ ಕೋಟೆಯಲ್ಲಿ ಶಿವಾಜಿ ಮಸೀದಿ ನಿರ್ಮಾಣ ಮಾಡಿರುವ ಇತಿಹಾಸವಿದೆ. ಅವರ ಕಾಲದಲ್ಲಿ ಸಮಾನತೆಯಿತ್ತು. ಆದರೆ ಈಗ ಮರಾಠಾ, ಮುಸ್ಲಿಂ, ದಲಿತರ ನಡುವೆ ದಿನನಿತ್ಯ ಜಗಳವಾಗುತ್ತಿವೆ. ಬಸವಣ್ಣ, ಶಿವಾಜಿ, ಸಂತ ತುಕಾರಾಮ ಸೇರಿದಂತೆ ಮಹಾನ್ ಪುರುಷರ ಇತಿಹಾಸವನ್ನು ತಿರುಚಿ ತೋರಿಸಲಾಗುತ್ತಿದೆ. ಬಸವಣ್ಣವರ ಕಾಲದಲ್ಲಿ ಸಾಕಷ್ಟು ಹತ್ಯೆಗಳು ನಡೆದವು. ಅದನ್ನು ಮುಸ್ಲಿಮರು ಮಾಡಿದ್ರಾ? ಒಂದು ಲಕ್ಷ ಜೈನರ ಹತ್ಯೆಗಳಾಗಿವೆ ಎಂದು ಜೈನ್ ಸ್ವಾಮೀಜಿ ಹೇಳಿದ್ದಾರೆ. ಜೈನರ ಹತ್ಯೆಯನ್ನು ಆದೀಲ್ ಶಾ ಮಾಡಿದ್ರಾ? ಈ ಎಲ್ಲದರ ಕುರಿತು ಚರ್ಚೆ ಆಗಬೇಕಿದೆ ಎಂದು ಜಾರಕಿಹೊಳಿ ಹೇಳಿದ್ದಾರೆ.

ಬಂಧುತ್ವ ಇಲ್ಲದ ಹಿಂದುತ್ವ ದೇಶಕ್ಕೆ ಅಪಾಯಕಾರಿ



ಚಿಕ್ಕೋಡಿ: ಬಂಧುತ್ವ ಇಲ್ಲದ ಹಿಂದುತ್ವ ದೇಶಕ್ಕೆ ಅಪಾಯಕಾರಿ. ದೇಶ ಅತ್ಯಂತ ಅಪಾಯದಲ್ಲಿದೆ. ಇಬ್ಬರು ದೇಶವನ್ನು ಮಾರುತ್ತಿದ್ದಾರೆ, ಇಬ್ಬರು ದೇಶವನ್ನು ಕೊಳ್ಳುತ್ತಿದ್ದಾರೆ ಎಂದು ಪರೋಕ್ಷವಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ವಿರುದ್ಧ ಜ್ಞಾನಪ್ರಕಾಶ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ದೇಶದಲ್ಲಿ ಆರು ನಿಮಿಷಕ್ಕೆ ಒಂದು ರೇಪ್ ಆಗುತ್ತಿದೆ ಮಂತ್ರದಿಂದ ದೇಶದಲ್ಲಿ ಏನು ಆಗುವುದಿಲ್ಲ, ನಿಮ್ಮನ್ನು ಮೂರ್ಖರನ್ನಾಗಿಸಲು ಯತ್ನ ನಡೆದಿದೆ. ಮಂತ್ರದಿಂದ ಭಾರತ ಆಗಬಾರದು ಬಂಧುತ್ವದಿಂದ ಭಾರತ ಆಗಬೇಕು. ಹಿಂದುತ್ವ ಹಾಗೂ ದೇವು ಎಂಬುದು ಸುಳ್ಳು ಕೋವಿಡ್ ಬಂದಾಗ ದೇವು ಎಲ್ಲಿ ಹೋಗಿದ್ದ? ಎಂದು ಪ್ರಶ್ನಿಸಿದರು. ದೇಶದಲ್ಲಿ ಬೆಂಕಿ ಬಿದ್ದಿದೆ, ಜಾತಿ, ಧರ್ಮಗಳ ನಡುವೆ ಬೆಂಕಿ ಬಿದ್ದಿದೆ. ಹೊಗಳ ರಾಜಕಾರಣ, ಹಣದ ರಾಜಕಾರಣ ನಡೆಯುತ್ತಿದೆ. ಹೆಣ ಬಿದ್ದರೆ, ಯಾವ ಪಕ್ಷದ ಹೆಣ ಅನ್ನುವ ರೀತಿಯಾಗಿದೆ. ಇನ್ನು ಮುಂದೆ ಹಿಂದುತ್ವ ಜೊತೆ ಅಲ್ಲ ಬಂಧುತ್ವ ಜೊತೆ ಚುನಾವಣೆ ನಡೆಯಬೇಕು. ದೇಶದಲ್ಲಿ ವ್ಯಕ್ತಿ ಪೂಜೆ ಅಪಾಯಕಾರಿ ಎಂದು ಅವರು ಹೇಳಿದ್ದಾರೆ.


ಹೇಳಿಕೆಗೆ ಖಂಡನೆ

ನವದೆಹಲಿ: ಹಿಂದೂ ಪದ ಅಶ್ಲೀಲ ಅರ್ಥ ಹೊಂದಿದೆ ಎಂದು ಹೇಳಿದ್ದ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ ವಿವಾದಾತ್ಮಕ ಹೇಳಿಕೆಯನ್ನು ಕಾಂಗ್ರೆಸ್ ಖಂಡಿಸಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲ ಅವರು ಸತೀಶ್ ಜಾರಕಿಹೊಳಿ ಹೇಳಿಕೆಯನ್ನು ಖಂಡಿಸಿದ್ದಾರೆ. ಹಿಂದೂ ಧರ್ಮ ಎಂಬುದು ಜೀವನ ವಿಧಾನವಾಗಿದ್ದು ಕಾಂಗ್ರೆಸ್ ಪ್ರತಿಯೊಂದು ಧರ್ಮವನ್ನು ಗೌರವಿಸಿಕೊಂಡು ರಾಷ್ಟ್ರ ನಿರ್ಮಾಣ ಮಾಡಿದೆ ಎಂದು ಸುರ್ಜೆವಾಲ ಟ್ವೀಟ್ ಮಾಡಿದ್ದಾರೆ. ಹಿಂದೂ ಶಬ್ದದ ಬಗ್ಗೆ ಸತೀಶ್ ಜಾರಕಿಹೊಳಿ ಹೇಳಿಕೆ ಅತ್ಯಂತ ದುರದೃಷ್ಟಕರ ಮತ್ತು ತಿರಸ್ಕಾರಾರ್ಹ, ಪಕ್ಷ ಜಾರಕಿಹೊಳಿ ಹೇಳಿಕೆಯನ್ನು ಖಂಡಿಸುತ್ತದೆ ಎಂದು ಸುರ್ಜೆವಾಲ ಟ್ವೀಟ್ ಮಾಡಿದ್ದಾರೆ.

ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿ ಹತ್ಯೆ ಪ್ರಕರಣ

ಆರೋಪಿಗಳ ಪತ್ತೆಗೆ ಪೊಲೀಸರ ತೀವ್ರ ಶೋಧ

ಮೈಸೂರು, ನ. 7(ಆರ್‌ಕೆ)– ನಿವೃತ್ತ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ (ಐಬಿ) ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆ ಪ್ರಕರಣದ ತನಿಖೆ ತೀವ್ರಗೊಳಿಸಿರುವ ವಿಶೇಷ ಪೊಲೀಸ್ ತಂಡ, ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.



ಕುಲಕರ್ಣಿ ಅವರ ಮೇಲೆ ಕಾರು ಹರಿಸಿ ಉದ್ದೇಶಪೂರ್ವಕವಾಗಿ ಕೊಲೆ ಮಾಡಲಾಗಿದೆ ಎಂಬುದು ಸಿಸಿ ಕ್ಯಾಮರಾ ಫುಟೇಜ್‌ಗಳಿಂದ ದೃಢಪಡುತ್ತಿದ್ದಂತೆಯೇ, ಎನ್‌ಆರ್ ಎಸಿಪಿ ಎಂ. ಶಿವಶಂಕರ್ ನೇತೃತ್ವದಲ್ಲಿ 3 ವಿಶೇಷ ತನಿಖಾ ತಂಡಗಳನ್ನು ರಚಿಸಿದ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಕೃತ್ಯಕ್ಕೆ ಬಳಸಿದ ಕಾರು ನಗರದಿಂದ ಹೊರಗೆ ಹೋಗುವ ಮೊದಲೇ ಪತ್ತೆ ಮಾಡುವಂತೆ ಶುಕ್ರವಾರ ರಾತ್ರಿಯೇ ತನಿಖಾಧಿಕಾರಿಗಳಿಗೆ ತಾಕೀತು ಮಾಡಿದ್ದರು.


ಅದೇ ದಿನ ರಾತ್ರಿಯಿಡೀ ಎಲ್ಲಾ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳಲ್ಲಿರುವ ಚೆಕ್‌ಪೋಸ್ಟ್, ಟೋಲ್‌ಗೇಟ್, ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ಕಟ್ಟೆಚ್ಚರ ವಹಿಸಿದ ಪೊಲೀಸರು, ಹೊರ ಜಿಲ್ಲೆ ರಾಜ್ಯ ಕೇಂದ್ರ ಸ್ಥಾನದ ಪೊಲೀಸ್ ಕಂಟ್ರೋಲ್ ರೂಂಗೂ ಮಾಹಿತಿ ನೀಡಿ, ಗ್ರೇ ಬಣ್ಣದ ಬಲಬದಿಯ ಮಿರರ್ ಇಲ್ಲದ ಕಾರಿನ ಪತ್ತೆಗೆ ಸೂಚಿಸಲಾಗಿತ್ತು.

ಮತ್ತೊಂದೆಡೆ ಕಾರಿನ ನೋಂದಣಿ ಸಂಖ್ಯೆ, ಆರ್‌ಸಿ, ಮಾಲೀಕರ ಪತ್ತೆಗಾಗಿಯೂ ಆರ್‌ಟಿಓ ಕಚೇರಿ, ಇ–ವಾಹನ ವೆಬ್‌ಸೈಟ್ ಮೂಲಕ ಮಾಹಿತಿ ಪಡೆದಿರುವ ಪೊಲೀಸರಿಗೆ ಕಾರು ಯಾವುದು, ರಿಜಿಸ್ಟ್ರೇಷನ್ ನಂಬರ್, ಅದರ ಮಾಲೀಕರು ಯಾರು ಎಂಬುದರ ಸುಳಿವು ಸಿಕ್ಕಿದ್ದು, ಕಾರಿನ ಪತ್ತೆಗೆ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಆರ್.ಎನ್. ಕುಲಕರ್ಣಿ ಅವರ ಅಳಿಯ ಸಂಜಯ್ ಅಂಗಡಿಯವರು, ತಮ್ಮ ಮಾವನವರ ಹತ್ಯೆ, ಪಕ್ಕದ ಮನೆಯವರಾದ ಮಾದಪ್ಪ ಮತ್ತು ಮಕ್ಕಳೇ ಮಾಡಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಸೆಟ್‌ಬ್ಯಾಕ್ ಬಿಡುವ ವಿವಾದ ಸಂಬಂಧ ಕುಲಕರ್ಣಿ ಅವರ ಮೇಲೆ ಜಿದ್ದು ಸಾಧಿಸಿ, ಈ ಹಿಂದಿನಿಂದಲೂ ಹತ್ಯೆಗೆ ಸಂಚು ಮಾಡುತ್ತಿದ್ದರು ಎಂದು ದೂರು ನೀಡಿದ್ದ ಹಿನ್ನೆಲೆಯಲ್ಲಿ ಮೂವರನ್ನು ಶನಿವಾರವೇ ವಶಕ್ಕೆ ಪಡೆದು ತೀವ್ರ ವಿಚಾರಣೆಗೊಳಪಡಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ಪ್ರಕರಣ ಬೇರೆ ಬೇರೆ ರೀತಿಯಲ್ಲಿ ತಿರುವು ಪಡೆಯುತ್ತಿದ್ದು, ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಯುತ್ತಿದೆ. ಆರೋಪಿಗಳು, ಕಾರು ಪತ್ತೆಯಾಗಿ ಸಂಪೂರ್ಣ ಮಾಹಿತಿ ಕಲೆ ಹಾಕುವವರೆಗೆ ಎಲ್ಲಿಯೂ ವಿಷಯ ಬಯಲಾಗದಂತೆ ಎಚ್ಚರ ವಹಿಸಲಾಗಿದೆ. ನಮಗೆ ನಿಜವಾದ ಹತ್ಯೆ ಆರೋಪಿಗಳೆಂದು ದೃಢಪಟ್ಟ ತಕ್ಷಣವೇ ನಾವೇ ಸುದ್ದಿಗೋಷ್ಠಿ ಕರೆದು, ಸಂಪೂರ್ಣ ಮಾಹಿತಿ ನೀಡುತ್ತೇವೆ ಎಂದು ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ಟಿ.ಎಂ.ಕೃಷ್ಣಪ್ಪ ನಿಧನ



ಮೈಸೂರು,ನ.7–ಮೈಸೂರಿನ ಟಿ.ಕೆ.ಲೇಔಟ್ ನಿವಾಸಿ ಟಿ.ಎಂ.ಕೃಷ್ಣಪ್ಪ (62) ಅವರು ಇಂದು ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಜನತಾ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೊರೂರು ಬಡಾವಣೆಯಲ್ಲಿ ಗುಂಪು ಮನೆ ನಿರ್ಮಾಣ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್‌ರಿಂದ ಅನವಶ್ಯಕ ಗೊಂದಲ

ಕೆಆರ್ ಕ್ಷೇತ್ರ ಆಶ್ರಯ ಸಮಿತಿ ಆರೋಪ

ಮೈಸೂರು,ನ.7(ಪಿಎಂ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ಯೋಜನೆಗಾಗಿ ಗೊರೂರು ಬಡಾವಣೆಯಲ್ಲಿ ಜಿ+2 ಮಾದರಿ ಮನೆಗಳನ್ನು (ಗುಂಪು ಮನೆಗಳು) ನಿರ್ಮಿಸುವ ಸಂಬಂಧ 2015ರಲ್ಲಿ ಅಂದಿನ ಕ್ಷೇತ್ರದ ಶಾಸಕರಾಗಿದ್ದ ಎಂ.ಕೆ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಿ, ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ ಎಂದು ಸ್ಪಷ್ಟನೆ ನೀಡಿದ ಕೆಆರ್ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯರು, ಆದರೆ ಈಗ ಇವರೇ ಗುಂಪು ಮನೆಗಳ ನಿರ್ಮಾಣಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಫಲಾನುಭವಿಗಳಲ್ಲಿ ತಪ್ಪು ತಿಳುವಳಿಕೆ ಮೂಡಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಆರ್ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯೆ ವಿದ್ಯಾಅರಸ್, ಮಂಜೂರು ಮಾಡಿರುವ ನಿವೇಶನಗಳಲ್ಲಿಯೇ ಶೀಘ್ರ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ರಾಜಕೀಯ ಪ್ರೇರಿತವಾಗಿ ನ.4ರಂದು ಮೈಸೂರು ಮಹಾನಗರ ಪಾಲಿಕೆಯ ಮುಂದೆ ಪ್ರತಿಭಟನೆ ನಡೆಸಲಾಗಿದೆ. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದ್ದಾರೆ. ಆದರೆ ಇವರ ಅವಧಿಯಲ್ಲಿ ಸರ್ಕಾರದಿಂದ ಅನುಮೋದನೆ ಪಡೆದುಕೊಂಡಂತೆಯೇ ಈಗ ಯೋಜನೆಯ ಅನುಷ್ಠಾನ ಮಾಡಲಾಗುತ್ತಿದೆ ಎಂದು ಹೇಳಿದರು.

ಎಂ.ಕೆ.ಸೋಮಶೇಖರ್ ಅವರೇ ತಮ್ಮ ಅವಧಿಯಲ್ಲಿ ಪ್ರತ್ಯೇಕ ಏಕ ಮನೆ ನಿರ್ಮಿಸಿಕೊಡುವ ಯೋಜನೆಯನ್ನು ಗುಂಪು ಮನೆಗೆ ಬದಲಾಯಿಸಿ ಅದಕ್ಕೆ ಸರ್ಕಾರದಿಂದ ಅನುಮೋದನೆ ಪಡೆದಿದ್ದಾರೆ.



2015ರ ಜ.16ರಂದು ಆಶ್ರಯ ಸಮಿತಿ ಸಭೆಯನ್ನು ಇವರ ಅಧ್ಯಕ್ಷತೆಯಲ್ಲೇ ನಡೆಸಿ ಜಮೀನಿನ ಕೊರತೆ ನಿಮಿತ್ತ ಪ್ರತ್ಯೇಕ ಮನೆಯನ್ನು ನಿರ್ಮಿಸಿ ಹಂಚಲು ಸಾಧ್ಯವಿಲ್ಲ ಎಂದು ಜಿ+2 ಮಾದರಿಯಲ್ಲಿ ಮನೆಗಳನ್ನು ನಿರ್ಮಿಸಲು ನಿರ್ಧರಿಸಿ ಸರ್ಕಾರದ ಅನುಮೋದನೆ ಪಡೆದಿದ್ದಾರೆ ಎಂದು ತಿಳಿಸಿದರಲ್ಲದೆ, ಈ ಸಂಬಂಧ ದಾಖಲೆ ನೀಡಿದರು.

ಜೊತೆಗೆ ಕೇಂದ್ರ ಸರ್ಕಾರದಿಂದಲೂ ಅನುಮೋದನೆ ಪಡೆದು 2016ರ ಜು.27ರಂದು ಮೈಸೂರು ಮಹಾನಗರ ಪಾಲಿಕೆಯಿಂದ ಗೊರೂರು ಬ್ಲಾಕ್ ನಂ–8ರಲ್ಲಿ ನಿವೇಶನ ಮಂಜೂರಾದ ಫಲಾನುಭವಿಗಳಿಗೆ ತಿಳುವಳಿಕೆ ಪತ್ರವನ್ನು ಕೊಟ್ಟು ಜಿ+2 ಮಾದರಿ ಮನೆಗಳಲ್ಲಿ ಮನೆ ಮಂಜೂರಾತಿಗಾಗಿ ಒಪ್ಪಿಗೆ ಪತ್ರವನ್ನು ನೀಡುವಂತೆ ಕೋರಲಾಗಿದೆ. ಇದಲ್ಲದೆ ತಿಳುವಳಿಕೆ ಪತ್ರವನ್ನು ನೀಡಿ ಫಲಾನುಭವಿಗಳಿಂದ ಪಡೆಯಲಾಗಿರುವ ಅಫಿಡವಿಟ್‌ಗಳು, ಹೊಸದಾಗಿ ಸಲ್ಲಿಸಿರುವ ಅರ್ಜಿಗಳು ಮತ್ತು ಸುಮಾರು 600 ಕಡತಗಳು ಕಾಣೆಯಾಗಿರುವ ಬಗ್ಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಂದ ಕೆಆರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ತಿಳಿಸಿದರು.

ಗೊರೂರು ಬ್ಲಾಕ್ ನಂ–8ರಲ್ಲಿ ಜಿ+2 ಮಾದರಿ ಮನೆಗಳ ನಿರ್ಮಾಣ ಸಂಬಂಧ ಡಿಪಿಆರ್ ಅನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು ಟೆಂಡರ್ ಕರೆದು ಮನೆಗಳನ್ನು ನಿರ್ಮಿಸಲು ಶಾಸಕರಾಗಿದ್ದ ಸೋಮಶೇಖರ್ ಹೊರಟಿದ್ದರು. ಆದರೆ ಮನೆ ಕಟ್ಟುವ ಕಾರ್ಯ ಮಾತ್ರ ಪ್ರಾರಂಭವಾಗಲಿಲ್ಲ. ಈಗ ಈ ಯೋಜನೆಗೆ ಚಾಲನೆ ನೀಡಲಾಗಿದೆ. ಈಗಾಗಲೇ ಗೊರೂರು ಪ್ರದೇಶದಲ್ಲಿ 2,212 ಮನೆಗಳ ನಿರ್ಮಾಣದ ಕಾರ್ಯವು ಪ್ರಗತಿಯಲ್ಲಿದೆ. ಈ ಯೋಜನೆಯನ್ನು ಜಾರಿಗೆ ತರಲು ನಮ್ಮ ಶಾಸಕರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಎಂ.ಕೆ.ಸೋಮಶೇಖರ್ ಅನವಶ್ಯಕವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಈಗಿನ ಶಾಸಕರು ತಮ್ಮ ಅವಧಿಯಲ್ಲಿ ಒಂದೇ ಒಂದು ಎಕರೆ ಭೂಮಿ ತಂದಿದ್ದರೆ ನಾನು ರಾಜಕೀಯ ನಿವೃತ್ತಿ ಹೊಂದುತ್ತೇನೆಂದು ಎಂ.ಕೆ.ಸೋಮಶೇಖರ್ ಹೇಳಿಕೆ ನೀಡಿದ್ದಾರೆ. ಇದು ಸರಿಯಲ್ಲ. ಶಾಸಕ ಎಸ್.ಎ.ರಾಮದಾಸ್ ಈಗಾಗಲೇ ಆಶ್ರಯ ಮನೆಗಳನ್ನು ನಿರ್ಮಿಸಲು ಪಡೆದಿರುವ ಭೂಮಿ ಹೊರತುಪಡಿಸಿ 2022ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ನಾಚನಹಳ್ಳಿಪಾಳ್ಯದ ಬಳಿ ಸುಮಾರು 15 ಎಕರೆ 37 ಗುಂಟೆ ಭೂಮಿಯನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆ ಅನುಷ್ಠಾನಕ್ಕೆ ಮಂಜೂರು ಮಾಡಿಸಿದ್ದಾರೆ. ಇದಲ್ಲದೇ 2ನೇ ಹಂತದಲ್ಲಿ ಅವಶ್ಯವಿರುವ ಭೂಮಿ ಮಂಜೂರಾತಿಗೆ ಮುಖ್ಯಮಂತ್ರಿ ಹಾಗೂ ವಸತಿ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದು ವಿವರಿಸಿದರು. ಸಮಿತಿ ಸದಸ್ಯರಾದ ಹೇಮಂತ್ ಕುಮಾರ್, ಬಿ.ಗೌರಿ, ಹನ್ಸರಾಜ್ ಗೋಷ್ಠಿಯಲ್ಲಿದ್ದರು.

> ಫಲಾನುಭವಿಗಳು ಹಕ್ಕುಪತ್ರ ಮತ್ತು ಹಕ್ಕು ಖುಲಾಸೆ ಪ್ರಮಾಣ ಪತ್ರ ಪಡೆದುಕೊಳ್ಳಲು ಲಂಚಕ್ಕೆ ಬೇಡಿಕೆ ಇಡುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಇದನ್ನು ತಡೆಗಟ್ಟಲು ನ.10ರಂದು ಪಾಲಿಕೆಯ ಹಳೆ ಕೌನ್ಸಿಲ್ ಹಾಲ್‌ನಲ್ಲಿ 1999–2000ರಿಂದ 2003–2004ರವರೆಗಿನ ಫಲಾನುಭವಿಗಳಿಗೆ ನೀಡಿರುವ ಮನೆಗಳಿಗೆ ಹಕ್ಕುಪತ್ರ ಮತ್ತು ಹಕ್ಕು ಖುಲಾಸೆ ಪತ್ರಗಳನ್ನು ವಿತರಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಹೊಸದಾಗಿ ನೀಡಲು ಹೊರಟಿರುವ ಮನೆಗಳ 2ನೇ ಪಟ್ಟಿಯ ಅರ್ಹ ಫಲಾನುಭವಿಗಳಿಗೆ ತಾತ್ಕಾಲಿಕ ಮಂಜೂರಾತಿ ಪತ್ರವನ್ನು ಪೋಸ್ಟ್ ಬಾಕ್ಸ್‌ಗೆ ಹಾಕುವ ಮೂಲಕ ಸಾಂಕೇತಿಕವಾಗಿ ಚಾಲನೆ ನೀಡಲು ಉದ್ದೇಶಿಸಲಾಗಿದೆ.
> –ವಿದ್ಯಾಅರಸ್, ಕೆಆರ್ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯೆ

ನ.7ರಂದು ಪೌರಕಾರ್ಮಿಕರ ಮಕ್ಕಳ ದಿನ ಘೋಷಣೆಗೆ ಶಿಫಾರಸು



ಮಂಡ್ಯನ7– ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ನವೆಂಬರ್ 7ರಂದು ಶಾಲೆಗೆ ದಾಖಲಾಗಿದ್ದು, ಈ ದಿನ ಮಂಡ್ಯ ಜಿಲ್ಲೆಯಲ್ಲಿ ಪೌರ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಸಂತೋಷದ ವಿಷಯವಾಗಿದೆ. ನವೆಂಬರ್ 7ರಂದು ಪೌರಕಾರ್ಮಿಕರ ಮಕ್ಕಳ ವಿದ್ಯಾರ್ಥಿ ದಿನ ಎಂದು ಘೋಷಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ (ಕೋಟೆ) ತಿಳಿಸಿದರು.

ಸೋಮವಾರ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಫಾಯಿ ಕರ್ಮಚಾರಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಜಿಲ್ಲೆಗಳಲ್ಲಿ ಸಫಾಯಿ ಕರ್ಮಚಾರಿಗಳ ಮಕ್ಕಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಪೌರಕಾರ್ಮಿಕರ ಮಕ್ಕಳು ತಲಾತಲಾಂತರದಿಂದ ಅವರ ಕುಟುಂಬ ನಡೆಸುತ್ತಿರುವ ಪೌರಕಾರ್ಮಿಕ ಕೆಲಸವನ್ನು ಮುಂದುವರಿಸುತ್ತಿದ್ದಾರೆ. ಅವರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ. ಪೌರಕಾರ್ಮಿಕ ವೃತ್ತಿಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಉತ್ತಮ ಕೌಶಲ್ಯಗಳನ್ನು ರೂಢಿಸಿಕೊಳ್ಳುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರುವಂತಾಗಬೇಕೆಂದರು.

ಇಂದು ಎಸ್‌ಎಸ್‌ಎಲ್‌ಸಿ ಪ್ರತಿಭಾನ್ವಿತ ಮಕ್ಕಳನ್ನು ಮಾತ್ರ ಸನ್ಮಾನಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪೌರಕಾರ್ಮಿಕರ ಎಸ್‌ಎಸ್‌ಎಲ್‌ಸಿಯಿಂದ ಮೇಲ್ಪಟ್ಟು ಎಲ್ಲಾ ಹಂತದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಪೌರಕಾರ್ಮಿಕರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು. ಗುತ್ತಿಗೆ ಹಾಗೂ ನೇರ ಪಾವತಿಯಲ್ಲಿ ಕಾರ್ಯನಿರ್ವಹಿಸುವಂತಹ ಕಾರ್ಮಿಕರನ್ನು ಖಾಯಂಗೊಳಿಸುವ ಐತಿಹಾಸಿಕ ನಿರ್ಧಾರವನ್ನು ಕೈಗೊಂಡು ಮೊದಲ ಹಂತದಲ್ಲಿ 11,133 ಪೌರಕಾರ್ಮಿಕರನ್ನು ಖಾಯಂಗೊಳಿಸುವ ನಿರ್ಧಾರವನ್ನು ಮುಖ್ಯಮಂತ್ರಿಗಳು ಕೈಗೊಂಡಿದ್ದಾರೆ. ಇನ್ನುಳಿದ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಉನ್ನತ ಅಧಿಕಾರಿಗಳು, ಮುಖಂಡರನ್ನೊಳಗೊಂಡ ಸಮಿತಿಯನ್ನು ಸಹ ರಚಿಸಿದ್ದಾರೆ. ಸಮಿತಿಗಳು ಸಭೆ ನಡೆಸಿ ಡಿಸೆಂಬರ್ ಅಂತ್ಯದೊಳಗೆ ಉಳಿದವರನ್ನು ಖಾಯಂಗೊಳಿಸುವ ಕೆಲಸ ನಡೆಸಲಾಗುತ್ತಿದೆಎಂದು ತಿಳಿಸಿದರು.

ಇತ್ತೀಚೆಗೆ ಮಲ್ಲಮ್ಮ ಎಂಬ ಪೌರಕಾರ್ಮಿಕ ಮಹಿಳೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ. ಮಲ್ಲಮ್ಮ ಅವರು ಒಂದು ದಿನ ಸಹ ರಜೆ ಪಡೆಯದೆ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ದಾರೆ. ಅವರ ಕಾರ್ಯನಿರ್ವಹಣೆ ಎಲ್ಲರಿಗೂ ಮಾದರಿ. ಪೌರಕಾರ್ಮಿಕರನ್ನು ಅಧಿಕಾರಿಗಳು ಗೌರವಯುತವಾಗಿ ನಡೆಸಿಕೊಳ್ಳಬೇಕು. ಪೌರಕಾರ್ಮಿಕರು ಸಹ ಅಧಿಕಾರಿಗಳಿಂದ ಗೌರವ ಪಡೆಯುವ ರೀತಿ ಕೆಲಸ ನಿರ್ವಹಿಸಿ, ಮದ್ಯಪಾನ ಮುಂತಾದ ದುಶ್ಚಟಗಳಿಗೆ ಬಲಿಯಾಗಬೇಡಿ ಎಂದರು.

ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಮಾಜಿ ಸದಸ್ಯ ಜಗದೀಶ್ ಹಿರೇಮಣಿ, ಜಿಲ್ಲಾಧಿಕಾರಿ ಡಾ.ಎಚ್.ಎನ್. ಗೋಪಾಲ ಕೃಷ್ಣ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಂಡ್ಯ ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ಉಪಾಧ್ಯಕ್ಷೆ ಇಷ್ರಾತ್ ಫಾತೀಮಾ, ಜಿ.ಪಂ. ಸಿಇಓ ಶಾಂತ ಹುಲ್ಮನಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷಾರಮಣಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಂಗೇಗೌಡ, ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕುಮಾರಸ್ವಾಮಿ, ಮುಖಂಡರಾದ ಕೃಷ್ಣ, ನಂಜುಂಡ ಮೌರ್ಯ, ಎನ್.ಆರ್. ಚಂದ್ರಶೇಖರ್, ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಗಮಂಗಲ ಬಳಿ ಚಿರತೆ ಸೆರೆ



ನಾಗಮಂಗಲ, ನ.7– ಗ್ರಾಮಾಂತರ ಪ್ರದೇಶದಲ್ಲಿ ನಾಯಿ ಮತ್ತು ಜಾನುವಾರುಗಳನ್ನು ಹೊತ್ತೊಯ್ದು ಉಪಟಳ ನೀಡುತ್ತಿದ್ದ ಚಿರತೆಯನ್ನು ತಾಲೂಕಿನ ದೇವಲಾಪುರ ಹೋಬಳಿಯ ಮುತ್ಸಂದ್ರ ಗ್ರಾಮದ ಬಳಿ ಸೆರೆ ಹಿಡಿಯಲಾಗಿದೆ.

ಹಲವಾರು ದಿನಗಳಿಂದ ಗ್ರಾಮದ ತೋಟದ ಮನೆಗಳು ಮತ್ತು ಗ್ರಾಮವಾಸಿಗಳು ಸಾಕಿದ್ದ ನಾಯಿ ಮತ್ತು ಕುರಿ, ಆಡುಗಳನ್ನು ಚಿರತೆ ಹೊತ್ತೊಯ್ದು ತೊಂದರೆ ನೀಡುತ್ತಿತ್ತು. ಅದನ್ನು ನಿವಾರಿಸಬೇಕೆಂದು ಅರಣ್ಯ ಇಲಾಖೆಗೆ ನೀಡಿದ ದೂರಿನ ಮೇರೆಗೆ ನ.4 ರಂದು ಇಲಾಖೆ ಅಧಿಕಾರಿಗಳು ಗ್ರಾಮದ ಚಂದ್ರಪ್ಪ ಎಂಬುವರ ತೋಟದ ಮನೆಯಲ್ಲಿ ಬೋನೊಂದನ್ನು ಇಟ್ಟಿದ್ದರು. ಇಂದು ಹನ್ನೊಂದು ಘಂಟೆಯ ವೇಳೆಗೆ ಬೋನಿನಲ್ಲಿ ಚಿರತೆ ಸೆರೆಯಾಗಿದೆ. ಮಧ್ಯಾಹ್ನ ಪಶು ವೈದ್ಯಕೀಯ ಆಸ್ಪತ್ರೆಗೆ ತಂದು ಪ್ರಥಮ ಚಿಕಿತ್ಸೆ ನೀಡಿ ನಾಗರಹೊಳೆ ಅಭಯಾರಣ್ಯಕ್ಕೆ ಬಿಡಲಾಯಿತೆಂದು ಅಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.

ನಾಳೆ ಮಾರಗೌಡನಹಳ್ಳಿಯಲ್ಲಿ ಕೃಷಿ ವಸ್ತುಪ್ರದರ್ಶನ

ಮಂಡ್ಯ,ನ.7– ಮಂಡ್ಯದ ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ ವತಿಯಿಂದ ಅಂತಿಮ ವರ್ಷದ ಬಿ.ಎಸ್ಸಿ (ಆನರ್ಸ್) ಕೃಷಿ ಹಾಗೂ ಡಿಪ್ಲೋಮಾ (ಕೃಷಿ) ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಕೃಷಿ ವಸ್ತುಪ್ರದರ್ಶನವನ್ನು ಮಂಡ್ಯ ಜಿಲ್ಲೆಯ ಮಾರಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಅವರಣದಲ್ಲಿ ನ.9 ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡಾ. ಎಸ್.ವಿ.ಸುರೇಶ ಉದ್ಘಾಟನೆ ಮಾಡಲಿದ್ದಾರೆ. ಕೃಷಿ ಮಹಾವಿದ್ಯಾಲಯದ ಡೀನ್ ಎಸ್.ಎಸ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕೃಷಿ ಇಲಾಖೆ ಎದುರು ಕರವೇ ಪ್ರತಿಭಟನೆ



ಮದ್ದೂರು, ನ.7– ಕೊಪ್ಪ ಭಾಗದಲ್ಲಿ ಕೆಲವು ಅಂಗಡಿಗಳಲ್ಲಿ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಬಣದ ಕಾರ್ಯಕರ್ತರು ಕೊಪ್ಪದ ಕೃಷಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಿದರು.

ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ಮಾಡುತ್ತಿದ್ದರೂ, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಬಣದ ತಾಲೂಕು ಘಟಕದ ಅಧ್ಯಕ್ಷ ಹರಳಕೆರೆ ಚಂದ್ರು ಮಾತನಾಡಿ, ಕೊಪ್ಪ ಮತ್ತು ಸುತ್ತಮುತ್ತಲ ಗ್ರಾಮಗಳ ರಸಗೊಬ್ಬರ ಮಾರಾಟಗಾರರು ಯೂರಿಯಾ ಸೇರಿದಂತೆ ಇತರ ರಸಗೊಬ್ಬರಗಳನ್ನು ದಾಸ್ತಾನು ಮಾಡಿ ಕಾಳಸಂತೆಯಲ್ಲಿ ಅಧಿಕ ದರಕ್ಕೆ ಮಾರಾಟ ಮಾಡಲು ಕೃತಕ ಅಭಾವ ಸೃಷ್ಟಿಸಿ ರೈತರಿಗೆ ರಸಗೊಬ್ಬರ ನೀಡದೆ ತೊಂದರೆ ಉಂಟು ಮಾಡುತ್ತಿದ್ದಾರೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಮತ್ತು ಸರ್ಕಾರ ನಿಗದಿ ಮಾಡಿರುವ ದರವನ್ನೇ ಅಂಗಡಿ ಮಾಲೀಕರು ಪಡೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ನಂತರ ಕೃಷಿ ಇಲಾಖೆಯ ಕೃಷ್ಣೇಗೌಡ ಎಂಬುವರಿಗೆ ಮನವಿ ಸಲ್ಲಿಸಲಾಯಿತು. ರೈತ ಮುಖಂಡರಾದ ಶಿವಲಿಂಗಯ್ಯ, ಕೃಷ್ಣೇಗೌಡ, ಬೆಟ್ಟೇಗೌಡ, ಗಿರೀಶ ಇತರರಿದ್ದರು.

ಕೆ.ಆರ್.ಪೇಟೆಯಲ್ಲಿ ಮತದಾನ ಕುರಿತು ಪ್ರಬಂಧ, ರಸಪ್ರಶ್ನೆ ಸ್ಪರ್ಧೆ

ಕೆ.ಆರ್.ಪೇಟೆ,ನ.7– ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಎರಡು ದಿನಗಳ ಕಾಲ ಪಿಯುಸಿ ವಿದ್ಯಾರ್ಥಿಗಳಿಗೆ ಭಿತ್ತಿ ಪತ್ರ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ರಸ ಪ್ರಶ್ನೆ ಸ್ಪರ್ಧೆ, ಅಣಕು ಸಂಸತ್ತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಚುನಾವಣಾಧಿಕಾರಿಯೂ ಆದ ತಹಶೀಲ್ದಾರ್ ಎಂ.ವಿ.ರೂಪಾ ಮಾತನಾಡಿ, ಮತದಾರರು ತಮ್ಮ ಮತಗಳನ್ನು ಆಸೆ–ಆಮಿಷಗಳಿಗೆ, ಜಾತಿ–ಧರ್ಮದ ಹೆಸರಿನಲ್ಲಿ, ಪಕ್ಷ–ರಾಜಕೀಯದ ಹಿನ್ನಲೆಯಲ್ಲಿ ಚಲಾಯಿಸದೆ, ಯಾರು ತಮ್ಮ ಆಶೋತ್ತರಗಳಿಗೆ ಸ್ಪಂದಿಸುತ್ತಾರೋ ಅವರಿಗೆ ಮಾತ್ರ ಮತ ಚಲಾಯಿಸಬೇಕು. ಈ ಬಗ್ಗೆ ಯುವ ಸಮುದಾಯ ಮತದಾರರಿಗೆ ಅರಿವು ಮೂಡಿಸುವ ಕಾರ್ಯವನ್ನು ನಿರ್ವಹಿಸುವುದರೊಂದಿಗೆ ಶೇ.100 ರಷ್ಟು ಮತದಾನ ಆಗುವಂತೆ ನೋಡಿಕೊಳ್ಳಬೇಕು. ಯುವಕರು ಮತ್ತು ವಿದ್ಯಾರ್ಥಿಗಳು ಹೊಣೆಗಾರಿಕೆ ವಹಿಸಿಕೊಳ್ಳುವ ಮೂಲಕ ಸಶಕ್ತ ರಾಷ್ಟ್ರ ನಿರ್ಮಾಣಕ್ಕೆ ಸಹಕರಿಸಬೇಕೆಂದು ಮನವಿ ಮಾಡಿದರು.

ಸಮಾರೋಪ ಭಾಷಣ ಮಾಡಿದ ಪ್ರಾಂಶುಪಾಲ ಸಿ.ಆರ್.ದಿನೇಶ್, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನೇ ಪ್ರಭುವಾಗಿರುವುದರಿಂದ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವ ಜವಾಬ್ದಾರಿಯೂ ಅವನದೇ ಆಗಿರುತ್ತದೆ ಎಂದರು. ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಡಿ.ಬಿ.ಸತ್ಯ ಆಶಯ ಭಾಷಣ ಮಾಡಿ ಪ್ರಜಾಪ್ರಭುತ್ವದ ಆಶಯಗಳು ಈಡೇರಬೇಕಾದರೆ ಮತದಾನ ವ್ಯವಸ್ಥೆ ಪಾರದರ್ಶಕವಾಗಬೇಕು. 80ರ ದಶಕದಲ್ಲಿ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್.ಶೇಷನ್ ಜಾರಿಗೆ ತಂದ ಸುಧಾರಣೆಗಳೇ ಪ್ರಸ್ತುತ ಮಾರ್ಗದರ್ಶಕವಾಗಿದ್ದು, ಈ ನಿಟ್ಟಿನಲ್ಲಿ ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಶ್ರಮಿಸಬೇಕೆಂದರು. ಕಾಲೇಜಿನ ಪ್ರಾಂಶುಪಾಲ ಕೆ.ಮೋಹನ್ ಅಧ್ಯಕ್ಷತೆ ವಹಿಸಿದ್ದರು.ಕಾರ್ಯಕ್ರಮದಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತಲ್ಲದೆ, ಮೊದಲ ಮತ್ತು ಎರಡನೇ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಲಾಯಿತು. ವಿದ್ಯಾರ್ಥಿಗಳಿಂದ ನಡೆದ ಅಣಕು ಯುವಸಂಸತ್ ಗಮನ ಸೆಳೆಯಿತು.

ಇಂದು ಮದ್ದೂರು, ಮಂಡ್ಯದಲ್ಲಿ ವಿದ್ಯುತ್ ವ್ಯತ್ಯಯ

ಮದ್ದೂರು, ನ.7– ಮದ್ದೂರು ಟೌನ್– ವಿವಿ ನಗರ, ಆರ್‌ಆರ್‌ನಗರ, ಚನ್ನೇಗೌಡ ಬಡಾವಣೆ, ಸೋಮೇಗೌಡರ ಬೀದಿ, ಶಿಕ್ಷಕರ ಕಾಲೋನಿ, ಕೋಟೆ ಬೀದಿ, ಪೇಟೆ ಬೀದಿ, ಮದ್ದೂರಮ್ಮ ದೇವಸ್ಥಾನ, ಕೊಪ್ಪ ಸರ್ಕಲ್, ಕೊಲ್ಲಿ ಸರ್ಕಲ್, ರೈಲ್ವೆ ಸ್ಟೇಷನ್ ರಸ್ತೆ, ಶಿವಪುರ, ಸೋಮನಹಳ್ಳಿ ಸಿಪಾಯಿ ಹೋಟೆಲ್ ಮತ್ತು ಅಡಿಗಾಸ್ ಹೋಟೆಲ್ ವ್ಯಾಪ್ತಿಯಲ್ಲಿ ಹಾಗೂ ತಾಲೂಕು ಪಂಚಾಯಿತಿ ಕಚೇರಿ, ತಾಲೂಕು ಕಚೇರಿ, ಕೋರ್ಟ್, ಸರ್ಕಾರಿ ಆಸ್ಪತ್ರೆ, ಆರ್‌ಆರ್ ನಗರ, ಮುಸ್ಲಿಂ ಬ್ಲಾಕ್, ಪುರಸಭೆ ಕಚೇರಿ, ಪೊಲೀಸ್ ಠಾಣೆ ಕೆಎಸ್‌ಆರ್‌ಟಿಸಿ ಡಿಪೋ, ಎಲ್‌ಐಸಿ ಕಚೇರಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ನ.8 ರಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.

ಮಂಡ್ಯ ವರದಿ: ಬಸರಾಳು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬಸರಾಳು, ಶಿವಪುರ , ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬೆನ್ನಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಅನುಕುಪ್ಪೆ, ಮನುಗನಹಳ್ಳಿ, ಎಂ.ಹಟ್ನ, ಗಣಿಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನ.8 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗುವುದೆಂದು ಮಂಡ್ಯ ಸೆಸ್ಕ್, ಕಾ ಮತ್ತು ಪಾ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.



ಪಾಂಡವಪುರ ತಾಲೂಕಿನ ಮಲ್ಲಿಗೆರೆ ಗ್ರಾಮದಲ್ಲಿ ಬೋರೇದೇವರು(ಭೈರವೇಶ್ವರ) ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶ್ವಂತ್‌ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷರಾದ ಎಂ.ಎಸ್.ರವಿಕರ, ಚಂದ್ರೇಗೌಡ, ಸದಸ್ಯ ರವಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ಎಸ್.ಜಗದೀಶ್, ಯ.ಬೆಟ್ಟೇಗೌಡ, ಯ.ರಾಜೇಶ್, ನಾಗರಾಜು, ಪ್ರಶಾಂತ್, ರಘು, ಹರೀಶ್, ಡೇರಿ ಅಧ್ಯಕ್ಷ ಉಮೇಶ್, ಕಾರ್ಯದರ್ಶಿ ರಂಜಿತ್, ಮಹೇಂದ್ರಚಾರಿ, ಚಲುವೇಗೌಡ, ಎಂ.ಸಿ.ನಾಗೇಶ್, ಎಂ.ಆರ್.ಸೋಮಶೇಖರ್, ಹೇಮಚಂದ್ರ, ಅಂಗಡಿ ಸುರೇಶ್, ಸೇರಿದಂತೆ ಗ್ರಾಮದ ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ದಸರಾ ವಸ್ತುಪ್ರದರ್ಶನದಲ್ಲಿ ಜನಸಾಗರ

ಮೈಸೂರು, ನ.7– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2022ರ ದಸರಾ ವಸ್ತು ಪ್ರದರ್ಶನವು ದೊಡ್ಡಕೆರೆ ಮೈದಾನದ ಆವರಣದಲ್ಲಿ ಸೆಪ್ಟೆಂಬರ್ 26 ರಂದು ಆರಂಭಗೊಂಡಿದ್ದು, ಡಿಸೆಂಬರ್ 24ರವರೆಗೆ ನಡೆಯಲಿರುತ್ತದೆ. ಪ್ರತಿದಿನ ಸುಮಾರು 10,000 ಹಾಗೂ ವಾರದ ಕಡೆ ದಿನಗಳಲ್ಲಿ ಮತ್ತು ಸಾರ್ವತ್ರಿಕ ರಜಾ ದಿನಗಳಲ್ಲಿ ಸುಮಾರು 15,000 ರಿಂದ 20,000 ಸಾರ್ವಜನಿಕರು ವಸ್ತುಪ್ರದರ್ಶನ ವೀಕ್ಷಿಸಲು ಭೇಟಿ ನೀಡುತ್ತಿರುತ್ತಾರೆ. ಪ್ರಾಧಿಕಾರದಲ್ಲಿರುವ ಗಾನಕೋಗಿಲೆ ಪಿ.ಕಾಳಿಂಗ ರಾವ್ ರಂಗ ಮಂಟಪದಲ್ಲಿ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸಿದ್ಧ ಕಲಾವಿದರು, ಗಾಯಕರಿಂದ ಪ್ರತಿದಿನ ಸಂಜೆ 7ರಿಂದ ರಾತ್ರಿ 9:30 ಗಂಟೆಯವರೆಗೆ ಆಯೋಜಿಸಲಾಗುತ್ತಿದೆ. ವಸ್ತುಪ್ರದರ್ಶನ ಆವರಣದಲ್ಲಿ ಎಲ್ಲಾ ರೀತಿಯ ಜಾಹಿರಾತು ನೀಡಲು ಸಮಂಜಸವಾದ ದರದಲ್ಲಿ ಅವಕಾಶ ಇರುತ್ತದೆ. ಆಸಕ್ತ ಅರ್ಹ ಉದ್ದಿಮೆದಾರರು, ವ್ಯಾಪಾರಸ್ಥರು, ಇತ್ಯಾದಿಯವರುಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಜಾಹಿರಾತು ನೀಡಲು ಇಚ್ಛಿಸುವವರು ಪ್ರಾಧಿಕಾರದ ಕಚೇರಿಯ ಅಧೀಕ್ಷಕರಾದ ನಂದಕುಮಾರ್ ಅವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂಖ್ಯೆ: 2446887, ಮೊ.ಸಂಖ್ಯೆ: 7204202444 ಅನ್ನು ಸಂಪರ್ಕಿಸಿ ಎಂದು ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಒಂದನೇ ಪುಟದಿಂದ

ಮತ್ತೆ ಇಡಿ ಸಮನ್ಸ್

ವಹಿವಾಟುಗಳಿಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ಇಟ್ಟುಕೊಂಡೇ ಅವರ ವಿಚಾರಣೆ ನಡೆಸಲು ಇಡಿ ನಿರ್ಧರಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೂ ಸಮನ್ಸ್ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಯಂಗ್ ಇಂಡಿಯನ್‌ನಲ್ಲಿ ಹೆಚ್ಚಿನ ಷೇರು ಹೊಂದಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನಡೆಯುತ್ತಿರುವ ತನಿಖೆಯ ಭಾಗವಾಗಿ ಆಗಸ್ಟ್ ಇಡಿ ದೆಹಲಿಯ ಯಂಗ್ ಇಂಡಿಯನ್ ಕಚೇರಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಿತ್ತು.

ಹೆರಾಲ್ಡ್ ಹೌಸ್ ಕಟ್ಟಡದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲಿ 6 ಗಂಟೆಗಳಿಗೂ ಹೆಚ್ಚು ಕಾಲ ಶೋಧ ನಡೆಸಲಾಗಿತ್ತು. ಸಂಸತ್ತಿನ ಅಧಿವೇಶನದ ಮಧ್ಯದಲ್ಲಿಯೇ ಮಲ್ಲಿಕಾರ್ಜುನ್ ಖರ್ಗೆಯವರಿಗೆ ಸಮನ್ಸ್ ಜಾರಿ ಮಾಡಿರುವ ಬಗ್ಗೆ ಕಾಂಗ್ರೆಸ್ ಪಕ್ಷ ಈ ಹಿಂದೆ ಆಕ್ರೋಶ ವ್ಯಕ್ತಪಡಿಸಿತ್ತು.

ಚಾರ್ಜ್‌ಶೀಟ್ ಸಲ್ಲಿಕೆ

ವಿರುದ್ಧ ಆರೋಪಗಳು ದೃಢಪಟ್ಟಿವೆ ಎಂದು ಚಿತ್ರದುರ್ಗ ಎಸ್‌ಪಿ ಹೇಳಿದ್ದಾರೆ. ಆದರೆ, ಮಠದ ಉತ್ತರಾಧಿಕಾರಿ ಮತ್ತು ಗಂಗಾಧರಯ್ಯ ಇವರಿಬ್ಬರ ವಿರುದ್ಧ ಆರೋಪಗಳಿಗೆ ಈವರೆಗೆ ಸಾಕ್ಷ್ಯಾಧಾರ ಲಭ್ಯವಾಗಿಲ್ಲ. ತನಿಖೆ ಜಾರಿಯಲ್ಲಿದ್ದು ಸಾಕ್ಷ್ಯಾಧಾರ ಸಂಗ್ರಹ ಮಾಡುತ್ತಿದ್ದೇವೆ. ಸಾಕ್ಷ್ಯಾಧಾರ ಸಂಗ್ರಹಿಸಿ ಅಂತಿಮ ಚಾರ್ಜ್‌ಶೀಟ್ ಸಲ್ಲಿಸುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಮುರುಘಾಶ್ರೀ ವಿರುದ್ಧ 2ನೇ ಪೋಕ್ಸೋ ಪ್ರಕರಣದಲ್ಲಿ ಈಗಾಗಲೇ ಸಂತ್ರಸ್ತರ ಹೇಳಿಕೆ ದಾಖಲಿಸಲಾಗಿದೆ. ಸಂತ್ರಸ್ತರ ಪೋಷಕರ ಹೇಳಿಕೆಗಳನ್ನೂ ದಾಖಲಿಸಲಾಗಿದೆ. ಮುರುಘಾಶ್ರೀ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಸಂತ್ರಸ್ತರ ಹೇಳಿಕೆ ಆಧರಿಸಿ ಕೆಲವು ಬಾಲಕಿಯರ ಹೇಳಿಕೆ ಪಡೆದಿದ್ದೇವೆ ಎಂದು ಅವರು ಹೇಳಿದ್ದಾರೆ.

ಮುರುಘಾ ಶ್ರೀಗಳಿಂದ 15ಕ್ಕೂ ಹೆಚ್ಚು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆರೋಪ: ಮುರುಘಾ ಶ್ರೀಗಳಿಂದ 15ಕ್ಕೂ ಹೆಚ್ಚು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ದಾಖಲಾಗಿದೆ. ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಅವರನ್ನು ಕರೆಸಿ ಮಾಹಿತಿ ಕೇಳಿದ್ದೇವೆ. ಸಂತ್ರಸ್ತರು ಮಾಹಿತಿ ನೀಡಿದರೆ ತನಿಖೆ ನಡೆಸುತ್ತೇವೆಂದು ತಿಳಿಸಿದ್ದೇವೆ. ಒಡನಾಡಿ ಸಂಸ್ಥೆ, ಮಕ್ಕಳ ಕಲ್ಯಾಣ ಸಮಿತಿ ಸಹಯೋಗದಲ್ಲಿ ತನಿಖೆ ನಡೆಸುವುದಾಗಿ ಮನವಿ ಮಾಡಿದ್ದೇವೆ. ಕೆಲ ಮಾಹಿತಿಯನ್ನು ಒಡನಾಡಿ ಸಂಸ್ಥೆಯವರು ನೀಡಿದ್ದಾರೆ. ಮಾಹಿತಿ ಆಧಾರದ ಮೇಲೆ ನಾವು ತನಿಖೆಗೆ ತೆರಳಿದ್ದೆವು. ಆದರೆ ಸಂತ್ರಸ್ತ ಬಾಲಕಿ ಆ ಸ್ಥಳದಲ್ಲಿ ಸಿಕ್ಕಿಲ್ಲ. ಒಡನಾಡಿ ಸಂಸ್ಥೆಯವರಿಗೂ ಈ ಬಗ್ಗೆ ತಿಳಿಸಿದ್ದೇವೆ. ಸಂತ್ರಸ್ತೆಯರ ಮಾಹಿತಿ ಸಿಕ್ಕರೆ ಖಂಡಿತ ತನಿಖೆ ನಡೆಸುತ್ತೇವೆ ಎಂದು ಎಸ್ಪಿ ಹೇಳಿದರು.

ಮೊದಲ ಪ್ರಕರಣದ ಸಂತ್ರಸ್ತರು ಓರ್ವ ಬಾಲಕಿಯ ರೇಪ್ ಅಂಡ್ ಮರ್ಡರ್ ಆಗಿದೆ ಎಂದಿದ್ದರು. ಆದರೆ ಆಂಧ್ರ ವ್ಯಾಪ್ತಿಯಲ್ಲಿ ಆಕಸ್ಮಿಕ ಸಾವು ಘಟಿಸಿದ್ದು ತಿಳಿದಿದೆ. ರೈಲಿನಿಂದ ಬಿದ್ದು ಸಾವನ್ನಪ್ಪಿರುವ ವರದಿ ಆಗಿದೆ. ಇನ್ನು, ಮಠದಲ್ಲಿ ಡ್ರಗ್ಸ್ ಬಳಕೆ ಆರೋಪ ವಿಚಾರ ಪ್ರಕರಣದ ತನಿಖೆ ಇನ್ನೂ ನಡೆಯುತ್ತಿದೆ, ಎಲ್ಲಾ ಮಾಹಿತಿ ಹೇಳಲಾಗದು. ವೈದ್ಯಕೀಯ ಪರೀಕ್ಷೆಯ ಕೆಲ ವರದಿ ಇನ್ನೂ ಬರಬೇಕಿದೆ ಎಂದು ಅವರು ಹೇಳಿದರು.

ಗ್ರಾಮೀಣ ಜನಜೀವನ ಅರಿಯುವ ಆಸಕ್ತಿ ಇದ್ದರೆ ಬನ್ನಿ ಈ ಹಳ್ಳಿ ಮನೆಗೆ!







ಕಳೆದ 30–40 ವರ್ಷಗಳ ಹಿಂದೆ ಗ್ರಾಮೀಣ ಭಾಗದಲ್ಲಿ ಬಳಸುತ್ತಿದ್ದ ಗೃಹೋಪಯೋಗಿ ವಸ್ತುಗಳ ಪರಿಚಯದ ಜೊತೆಗೆ ಪ್ರತ್ಯಕ್ಷ ಪ್ರಾತ್ಯಕ್ಷಿಕೆ ಮೂಲಕ ಸಮಗ್ರ ಕೃಷಿ ಪದ್ಧತಿಯನ್ನು ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಮಣ್ಣು ಮತ್ತು ನೀರಿನ ಸಂರಕ್ಷಣೆ ಮಾಡುವುದು ಮುಖ್ಯವಾಗಿದೆ. ಒಂದು ಎಕರೆ ಜಾಗದಲ್ಲಿ ಸಮಗ್ರ ಕೃಷಿ ಪದ್ಧತಿ ಮೂಲಕ ಹಲವು ಬಗೆಯ ಪದಾರ್ಥಗಳನ್ನು ಬೆಳೆಯುವುದರ ಜೊತೆಗೆ ಹೈನುಗಾರಿಕೆ, ಮೀನುಗಾರಿಕೆ ಹಾಗೂ ಕೋಳಿ ಸಾಕಾಣಿಕೆ ವಿಧಾನವನ್ನು ತಿಳಿಸಿಕೊಡಲಾಗುವುದು. ಅಲ್ಲದೆ ಪಿಎಂ ಕಿಸಾನ್ ಯೋಜನೆ ಸೌಲಭ್ಯ ಪಡೆಯಲು ಬಯಸುವ ರೈತರು ಇ–ರಿಜಿಸ್ಟ್ರೇಷನ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.



ಮೋಹನ್ ಕಾಯಕ

ಮೈಸೂರು, ನ.7– ಮೈಸೂರಲ್ಲೊಂದು ನೆಚ್ಚಿನ ಹಳ್ಳಿ ಮನೆ... ಮನೆಯ ಹಿತ್ತಲಲ್ಲಿ ಮಾದರಿ ವ್ಯವಸಾಯ, ಹೈನುಗಾರಿಕೆ, ಮೀನುಗಾರಿಗೆ, ಕೋಳಿ ಸಾಕಾಣಿಕೆ ಜೊತೆಗೆ ಸಾವಯವ ಗೊಬ್ಬರ ತಯಾರಿಕೆ...!

ಹಿತ್ತಲಲ್ಲಿ ಇಷ್ಟೆಲ್ಲವೂ... ಎನ್ನುವವರಿಗೆ ಅಚ್ಚರಿ ಎಂಬಂತೆ ಸೂಜಿಗಲ್ಲಿನಂತೆ ಸೆಳೆಯುವ ಹಳ್ಳಿ ಮನೆ, ಮನೆಯಲ್ಲಿರುವ ಪದಾರ್ಥಗಳು, ರಸವತ್ತಾಗಿ ಬೆಳೆದು ನಿಂತಿರುವ ಬಗೆ ಬಗೆಯ ತರಕಾರಿ ಗಿಡಗಳು ಕಣ್ಮನ ಸೆಳೆಯುತ್ತಿದೆ. ನೀವು ನೋಡಬೇಕೇ? ಹಾಗಾದರೆ ಮತ್ಯಾಕೆ ತಡ ದಸರಾ ವಸ್ತುಪ್ರದರ್ಶನಕ್ಕೆ ಬನ್ನಿ...

ಕೃಷಿ ಇಲಾಖೆ ವತಿಯಿಂದ ದಸರಾ ವಸ್ತು ಪ್ರದರ್ಶನದಲ್ಲಿ ನಿರ್ಮಿಸಿರುವ ಹಳ್ಳಿ ಮನೆ ಮಾದರಿಯ ಅತ್ಯಾಕರ್ಷಕ ಮಳಿಗೆ, ಮಳಿಗೆ ಹಿಂಭಾಗದಲ್ಲಿ ಬೆಳೆಸಿರುವ ವಿವಿಧ ಬೆಳೆಗಳು, ಬೇಸಾಯ ಪದ್ಧತಿ, ನೀರಿನ ಸದ್ಬಳಕೆಯ ಸಂಪೂರ್ಣ ಮಾಹಿತಿ ಜೊತೆಗೆ ಒಂದು ಎಕರೆ ಪ್ರದೇಶದಲ್ಲೇ ವ್ಯವಸಾಯದ ಜೊತೆಗೆ ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಾಣಿಕೆಯನ್ನು ಹೇಗೆ ಮಾಡಬಹುದು ಎಂಬುದನ್ನು ತಿಳಿಸಿಕೊಡಲಾಗುತ್ತಿದೆ

ಹಳ್ಳಿ ಮನೆಯೊಳಗೆ ನಗರವಾಸಿಗಳು ಮರತೇ ಹೋಗಿರುವ ಪದಾರ್ಥಗಳನ್ನು ಸಂಗ್ರಹಿಸಿಡಲಾಗಿದೆ. ವಳ್ಳೆ, ಸೇರು, ಪಾವು, ಚಟಾಕು, ಬಳ್ಳ, ಕೊಳಗ, ಗುಡಾಣಿ, ವಾಡೆ, ತೊಟ್ಟಿಲು, ತಕ್ಕಡಿ, ಕುಟಾಣಿ, ಅಜ್ಜಿ ಚೀಲ(ಬುಡಚೀಲ), ಬೀಸಣಿಗೆ, ಹಳೇ ರೇಡಿಯೋ ಮತ್ತು ಟಿವಿ, ಕೋಳಿ ಪಂಜರ, ಆಯಾಸ(ಆರಾಮ) ಖುರ್ಚಿ, ಮೊಗ್ಗಿನ ಜಡೆ ಜೊತೆಗೆ ಉಳುಮೆಗೆ ಬಳಸುವ ನೊಗ, ಎರಡು ಹಲ್ಲಿನ ಕುಂಟೆ, ಎಡೆ ಕುಂಟೆ, ಪಂಜು, ಕಾಡುಗೋಲು, ಕೋಲು ಗುದಲಿ, ಹಲುಬೆ, ಎತ್ತುಗಳ ಮುಖಕ್ಕೆ ಕಟ್ಟುವ ಮುಸುಕುಕ್ಕೆ ಸೇರಿದಂತೆ ಅಡುಗೆ ತಯಾರಿಕೆಗೆ ಬಳಸುತ್ತಿದ್ದ ಮಡಕೆಗಳು ಮತ್ತು ತಾಮ್ರದ ಪಾತ್ರೆಗಳನ್ನು ನೋಡಬಹುದಾಗಿದೆ.

ಮನೆಯೊಳಗೆಯೇ ರೈತರ ಕಣ ಮಾಡಿದ್ದು, ರಾಗಿ, ಭತ್ತ, ಜೋಳ ಇನ್ನಿತರೆ ಆಹಾರ ಪದಾರ್ಥಗಳನ್ನು ಗುಡ್ಡೆ ಮಾಡಿ ಪೂಜೆ ಸಲ್ಲಿಸಿ, ನಂತರ ಮನೆಗೆ ತೆಗೆದು ಕೊಂಡು ಹೋಗುವ ಪದ್ಧತಿಯನ್ನು ತಿಳಿಸಿಕೊಡಲಾಗುತ್ತಿದೆ. ಜೊತೆಗೆ ಆರೋಗ್ಯದಾಯಕ ಸಿರಿಧಾನ್ಯಗಳ ಪರಿಚಯ, ರೈತರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದಿಂದ ನೀಡುತ್ತಿರುವ ಸಾಲ–ಸೌಲಭ್ಯಗಳ ಕುರಿತಾದ ಮಾಹಿತಿಯನ್ನು ಬಿತ್ತರಿಸಲಾಗಿದೆ.

ಮಾದರಿ ವ್ಯವಸಾಯ: ಹಳ್ಳಿ ಮನೆ ಮಳಿಗೆಯ ಹಿಂಭಾಗದಲ್ಲಿ ಮಾದರಿ ವ್ಯವಸಾಯ ಮಾಡಲಾಗಿದೆ. ಮಳೆ ನೀರನ್ನು ಭೂಮಿಯಲ್ಲಿ ಹಿಂಗಿಸುವ ವಿಧಾನ, ತೆರೆದ ಬಾವಿ ಬಳಕೆ ಹಾಗೂ ಸಾವಯವ ಗೊಬ್ಬರ ತಯಾರಿಕೆಯಿಂದ ಹಲವು ಬಗೆಯ ಬೆಳೆಗಳನ್ನು ಬೆಳೆದು ತೋರಿಸಲಾಗಿದೆ.

ಅಲ್ಲದೆ ಅತಿಯಾದ ಮಳೆಯ ನಡುವೆಯೂ ಬೆಳೆಗೆ ಹಾನಿಯಾಗದಂತೆ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂಬುದನ್ನು ತಿಳಿಸಿಕೊಡಲಾಗುತ್ತಿದೆ. ಮಣ್ಣಿನ ಸಂರಕ್ಷಣೆ ಹಾಗೂ ನೀರಿನ ಬಳಕೆ ವಿಧಾನವನ್ನು ತಿಳಿಸಿಕೊಡುವ ಮೂಲಕ ರೈತರು ತಮ್ಮ ಜಮೀನುಗಳಲ್ಲಿ ಹೇಗೆ ವಿವಿಧ ಬಗೆಯ ಬೆಳೆಗಳನ್ನು ಬೆಳೆಯಬಹುದು. ಅತೀವೃಷ್ಟಿಯಿಂದ ಬೆಳೆಯ ರಕ್ಷಣೆ ಮಾಡುವ ಮಾರ್ಗೋಪಾಯಗಳನ್ನು ತಿಳಿಸಲಾಗಿದೆ.

ಸಮಗ್ರ ಕೃಷಿ ಪದ್ಧತಿ: ಒಂದು ಎಕರೆ ಭೂಮಿಯಲ್ಲಿ ಬೇಸಾಯ, ಹೈನುಗಾರಿಕೆ, ಕೋಳಿ ಸಾಗಾಣಿಕೆ ಹಾಗೂ ಮೀನುಗಾರಿಕೆ ಮಾಡಬಹುದಾದ ಮಾರ್ಗಗಳನ್ನು ಮಾಡೆಲ್‌ಗಳ ಮೂಲಕ ತಿಳಿಸಲಾಗಿದೆ. ಕೋಳಿ ಸಾಗಾಣಿಕೆಯ ಜೊತೆಗೆ ಮೀನುಗಾರಿಕೆ, ಬೇಸಾಯ ಜೊತೆಗೆ ಹೈನುಗಾರಿಕೆ ಹಾಗೂ ಆಹಾರ ಪದಾರ್ಥಗಳ ಜೊತೆಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ವಿಧಾನಗಳನ್ನು ಹೇಳಿಕೊಡಲಾಗುತ್ತಿದೆ.

ನಿತ್ಯ ನೂರಾರು ಮಂದಿ ಭೇಟಿ: ಕೃಷಿ ಇಲಾಖೆಯ ಹಳ್ಳಿ ಮನೆ ಮಾದರಿಯ ಮಳಿಗೆಗೆ ಕಳೆದ ಒಂದೂವರೆ ತಿಂಗಳಿಂದ ನಿತ್ಯ ನೂರಾರು ಮಂದಿ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ಹೋದಂತೆ ಭಾಸವಾಗುವುದರಿಂದ ಹಲವರು ಫೋಟೋ ಕ್ಲಿಕ್ಕಿಸಿಕೊಂಡು ಹರ್ಷ ವ್ಯಕ್ತಪಡಿಸುತ್ತಿದ್ದಾರೆ.





ಅಕ್ರಮ ವಿದ್ಯುತ್ ಸಂಪರ್ಕ : ಪ್ರಕರಣ ದಾಖಲು

ಮೈಸೂರು, ನ.7(ಜಿಎ)– ಅಕ್ರಮ ವಿದ್ಯುತ್ ಸಂಪರ್ಕ ಪಡೆದ 15 ಮಂದಿ ವಿರುದ್ಧ ಸೆಸ್ಕ್ ಜಾಗೃತ ದಳ ಪ್ರಕರಣ ದಾಖಲಿಸಿದೆ. ಜಾಗೃತ ದಳದ ಪೊಲೀಸ್ ಅಧೀಕ್ಷಕರಾದ ರಶ್ಮಿ ಪರಡ್ಡಿ ಅವರ ನೇತೃತ್ವದಲ್ಲಿ ಡಿವೈಎಸ್ಪಿ ಅನ್ಸರ್ ಅಲಿ ಮತ್ತು ಇ.ಇ. ತುಸ್ಸಮ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆದಿದ್ದು, ಹುಣಸೂರು 3 ನಂಜನಗೂಡಲ್ಲಿ ತಲಾ 3, ಕೆಆರ್.ನಗರ 2 ಹಾಗೂ ಮೈಸೂರು ತಾಲೂಕಿನಲ್ಲಿ 7 ಪ್ರಕರಣಗಳನ್ನು ಪತ್ತೆ ಹಚ್ಚಿದೆ.

ವಿದ್ಯುತ್ ಕಂಬದಿಂದ ನೇರವಾಗಿ ಮನೆಗೆ ಸಂಪರ್ಕ ಪಡೆದಿರುವುದು, ವಿದ್ಯುತ್ ಶುಲ್ಕ ಪಾವತಿಸದೆ ಸಂಪರ್ಕ ಕಡಿತವಾಗಿದ್ದರೂ ಅಕ್ರಮವಾಗಿ ಸಂಪರ್ಕ ಪಡೆದಿರುವುದು, ಸಾರ್ವಜನಿಕ ಕುಡಿಯುವ ನೀರಿನ ಘಟಕದಿಂದ ಅಕ್ರಮವಾಗಿ ಸಂಪರ್ಕ ಪಡೆದಿರುವುದು ಹೀಗೆ ಹಲವಾರು ರೀತಿಯಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ಸರ್ಕಾರಕ್ಕೆ ವಂಚಿಸುತ್ತಿರುವ ಪ್ರಕರಣಗಳು ಪತ್ತೆಯಾಗಿವೆ. ಅಕ್ರಮಕ್ಕೆ ಸಾಥ್ ನೀಡಿದ ಆಲನಹಳ್ಳಿ ಗ್ರಾಮ ಪಂಚಾಯ್ತಿ ಪಿಡಿಓ ಹಾಗೂ ಬಿಳಿಕೆರೆ ಹೋಬಳಿಯ ಬೋಳನಹಳ್ಳಿ ಗ್ರಾಮ ಪಂಚಾಯ್ತಿ ಪಿಡಿಓ ಮೇಲೂ ಪ್ರಕರಣ ದಾಖಲಿಸಲಾಗಿದೆ. ಅಕ್ರಮ ಸಂಪರ್ಕ ಪಡೆಯಲು ಬಳಸಿದ ವಿದ್ಯುತ್ ಉಪಕರಣಗಳನ್ನು ಜಾಗೃತ ತಂಡ ವಶಪಡಿಸಿಕೊಂಡಿದೆ.



ಸೆಸ್ಕ್ ಜಾಗೃತ ದಳದ ನಿರೀಕ್ಷಕರಾದ ವಿನಯ್, ಎ.ಇ.ಇ. ಮನೀಷ್ ಪಾಠಕ್ ಉಸ್ತುವಾರಿಯಲ್ಲಿ ಎ.ಇ.ಮಣಿಕಂಠಸ್ವಾಮಿ, ವಿಶ್ವನಾಥ್, ಕೌಸರ್, ತೋಂಟದಾರ್ಯ, ಜಗದೀಶ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿದ್ದಾರೆ.

ಕ್ರೀಡೆಯಿಂದ ಸಮಾಜವನ್ನು ಒಗ್ಗೂಡಿಸಲು ಸಾಧ್ಯ

ಶಾಸಕ ಕೆ.ಜಿ.ಬೋಪಯ್ಯ ಅಭಿಮತ

ಮಲೆಯಾಳಿ ಸಂಘದಿಂದ ಅದ್ದೂರಿ ಓಣಂ ಆಚರಣೆ



ವಿರಾಜಪೇಟೆ, ನ.7– ಸಮಾಜದ ಬಾಂಧವರನ್ನು ಒಂದೇ ವೇದಿಕೆಯಲ್ಲಿ ಸೇರಿಸುವಂತಹ ಕಾರ್ಯ ಕ್ರೀಡಾ ಚಟುವಟಿಕೆಗಳಿಂದ ಸಾಧ್ಯ ಎಂದು ಶಾಸಕ ಕೆ.ಜಿ. ಬೋಪಯ್ಯ ಹೇಳಿದರು.

ಹಿಂದೂ ಮಲೆಯಾಳಿ ಸಂಘದ ವತಿಯಿಂದ ಅಮ್ಮತ್ತಿ ಒಂಟಿಯಂಗಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ 'ನಾಲ್ಕನೇ ವರ್ಷದ ಓಣಂ ಆಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಕಾರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು ಮಲೆಯಾಳಿ ಬಾಂಧವರು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ಜಿ.ಪಂ ಮಾಜಿ ಸದಸ್ಯ, ವಕೀಲ ವಿ.ಕೆ. ದೇವಲಿಂಗಯ್ಯ ಮಾತನಾಡಿ, ಮಲೆಯಾಳಿ ಭಾಂದವರು ಕ್ರೀಡಾ ಸ್ಪರ್ಧೆ ಮೂಲಕ ಎಲ್ಲರನ್ನು ಒಂದುಗೂಡಿಸುವಂತ ಉತ್ತಮ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ಶ್ಲಾಘನೀಯ ಎಂದರಲ್ಲದೆ ಮುಂದಿನ ದಿನಗಳಲ್ಲಿ ಎಲ್ಲಾ ಜನಾಂಗದ ಭಾಂದವರನ್ನೂ ಸೇರಿಸಿ ಈ ಮೈದಾನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಹಿಂದೂ ಮಲೆಯಾಳಿ ಸಂಘದ ಅಧ್ಯಕ್ಷ ಕೆ.ಸಿ.ಪುಷ್ಕರನ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್.ಎನ್.ಡಿ.ಪಿ. ಕೊಡಗು ಘಟಕದ ಅಧ್ಯಕ್ಷ ವಿ.ಕೆ.ಲೋಕೇಶ್ ಮಾತನಾಡಿ, ಸಂಘಟನೆ ಮೂಲಕ ಸಮಾಜದ ಅಭಿವೃದ್ಧಿ ಕಡೆಗೆ ಗಮನಹರಿಸುವುದರೊಂದಿಗೆ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು.

ಹಿಂದೂ ಮಲೆಯಾಳಿ ಸಂಘದ ಜಿಲ್ಲಾ ಅಧ್ಯಕ್ಷ ವಿ.ಎಂ.ವಿಜಯನ್, ಕಾರ್ಯದರ್ಶಿ ಶಶಿಕುಮಾರ್, ಖಜಾಂಚಿ ಕೆ.ಬಾಬು, ಕಣ್ಣಂಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಟಿ.ವಿ. ಗಣೇಶ್ ಮಾತನಾಡಿದರು. ವೇದಿಕೆಯಲ್ಲಿ ಸಮಾಜದ ಗೌರವಾಧ್ಯಕ್ಷ ಕೆ.ಎಸ್.ರಮೇಶ್, ಕೃಷಿ ಪತ್ತಿನ ಸಹಕಾರ ಸಂಘದ ಪಿ.ಎ. ಮಂಜುನಾಥ್, ದೇವಸ್ಥಾನ ಸಮಿತಿ ಅಧ್ಯಕ್ಷ ಎಂ.ಪಿ.ರಾಬಿನ್ ಚಿಣ್ಣಪ್ಪ, ಸಂಘದ ಉಪಾಧ್ಯಕ್ಷ ಪಿ.ಕೆ.ಭಾಸ್ಕರನ್, ಪ್ರಧಾನ ಕಾರ್ಯದರ್ಶಿ ಸಿ.ಕೆ. ನಂದಕುಮಾರ್, ಖಜಾಂಚಿ ಟಿ.ಎಂ.ಸುನಿಲ್ ಗ್ರಾ.ಪಂ. ಸದಸ್ಯೆ ರಜನಿ ಕುಟ್ಟಪ್ಪ, ಸೂರಜ್, ಉಪಸ್ಥಿತರಿದ್ದರು.

ಮೊದಲಿಗೆ ಚಾಮುಂಡಿ ಪೈಸಾರಿಯಿಂದ ಶಾಲಾ ಆವರಣದವರೆಗೆ ಚಂಡೆಮೇಳದೊಂದಿಗೆ ಮಹಾಬಲಿಯ ಮೆರವಣಿಗೆ ನಡೆಯಿತು. ಬೆಳಗ್ಗೆ ಶಾಲಾ ಸಭಾಂಗಣದಲ್ಲಿ ಪೂಕಳಂ ಸ್ಪರ್ಧೆಯನ್ನು ಸಂಘದ ಸರೋಜಿನಿ ಉದ್ಘಾಟಿಸಿದರು. ನಂತರ ಕ್ರೀಡಾ ಸ್ಪರ್ಧೆಗೆ ನಿವೃತ್ತ ಸೈನಿಕರಾದ ಟಿ.ಕೆ. ಶ್ರೀನಿವಾಸ್ ಚಾಲನೆ ನೀಡಿದರು. ಪುರುಷರು, ಮಹಿಳೆಯರು ಹಾಗೂ ಮಕ್ಕಳಿಗೆ ಪ್ರತ್ಯೇಕ ಸ್ಪರ್ಧೆ ಏರ್ಪಡಿಸಲಾಗಿತ್ತು. ಓಣಂ ಆಚರಣೆ ಪ್ರಯುಕ್ತ ಪರಂಜ್ಯೋತಿ ಅನ್ನಪೂರ್ಣೇಶ್ವರಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಉಚಿತ ಬಿಪಿ ಹಾಗೂ ಶುಗರ್ ತಪಾಸಣೆ ನಡೆಯಿತು.

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶಿಕ್ಷಕಿ ವಿ.ಕೆ.ಸುಶಾ ಮೊಹನ್, ಸಂಘದ ಸದಸ್ಯ ಕೃಷ್ಣ ಅವರ ಪುತ್ರಿ ವಕೀಲೆ ಶ್ರೀಶ್ಮಾ, ನಿವೃತ್ತ ಸೈನಿಕರುಗಳಾದ ಟಿ.ಕೆ.ಶ್ರೀನಿವಾಸ್ (ಸತ್ಯನ್) ಹಾಗೂ ಬಾಲಕೃಷ್ಣ ಪಣಿಕರ್ ಅವರನ್ನು ಸನ್ಮಾನಿಸಲಾಯಿತು. 2021–22ನೇ ಸಾಲಿನಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಮಧ್ಯಾಹ್ನ ಓಣಂ ಸದ್ಯ ನಡೆಯಿತು. ಎಂ.ಎಂ.ಶಶಿಧರನ್ ಸ್ವಾಗತಿಸಿ ನಿರೂಪಿಸಿದರು. ಸನಾಲ್ ಸುಜೀತ್ ವಂದಿಸಿದರು.

ಕೊಡವ ಮಕ್ಕಡ ಕೂಟದ ಮನಸ್ಸು ಪುಸ್ತಕ ಬಿಡುಗಡೆ



ಮಡಿಕೇರಿ,ನ.7– ಬರಹಗಾರ್ತಿ ಮಾಳೇಟಿರ ಸೀತಮ್ಮ ವಿವೇಕ್ ರಚಿತ, ಕೊಡವ ಮಕ್ಕಡ ಕೂಟದ 60ನೇ ಪುಸ್ತಕ 'ಮನಸ್ಸು' ಲೋಕಾರ್ಪಣೆಗೊಂಡಿದೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಸಾಹಿತಿ ಕಸ್ತೂರಿ ಗೋವಿಂದಮ್ಮಯ್ಯ, ಬರಹಗಾರರು ಹಾಗೂ ಪ್ರಕಟಿಸಿದವರ ಶ್ರಮ ಫಲಿಸಬೇಕಾದರೆ ಪ್ರತಿಯೊಬ್ಬರೂ ಪುಸ್ತಕ ಖರೀದಿಸಿ, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಇಂದು ಪುಸ್ತಕ ಖರೀದಿಸುವ ಮತ್ತು ಓದುವ ಹವ್ಯಾಸ ಕಡಿಮೆಯಾಗಿದೆ. ಮಕ್ಕಳಾದಿಯಾಗಿ ಎಲ್ಲರೂ ಮೊಬೈಲ್‌ನೊಂದಿಗೇ ಇರುತ್ತಾರೆ. ಮಕ್ಕಳ ಕೈಗೆ ಮೊಬೈಲ್ ಬದಲು ಪುಸ್ತಕ ನೀಡುವ ಮೂಲಕ ಓದುವ ಅಭಿರುಚಿಯನ್ನು ಬೆಳೆಸಬೇಕೆಂದು, ಕೇವಲ ಪುಸ್ತಕ ಕೊಂಡುಕೊಂಡರೆ ಸಾಲದು, ಓದುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು ಎಂದರು. 'ಮನಸ್ಸು' ಪುಸ್ತಕದಲ್ಲಿ ಮನಸ್ಸಿನ ವೈವಿಧ್ಯತೆಯನ್ನು ವಿವರಿಸಲಾಗಿದೆ. ತನುವಿಗೂ ಮನಸ್ಸಿಗೂ ಇರುವ ಸೂಕ್ಷ್ಮ ಸಂಬಂಧಗಳನ್ನು ಅಚ್ಚುಕಟ್ಟಾಗಿ ನಿರೂಪಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಮನಸ್ಸು' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಮೂರ್ನಾಡು ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಪೆಮ್ಮಡಿಯಂಡ ವೇಣು ಅಪ್ಪಣ್ಣ, ಕ್ರೀಡಾ ಸಾಧಕರ ಜಿಲ್ಲೆಯಲ್ಲಿ ಸಾಹಿತ್ಯ ಕೃಷಿ ಕೂಡ ನಡೆಯುತ್ತಿರುವುದು ಶ್ಲಾಘನೀಯವೆಂದರು.

'ಮನಸ್ಸು' ಪುಸ್ತಕದ ಬರಹಗಾರ್ತಿ ಮಾಳೇಟಿರ ಸೀತಮ್ಮ ವಿವೇಕ್ ಮಾತನಾಡಿ, ಶಾರೀರಿಕವಾಗಿ ಹೆಣ್ಣು, ಗಂಡು ಎಂಬ ಬೇಧವಿದೆ, ಆದರೆ ಮನಸ್ಸಿಗೆ ಯಾವುದೇ ಬೇಧಭಾವವಿಲ್ಲ. ಲೋಕಚಿತ್ತ ಸ್ಮೃತಿಸ್ತರ ಆಧ್ಯಾತ್ಮದಿಂದ ಪ್ರೇರಣೆಗೊಳ್ಳುವ ಮನಸ್ಸು ಅವಶ್ಯಕ ಇಂದ್ರಿಯವಾಗಿದೆ. ಉಸಿರಿನ ಮೂಲಕ ಪ್ರಕೃತಿಯೊಂದಿಗೆ ಸಂಪರ್ಕ ಸಾಧಿಸುವ ಮನಸ್ಸಿನ ಕುರಿತು ವಿವಿಧ ಧರ್ಮಗುರುಗಳಿಂದ ಮಾಹಿತಿ ಕಲೆ ಹಾಕಿ ಪುಸ್ತಕ ರಚಿಸಲಾಗಿದೆ. ಇದೊಂದು ಅಧ್ಯಯನ ಗ್ರಂಥವಾಗಿ ಉಳಿದುಕೊಳ್ಳುವ ಸಾಧ್ಯತೆ ಇದೆ ಎಂದರು. ಸೀತಮ್ಮ ಅವರ ತಂದೆ ನಿವೃತ್ತ ದೈಹಿಕ ಶಿಕ್ಷಕರು ಹಾಗೂ ಹಿರಿಯ ಕ್ರೀಡಾ ಸಾಧಕ ಕಂಬೀರಂಡ ಕಿಟ್ಟು ಕಾಳಪ್ಪ, ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿದರು.

ದಿಶಾ ಚೆಂಗಪ್ಪಗೆ ಸೌಂದರ್ಯ ಕಿರೀಟ



ಗೋಣಿಕೊಪ್ಪ, ನ.7– ಗೋವಾದಲ್ಲಿರುವ ಲಾ ಗ್ರಾಸಿನಾ ರೆಸಾರ್ಟ್‌ನಲ್ಲಿ ಜಟ್ರೇಟ್ ಕೌರ್, ನಂದಿನ ನಾಗರಾಜ್ ತಂಡ ಆಯೋಜಿಸಿದ್ದ ಮಿಸಸ್ ಇಂಡಿಯಾ ಐಯಾಮ್ ಪವರ್ಫುಲ್ ಅಂಡ್ ಇಂಡಿಯಾಸ್ ಚರ್ಮಿಂಗ್ ಫೇಸ್ ಸೌಂದರ್ಯ ಸ್ಪರ್ಧೆಯಲ್ಲಿ ಕೊಡಗಿನ ಅಳಮೇಂಗಡ ದಿಶಾ ಚೆಂಗಪ್ಪ ಹದಿಹರೆಯದ ವಿಭಾಗದಲ್ಲಿ 'ಮಿಸ್ ಇಂಡಿಯಾ ಟೀನ್ ಅಂಡ್ ಬೆಸ್ಟ್ ವಾಲ್ಕ್' ಕಿರೀಟ ಮುಡಿಗೇರಿಸಿಕೊಂಡರು. ಇವರು ಬಾಳೆಲೆಯ ಅಳಮೇಂಗಡ ಮೋನ ಚೆಂಗಪ್ಪ, ಶಶಿ ದಂಪತಿ ಪುತ್ರಿ.

ಬಿ.ಬಿ.ಶಿವಪ್ಪ ಪತ್ನಿ ಸುಶೀಲ ಶಿವಪ್ಪ ನಿಧನ



ಮಡಿಕೇರಿ, ನ.7– ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ, ರಾಜ್ಯ ಬಿಜೆಪಿಯ ಭೀಷ್ಮ ಎಂದೇ ಖ್ಯಾತರಾಗಿದ್ದ ಅಜಾತ ಶತ್ರು ದಿವಂಗತ ಬಿ.ಬಿ.ಶಿವಪ್ಪ ಅವರ ಪತ್ನಿ ಸುಶೀಲ ಶಿವಪ್ಪ(91) ಅವರು ಸೋಮವಾರ ಪೇಟೆಯ ಕುಂಬ್ರಳ್ಳಿಯ ತಮ್ಮ ನಿವಾಸದಲ್ಲಿ ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನದ ನಂತರ ಕುಂಬ್ರಳ್ಳಿಯಲ್ಲಿ ನಡೆಯಲಿದೆ. ಸುಶೀಲ ಶಿವಪ್ಪ ನಿಧನಕ್ಕೆ ಮಡಿಕೇರಿ ಕ್ಷೇತ್ರ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಎಸ್.ಮಹೇಶ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ವಲಸೆ ಕಾರ್ಮಿಕರ ಮಕ್ಕಳು ಕನ್ನಡ ಶಾಲೆಗೆ ಸೇರ್ಪಡೆ

ಕನ್ನಡ ಬಾವುಟ ನೀಡಿ ಸ್ವಾಗತಿಸಿದ ಶಿಕ್ಷಕರು



ಸಿದ್ದಾಪುರ, ನ.7– ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಸರ್ಕಾರ ಹಲವಾರು ಯೋಜನೆಗಳನ್ನು ನೀಡುವ ಮೂಲಕ ಶಿಕ್ಷಣದೊಂದಿಗೆ ಮುಖ್ಯವಾಹಿನಿಗೆ ತರಲು ಮುಂದಾಗಿರುವ ಚಿಂತನೆಗೆ ಕರಡಿಗೋಡು ಸರ್ಕಾರಿ ಶಾಲಾ ಶಿಕ್ಷಕರು ಮಾದರಿಯಾಗಿದ್ದಾರೆ.

ಇತರೆ ರಾಜ್ಯಗಳಿಂದ ವಲಸೆ ಕಾರ್ಮಿಕರಾಗಿ ಆಗಮಿಸಿದ ಕಾರ್ಮಿಕ ಕುಟುಂಬಗಳ ಐವರು ಮಕ್ಕಳನ್ನು ಕನ್ನಡ ಧ್ವಜವನ್ನು ನೀಡಿ ಅದ್ದೂರಿಯಾಗಿ ಸ್ವಾಗತ ಮಾಡುವುದರೊಂದಿಗೆ ಮಕ್ಕಳಿಗೆ ಕನ್ನಡ ಕಲಿಕೆಯ ಮೂಲಕ ಪಾಠ ಹೇಳಿಕೊಡಲು ಕರಡಿಗೋಡು ಶಾಲಾ ಶಿಕ್ಷಕರು ಮುಂದಾಗಿರುವುದನ್ನು ಮೆಚ್ಚಿ ಮುಖ್ಯ ಶಿಕ್ಷಕಿ ರುಕ್ಮಿಣಿ ಅವರಿಗೆ ಸ್ಥಳೀಯರು ಸನ್ಮಾನ ಮಾಡಿ ಗೌರವಿಸಿದ್ದಾರೆ.

ಕರಡಿಗೋಡು ಗ್ರಾಮೀಣ ಭಾಗದಲ್ಲಿರುವ ಸರ್ಕಾರಿ ಶಾಲೆಯಲ್ಲಿ ವಲಸೆ ಕಾರ್ಮಿಕರ ಮಕ್ಕಳು ಶಾಲೆಯಲ್ಲಿ ಕಲಿತು ಕನ್ನಡ ವ್ಯಾಸಂಗದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ಕಾಡುಕಾಡು ಪ್ರಾಣಿಗಳ ಭಯದ ನಡುವೆ ಶಾಲೆಯಿಂದ ದೂರ ಉಳಿದ ವಿದ್ಯಾರ್ಥಿಗಳನ್ನು ಮನವೊಲಿಸಿ ಶಾಲೆಗೆ ಕರೆ ತರುವ ಪ್ರಯತ್ನ ಮಾಡುತ್ತಿರುವ ಶಿಕ್ಷಕರು, ಕಾರ್ಮಿಕರ ಮಕ್ಕಳಿಗೂ ಶಿಕ್ಷಣ ನೀಡುವುದರೊಂದಿಗೆ ಪ್ರತಿಭಾಂತರಾಗಿ ಮುಂದೆ ತರುವ ಪ್ರಯತ್ನಕ್ಕೆ ಹಾಗೂ ಶಿಕ್ಷಕರ ಸೇವೆಯನ್ನು ಸ್ಥಳೀಯರು ಅಭಿನಂದಿಸಿದ್ದಾರೆ.

ಸ್ವಾಗತ ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ರೀನಾ ತುಳಸಿ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಸವಿತಾ ರೈ. ಅಮ್ಮತ್ತಿ ಹೋಬಳಿ ಕಸಾಪ ಅಧ್ಯಕ್ಷ ಟಿ.ಹೆಚ್. ಮಂಜುನಾಥ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಮುಸ್ತಫ, ಪ್ರಮುಖರಾದ ಎಂ.ಎ. ಅಜೀಜ್ ಟಾಮಿ ತೋಮಸ್, ಯಮುನಾ, ಕೃಷ್ಣ ಖಾಲಿದ್ ಮತ್ತಿತರರು ಹಾಜರಿದ್ದರು.

ಡಿ.10ರಿಂದ ಸೆವೆನ್ 'ಎ' ಸೈಡ್ ಹಾಕಿ ಟೂರ್ನಿ

ಗೋಣಿಕೊಪ್ಪ, ನ.7– ಕಗ್ಗಟ್ನಾಡ್ ಪ್ಲೈಯಿಂಗ್ ಎಲ್ಬೋಸ್ ಅಸೋಸಿಯೇಷನ್ ವತಿಯಿಂದ ಡಿಸೆಂಬರ್ 10 ರಿಂದ ಜಿಲ್ಲಾ ಮಟ್ಟದ (7 ಆಟಗಾರರನ್ನು ಒಳಗೊಂಡ) ಸೆವೆನ್ 'ಎ' ಸೈಡ್ ಹಾಕಿ ಟೂರ್ನಮೆಂಟ್–2022' ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಚಿರಿಯಪಂಡ ಪವನ್ ಬಿದ್ದಪ್ಪ ತಿಳಿಸಿದ್ದಾರೆ.

ಡಿ.10, 11 ಮತ್ತು 12 ರಂದು ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ಟೂರ್ನಿ ನಡೆಸಲಾಗುವುದು. ಗ್ರಾಮೀಣ ಮಟ್ಟದ ಆಟಗಾರರಿಗೆ ಮುಕ್ತ ಅವಕಾಶವಿದ್ದು, ಒಂದು ತಂಡದಲ್ಲಿ 7 ಆಟಗಾರರನ್ನು ಆಡಿಸಲಾಗುತ್ತದೆ ಎಂದು ತಿಳಿಸಿದರು.

ಒಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗರಿಷ್ಠ 2 ತಂಡಗಳು ಮಾತ್ರ ಭಾಗವಹಿಸಬಹುದಾಗಿದೆ. ಆಯಾ ತಂಡಗಳಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಟಗಾರರು ಮಾತ್ರ ಆಡಲು ಅವಕಾಶವಿದ್ದು, ಅತಿಥಿ ಆಟಗಾರರಿಗೆ ಅವಕಾಶವಿಲ್ಲ. ಜಿಲ್ಲೆಯ ಯಾವುದೇ ಗ್ರಾಮ ಪಂಚಾಯಿತಿ ಮಟ್ಟದ ತಂಡಗಳು ಭಾಗವಹಿಸಬಹುದಾಗಿದೆ. ಗ್ರಾಮದ ಆಟಗಾರ ಬೇರೆ ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿದ್ದರೂ ಗ್ರಾಮ ಪಂಚಾಯಿತಿ ಮಟ್ಟದ ತಂಡಕ್ಕೆ ಪ್ರತಿನಿಧಿಸಬಹುದಾಗಿದೆ. ಆಟಗಾರರು ತಮ್ಮ ಆಧಾರ್ ಅಥವಾ ಪಡಿತರ ಚೀಟಿ ನಕಲು ನೀಡಿ ದೃಢೀಕರಿಸಿಕೊಳ್ಳಬೇಕಾಗಿದೆ ಎಂದರು. ನ.22ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಮೂರು ದಿನಗಳ ಟೂರ್ನಿಯಲ್ಲಿ 32 ತಂಡಗಳು ಮಾತ್ರ ಭಾಗವಹಿಸಲು ಅವಕಾಶವಿದ್ದು, ಮೊದಲು ಹೆಸರು ನೋಂದಾಯಿಸಿಕೊಳ್ಳುವ 32 ತಂಡಗಳಿಗೆ ಅವಕಾಶ ನೀಡುವುದಾಗಿ ತಿಳಿಸಿದರು. ಮಾಹಿತಿಗೆ 9980989695, 9686724532 ನ್ನು ಸಂಪರ್ಕಿಸಿ.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಕೂಕಂಡ ಬಿದ್ದಪ್ಪ, ಕಾರ್ಯದರ್ಶಿ ಮಾಚಿಮಾಡ ಕಾರ್ಯಪ್ಪ, ಖಜಾಂಚಿ ತಾಣಚ್ಚೀರ ನಿಖಿಲ್, ಜಂಟಿ ಕಾರ್ಯದರ್ಶಿ ಚಿರಿಯಪಂಡ ಸೌರಭ್ ಇದ್ದರು.

ಆಳುವ ಸರ್ಕಾರಗಳು ನಮ್ಮ ಹಿತ ಕಾಯಲಿಲ್ಲ

ರಾಜನಹಳ್ಳಿ ಪ್ರಸನ್ನಾನಂದಪುರಿ ಸ್ವಾಮೀಜಿ ವಿಷಾದ



ಚಾಮರಾಜನಗರ, ನ.7–ರಾಜ್ಯ, ಕೇಂದ್ರದಲ್ಲಿ 75 ವರ್ಷಗಳಿಂದ ನಮ್ಮನ್ನು ಆಳುತ್ತಿರುವ ಸರ್ಕಾರಗಳು ನಮ್ಮ ಹಿತ ಕಾಯಲಿಲ್ಲ. ನಮ್ಮ ಚಳವಳಿ ನಿಂತ ನೀರಲ್ಲ, ಸದಾ ಹರಿಯುವ ನೀರು ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ವಿಷಾದಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸ್ವಾಭಿಮಾನಿ ಎಸ್‌ಸಿ ಮತ್ತು ಎಸ್‌ಟಿ ಸಂಘಟನೆಗಳ ಒಕ್ಕೂಟದ ಜಿಲ್ಲಾ ಘಟಕದಿಂದ ನಡೆದ 'ಎಸ್‌ಸಿ, ಎಸ್‌ಟಿ ಸಮುದಾಯಗಳು ಏಕೆ ಒಂದಾಗಬೇಕು ಒಂದು ಚರ್ಚೆ' ಹಾಗೂ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಗುರುವಂದನಾ ಸ್ವೀಕರಿಸಿ ಅವರು ಮಾತನಾಡಿದರು.

ಸ್ವಾಭಿಮಾನಿಗಳಾದ ಪರಿಶಿಷ್ಟ ಜಾತಿ, ಪಂಗಡದವರು ಚುನಾವಣೆ ಸಂದರ್ಭದಲ್ಲಿ ಮಾತ್ರ ಜನಪ್ರತಿನಿಧಿಗಳು ಹಾಗೂ ಪಕ್ಷಗಳಿಗೆ ಅಭಿಮಾನಯಾಗಿ ಇರಬೇಕೇ ಹೊರತು ಅನುಯಾಯಿಯಾಗಬಾರದು. ಚುನಾವಣೆಗಳು ಮುಗಿದ ಬಳಿಕ ನಾವು ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ವಾಲ್ಮೀಕಿ ಅವರಿಗೆ ಅನುಯಾಯಿಗಳಾಗಬೇಕು. ಎಸ್‌ಸಿ, ಎಸ್‌ಟಿಗಳಲ್ಲಿ ಸಾಮರಸ್ಯದ ಬೆಸುಗೆ ಮೂಡಿಸುವ ಸಲುವಾಗಿ ನಮ್ಮ ಎಲ್ಲಾ ಪೂಜ್ಯರಿಂದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಎಸ್‌ಸಿ, ಎಸ್‌ಟಿಯಿಂದ 151 ಜಾತಿಗಳಿದ್ದು, ರಾಜ್ಯದಲ್ಲಿ 75 ವರ್ಷಗಳಿಂದ ನಮ್ಮನ್ನು ಆಳುತ್ತಿರುವ ಸರ್ಕಾರಗಳು ನಮ್ಮ ಹಿತ ಕಾಯಲಿಲ್ಲ. ಇಂದು ಮೀಸಲಾತಿ ಹೆಚ್ಚಳ ಆಗಿದೆ ಎಂದರೆ ಕರ್ನಾಟಕದಾದ್ಯಂತ ಇರುವ ಎಸ್‌ಸಿ, ಎಸ್‌ಟಿಯವರೇ ಕಾರಣ. ಹಳ್ಳಿಗಳು, ಹೋಬಳಿಗಳಿಂದ, ತಹಸೀಲ್ದಾರ್, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಶೋಷಿತ ಸಮುದಾಯದವರು ಒಗ್ಗಟ್ಟಿನ ಸಂದೇಶ ರವಾನಿಸಿದ ಫಲದಿಂದ ಇಂದು ಮೀಸಲಾತಿ ಹೆಚ್ಚಳವಾಗಿದೆ ಎಂದರು.

ಚಿತ್ರದುರ್ಗ ಬಂಜಾರ ಗುರುಪೀಠ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಎಸ್‌ಸಿ, ಎಸ್‌ಟಿ ಸಮುದಾಯ ಮುಖಂಡರೊಬ್ಬರು ಮುಖ್ಯಮಂತ್ರಿ ಆಗಬೇಕು. ಅದೇ ನಮ್ಮ ಗುರಿ–ಹೋರಾಟ ಆಗಿದೆ ವಾಲ್ಮೀಕಿ ಶ್ರೀಗಳು ಎಸ್‌ಟಿ ಪರವಾಗಿ ಹೋರಾಟ ಮಾಡಲಿಲ್ಲ. ಎಸ್‌ಸಿ, ಎಸ್ಟಿ ಸಮುದಾಯಗಳ ಹಕ್ಕುಗಳಾಗಿ ಹೋರಾಟ ಮಾಡಿದ್ದಾರೆ ಎಂದು ಪ್ರಶಂಸಿಸಿದರು.

ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, 2023ಕ್ಕೆ ಪರಿಶಿಷ್ಟ ಜಾತಿ ಅಥವಾ ಪಂಗಡ ಸಮುದಾಯದಲ್ಲೊಬ್ಬರೂ ಮುಖ್ಯಮಂತ್ರಿ ಆಗಬೇಕು ಅದಕ್ಕಾಗಿ ನಿರಂತರ ಹೋರಾಟ ನಡೆಯುತ್ತದೆ. ಚಾಮರಾಜನಗರದಿಂದಲೇ ನಿಮ್ಮ ದಿಗ್ವಿಜಯ ಆರಂಭವಾಗಬೇಕು. ಇಲ್ಲಿಂದಲೇ ಹೋರಾಟ ಆರಂಭಿಸಿದ್ದೇವೆ. ಎಸ್‌ಸಿ, ಎಸ್‌ಟಿಗಳು ಈ ವೇದಿಕೆ ಮೂಲಕ ಒಂದಾಗಬೇಕು ಎಂದರು.

ಬೆಂಗಳೂರಿನ ಕ್ರೈಸ್ಟ್ ಕಾಲೇಜು ಪ್ರೊ.ಹರಾ. ಮಹೇಶ್ ಮಾತನಾಡಿ, ಎಸ್‌ಸಿ–ಎಸ್‌ಟಿ ಸಮುದಾಯವರ ಸಾಮರಸ್ಯ ಪ್ರತಿ ಗ್ರಾಮದ ಬೀದಿಗೆ ಬೆಳಕಾಗಿದೆ. ಎಸ್ಸಿ,ಎಸ್ಟಿ ಜನಪ್ರತಿನಿಧಿಗಳು ಮಾಡದ ಕೆಲಸವನ್ನು ಶ್ರೀಗಳು ಹೋರಾಟ ಮೂಲಕ ಮಾಡಿದ್ದಾರೆ. ಶ್ರೀಗಳಿಗೆ ಶಕ್ತಿ ತುಂಬುವ ಕೆಲಸ ಎರಡು ಸಮುದಾಯಗಳಿಂದಾಗಬೇಕು ಎಂದರು.

ಮೈಸೂರು ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಕಪಿನಿನಾಯಕ, ಸುರೇಶ್ ನಾಯಕ, ಕೊಪ್ಪಾಳಿ ಮಹದೇವ ನಾಯಕ, ಜಯಸುಂದರ್, ಚೆಂಗುಮಣಿ, ಕೃಷ್ಣನಾಯಕ, ಶಿವುವಿರಾಟ್, ರಾಮಸಮುದ್ರ ಸುರೇಶ್, ಶಿವಕುಮಾರ್, ಜಿಪಂ ಮಾಜಿ ಸದಸ್ಯ ರಮೇಶ್, ಅರಕಲವಾಡಿ ನಾಗೇಂದ್ರ, ಜ.ಸುರೇಶ್‌ನಾಗ್ ಇತರರಿದ್ದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ

ಇಬ್ಬರು ಎಎಸ್‌ಐಗಳಿಗೆ ಗಾಯ

ಚಾಮರಾಜನಗರ, ನ.7–ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಕರ್ತವ್ಯ ಮುಗಿಸಿ ವಾಪಸ್ಸಾಗುತ್ತಿದ್ದ ಇಬ್ಬರು ಎಎಸ್‌ಐಗಳು ಗಾಯಗೊಂಡಿರುವ ಘಟನೆ ತಾಲೂಕಿನ ಉಡಿಗಾಲ ಗ್ರಾಮದ ಬಳಿ ಭಾನುವಾರ ರಾತ್ರಿ ಸಂಭವಿಸಿದೆ.

ಚಾಮರಾಜನಗರ ಗ್ರಾಮಾಂತರ ಠಾಣೆ ಎಎಸ್‌ಐ ಮಲ್ಲಿಕಾರ್ಜುನ ಹಾಗೂ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಠಾಣೆ ಎಎಸ್‌ಐ ಮಹದೇವಸ್ವಾಮಿ ಗಾಯಗೊಂಡವರು.

ಮಲ್ಲಿಕಾರ್ಜುನ ಮತ್ತು ಮಹದೇವಸ್ವಾಮಿ ಕರ್ತವ್ಯ ಮುಗಿಸಿ ಒಂದೇ ಬೈಕ್‌ನಲ್ಲಿ ತೆರಣಾಂಬಿಯಿಂದ ಚಾಮರಾಜನಗರದ ಕಡೆಗೆ ಬರುತ್ತಿದ್ದರು. ಈ ವೇಳೆ ಉಡಿಗಾಲ ಗ್ರಾಮದ ಬಳಿ ಎದುರಿನಿಂದ ಬಂದ ಈಚರ್ ಗೂಡ್ಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದೆ. ಇದರಿಂದ ಇವರಿಬ್ಬರು ಗಾಯಗೊಂಡರು. ಸದ್ಯ ಚಾಮರಾಜನಗರ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತದ ಬಳಿಕ ವಾಹನ ನಿಲ್ಲಿಸದೆ ಚಾಲಕ ಪರಾರಿಯಾಗಿದ್ದಾನೆ. ಈ ಸಂಬಂಧ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮುದಾಯ ಆಧಾರಿತ ತಪಾಸಣಾ ಶಿಬಿರ

ಗುಂಡ್ಲುಪೇಟೆ, ನ.7–ತಾಲೂಕಿನ ತೆರಕಣಾಂಬಿ ಎಪಿಎಂಸಿ ಮಾರುಕಟ್ಟೆಯ ಆವರಣದಲ್ಲಿ ಸಮುದಾಯ ಆಧಾರಿತ ತಪಾಸಣಾ ಶಿಬಿರ ನಡೆಯಿತು.

ಶಿಬಿರದಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಮೇಲ್ವಿಚಾರಕ ಮಹದೇವಪ್ರಸಾದ್ ಮಾತನಾಡಿ, ರಾಜ್ಯದಲ್ಲಿ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಚಾಮರಾಜನಗರ ಜಿಲ್ಲೆಯು ಇತ್ತೀಚಿನ ವರ್ಷಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಹೆಚ್‌ಐವಿ ಸೋಂಕಿತರು ಕಂಡು ಬರುತ್ತಿರುವುದು ಉತ್ತಮ ವಿಷಯ. ಆದರೆ ಜಿಲ್ಲೆಯು ಅಂತರ್ ರಾಜ್ಯ ಗಡಿ ಪ್ರದೇಶವಾಗಿದ್ದು, ಅಪಾಯದ ಅಂಚಿನಲ್ಲಿರುವ ಸಮುದಾಯವನ್ನು ಗುರುತಿಸುವುದು ಸವಾಲಿನ ಕೆಲಸ. ಹಾಗಾಗಿ ರಾಷ್ಟ್ರೀಯ ಹಾಗೂ ರಾಜ್ಯ ಏಡ್ಸ್ ನಿಯಂತ್ರಣ ಘಟಕದ ಮಾರ್ಗಸೂಚಿಯಂತೆ 2030ರ ಒಳಗೆ ಭಾರತವನ್ನು ಏಡ್ಸ್ ಮುಕ್ತಗೊಳಿಸಲು ಶ್ರಮಿಸಲಾಗಿತ್ತಿದೆ ಎಂದರು. ಈ ಸಂದರ್ಭದಲ್ಲಿ ಬಲಚವಾಡಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ರಾಜೇಶ್ವರಿ ಮತ್ತು ತಾಲೂಕು ಬಸವ ಕೇಂದ್ರದ ಅಧ್ಯಕ್ಷ ಹಾಗೂ ತೆರಕಣಾಂಬಿ ರವಿಚಂದ್ರ ಯೋಗ ತರಬೇತಿ ಕೇಂದ್ರ ಮುಖ್ಯಸ್ಥ ಚಂದ್ರು ಎನ್.ಲಕ್ಕೂರು ಮಾತನಾಡಿದರು. ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದ ಸಿಬ್ಬಂದಿ, ಕ್ಷಯ ರೋಗ ನಿಯಂತ್ರಣ ಘಟಕದ, ಗುಂಡ್ಲುಪೇಟೆ ಐಸಿಟಿಸಿ ಕೇಂದ್ರ, ಬಲಚವಾಡಿ ಹಾಗೂ ತೆರಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಪಂ ಎಪಿಎಂಸಿ ಸಿಬ್ಬಂದಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರಿದ್ದರು.



ಬೇಗೂರು ಐಟಿಐ ಕಾಲೇಜು ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ



ಬೇಗೂರು, ನ.7–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಕೈಗಾರಿಕಾ ತರಬೇತಿ ಸಂಸ್ಥೆಯ ಕಾಂಪೌಂಟ್ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಹೆಚ್ಚು ಒಲವು ತೋರಬೇಕು. ಆಗಲೇ ನಿಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳುವುದರ ಜೊತೆಗೆ ದೇಶಕ್ಕೆ ಕೊಡುಗೆ ನೀಡಬಹುದು. ವಿದ್ಯಾರ್ಥಿಗಳು ಸರ್ಕಾರದಿಂದ ದೊರೆಯುವ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಎಪಿಎಂಸಿ ಅಧ್ಯಕ್ಷ ಕಮರಹಳ್ಳಿ ರವಿ, ಹಾಪ್‌ಕಾಮ್ಸ್ ಅಧ್ಯಕ್ಷ ಕುರುಬರಹುಂಡಿ ಲೋಕೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹೇಶ್, ಮಾಜಿ ತಾಪಂ ಉಪಾಧ್ಯಕ್ಷ ಹೊರೆಯಾಲ ಕೃಷ್ಣ, ಪ್ರಾಂಶುಪಾಲ ಲಬ್ಬಾನಿಖತ್, ಪ್ರಸಾದ್ ಹಾಗೂ ಸಿಬ್ಬಂದಿ ಹಾಜರಿದ್ದರು.

ಕೊಳ್ಳೇಗಾಲ ತಾಲೂಕಿನ ರಾಸುಗಳಿಗೆ ಕಾಲುಬಾಯಿ ರೋಗದ ಲಸಿಕೆ

ಕೊಳ್ಳೇಗಾಲ, ನ.7–ತಾಲೂಕಿನಲ್ಲಿ 31 ಸಾವಿರಕ್ಕೂ ಅಧಿಕ ಜಾನುವಾರುಗಳಿದ್ದು, ಸಾಕಣೆದಾರರು ಅವುಗಳ ಸಂರಕ್ಷಣೆಗೆ ಮುಂದಾಗಬೇಕು ಎಂದು ಶಾಸಕ ಎನ್.ಮಹೇಶ್ ಸಲಹೆ ನೀಡಿದರು



ನಗರದ ಪಶುಸಂಗೋಪನಾ ಆಸ್ಪತ್ರೆ ಮುಂಭಾಗ ಸೋಮವಾರ ಹಮ್ಮಿಕೊಂಡಿದ್ದ ಕಾಲು ಬಾಯಿ ಜ್ವರ ತಡೆ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ಅವರು ಮಾತನಾಡಿದರು. ಜಾನುವಾರುಗಳಿಗೆ ಕಾಲುಬಾಯಿ ರೋಗ ಕಾಣಿಸಿಕೊಂಡರೆ ಅವುಗಳು ಸಾವನ್ನಪ್ಪುತ್ತವೆ. ಇದರಿಂದ ಅವುಗಳನ್ನೇ ನಂಬಿ ಜೀವನ ಸಾಗಿಸುವ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಈ ದೃಷ್ಟಿಯಿಂದ ಎಲ್ಲಾ ರಾಸುಗಳಿಗೆ ಲಸಿಕೆ ಹಾಕುವ ಅಭಿಯಾನವನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ರೈತರು ಈ ಅಭಿಯಾನವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ವೇಳೆ ಪಶು ಇಲಾಖೆ ವೈದ್ಯಾಧಿಕಾರಿ ಡಾ.ಮುತ್ತುರಾಜ್, ಡಾ.ಶಿವಕುಮಾರ್, ಪುಟ್ಟಲಿಂಗಯ್ಯ, ಯುವ ಮುಖಂಡ ನಾರಾಯಣ್, ಶಂಕನಪುರ ಜಗದೀಶ್, ಸೋಮಣ್ಣ ಉಪ್ಪಾರ್, ಶಿವಣ್ಣ ಇನ್ನಿತರರಿದ್ದರು.

ನೀಲಮ್ಮ ನಿಧನ



ಚಾಮರಾಜನಗರ, ನ.7– ಯಳಂದೂರು ತಾಲೂಕಿನ ಕಿನಕಹಳ್ಳಿ ನಿವಾಸಿ, ಲೇ.ಕೆ.ಜಿ.ಬಸವಣ್ಣ ಅವರ ಪತ್ನಿ ನೀಲಮ್ಮ(90) ಸೋಮವಾರ ಸಂಜೆ ನಿಧನರಾದರು.

ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಂಟೇಸ್ವಾಮಿ ಪರಂಪರೆಯನ್ನು ಪ್ರತಿಯೊಬ್ಬರಿಗೂ ತಿಳಿಸಬೇಕು



ಚಾಮರಾಜನಗರ,ನ.7–ಮಂಟೇಸ್ವಾಮಿ ಪರಂಪರೆಗಳನ್ನು ಪ್ರತಿಯೊಬ್ಬರಿಗೂ ತಿಳಿಸುವ ಕೆಲಸವಾಗಬೇಕು ಎಂದು ಮಳವಳ್ಳಿಯ ಕಪ್ಪಡಿ ಕ್ಷೇತ್ರದ ಮುಖ್ಯಸ್ಥ ಎಂ.ಎಲ್. ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್ ಹೇಳಿದರು.

ನಗರದ ಹೊರವಲಯದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಕಬಿನಿ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಾರಂಭ, ಮಂಟೇಸ್ವಾಮಿ ಮಹಾಕಾವ್ಯದ 20 ಗಂಟೆಗಳ ಶ್ರವ್ಯ ಮತ್ತು ದೃಶ್ಯ ಸರಣಿ ಬಿಡುಗಡೆ, ಧರಗೆ ದೊಡ್ಡವರ ಕಾವ್ಯದ 7 ಪಠ್ಯಗಳು ಪುಸ್ತಕ ಬಿಡುಗಡೆ ಹಾಗೂ ಮೈಸೂರು ವಿವಿ ಕುಲಪತಿಗಳಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಂಟೇಸ್ವಾಮಿ ಕಾವ್ಯಗಳನ್ನು ಡಿಜಿಟಲೀಕರಣ ಮಾಡಿ, ಎಲ್ಲೆಡೆ ಹರಡುವಂತೆ ಮಂಟೇಸ್ವಾಮಿ ಅಧ್ಯಯನ ಪೀಠವು ಮಾಡಬೇಕು. ಇದಕ್ಕೆ ನಮ್ಮ ಮಠದಿಂದ ಸಹಕಾರ ನೀಡುತ್ತೇವೆ. ನೀಲಗಾರರು ಚಾಮರಾಜನಗರ, ಮಳವಳ್ಳಿ, ಮೈಸೂರು ಸೇರಿದಂತೆ ವಿವಿಧ ಭಾಗಗಳಲ್ಲಿದ್ದು, ಅವರ ಜಾನಪದಗಳು ವಿಭಿನ್ನವಾಗಿವೆ. ಅದನ್ನೆಲ್ಲ ಒಗ್ಗೂಡಿಸುವ ಕೆಲಸವಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಹೇಮಂತ್‌ಕುಮಾರ್ ಮಾತನಾಡಿ, ಮೈಸೂರು ವಿವಿಯಲ್ಲಿ ಒಟ್ಟು 18 ಪೀಠಗಳಿದ್ದು, ಅದರಲ್ಲಿ ಮಂಟೇಸ್ವಾಮಿ ಅಧ್ಯಯನ ಪೀಠ ಹೆಚ್ಚು ಸಕ್ರಿಯವಾಗಿದೆ. ಈ ಸ್ನಾತಕೋತ್ತರ ಕೇಂದ್ರಕ್ಕೆ ಕೆಲವೇ ದಿನಗಳಲ್ಲಿ ವಿಜ್ಞಾನ ವಿಭಾಗ ಸಹ ಬರಲಿದೆ. ಇಲ್ಲಿನ ವಾಸ್ತವಕ್ಕೆ ತಕ್ಕ ಕೋರ್ಸ್‌ಗಳನ್ನು ತೆರೆದರೆ ಉತ್ತಮ. ಈಗಿರುವ ಕೋರ್ಸ್‌ಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಮಂಟೇಸ್ವಾಮಿ ಮಹಾಕಾವ್ಯದ 20 ಗಂಟೆಗಳ ಶ್ರವ್ಯ ಮತ್ತು ದೃಶ್ಯ ಸರಣಿಯನ್ನು ಸಿಡಿ ಹಾಗೂ ಪೆನ್‌ಡ್ರೈವ್ ಮೂಲಕ ಎಲ್ಲರ ಕೈಗೆಟುಕುವ ದರದಲ್ಲಿ ಮಾರಾಟ ಮಾಡುವಂತೆ ಮನವಿ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್.ಶಿವಪ್ಪ, ಮಾನಸಗಂಗೋತ್ರಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗ ನೂರು ಮಾತನಾಡಿದರು. ಇದೇ ಸಂದರ್ಭದಲ್ಲಿ ಕಬಿನಿ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಾರಂಭಕ್ಕೆ ಚಾಲನೆ ನೀಡಲಾಯಿತು. ಮಂಟೇಸ್ವಾಮಿ ಮಹಾಕಾವ್ಯದ 20 ಗಂಟೆಗಳ ಶ್ರವ್ಯ ಮತ್ತು ದೃಶ್ಯ ಸರಣಿ ಬಿಡುಗಡೆಗೊಳಿಸಲಾಯಿತು. ಅಲ್ಲದೆ ಇದೇ ತಿಂಗಳ 15ರಂದು ನಿವೃತ್ತಿ ಹೊಂದುತ್ತಿರುವ ಮೈಸೂರು ವಿವಿಯ ಕುಲಪತಿ ಪ್ರೊ.ಹೇಮಂತ್ ಕುಮಾರ್‌ರನ್ನು ಸ್ನಾತಕೋತ್ತರ ಕೇಂದ್ರದಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯ ಪ್ರದೀಪ್‌ಕುಮಾರ್ ದೀಕ್ಷಿತ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಮಹೇಶ್, ಹನೂರು ಕೃಷ್ಣಮೂರ್ತಿ, ಜಾನಪದ ಅಕಾಡೆಮಿಯ ನರಸಿಂಹಮೂರ್ತಿ, ಮಹದೇವ ಶಂಕರಪುರ, ಜಾನಪದ ಮಹೇಶ್ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಪ್ರಯೋಗಾರ್ಥ ಸಂಚಾರ ಯಶಸ್ವಿ

ತಲುಪಿದೆ. ನಂತರ ಬೆಳಗ್ಗೆ 10.25 ಗಂಟೆಗೆ ಬೆಂಗಳೂರು ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಆಗಮಿಸಿದೆ. ಅಲ್ಲಿ 5 ನಿಮಿಷ ನಿಲುಗಡೆ, ಬಳಿಕ ಪ್ರಯಾಣ ಮುಂದುವರೆಸಿ ಮಧ್ಯಾಹ್ನ 12.15ಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ರೈಲ್ವೇ ನಿಲ್ದಾಣ ತಲುಪಿತು. ಈ ರೈಲು ಮಧ್ಯಾಹ್ನ 12.30 ಗಂಟೆಗೆ ಮೈಸೂರಿಗೆ ಆಗಮಿಸುವ ಸಮಯ ನಿಗದಿಯಾಗಿತ್ತು. ಆದರೆ 15 ನಿಮಿಷ ಮುಂಚಿತವಾಗಿಯೇ ತಲುಪಿತು. ತಾಂತ್ರಿಕವಾಗಿ ಯಾವುದೇ ತೊಂದರೆ, ಇನ್ನಿತರ ಅಡೆ–ತಡೆಗಳಿಲ್ಲದೆ ಪ್ರಯೋಗಾರ್ಥ ಸಂಚಾರ ಯಶಸ್ವಿಯಾಗಿದೆ ಎಂದು ನೈರುತ್ಯ ರೈಲ್ವೇ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಇ.ವಿಜಯ ಮೈಸೂರು ರೈಲು ನಿಲ್ದಾಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಯೋಗಾರ್ಥ ಮೊದಲ ಬಾರಿ ಮೈಸೂರಿಗೆ ಆಗಮಿಸಿದ ವಂದೇ ಭಾರತ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್‌ನಲ್ಲಿ ಆಗಮಿಸಿದ ಹಿರಿಯ ರೈಲ್ವೆ ಅಧಿಕಾರಿಗಳಾದ ಸಂಜೀವ ಕಿಶೋರ ಮತ್ತು ಬಿ.ಜಿ.ಮಲ್ಯ ಅವರನ್ನು ಪುಷ್ಪಗುಚ್ಛ ನೀಡಿ, ಸ್ಥಳೀಯ ಅಧಿಕಾರಿ ಇ.ವಿಜಯ ಬರಮಾಡಿಕೊಂಡರು. 50 ನಿಮಿಷಗಳ ನಂತರ ಮಧ್ಯಾಹ್ನ 1.05 ಗಂಟೆಗೆ ಮೈಸೂರು ರೈಲು ನಿಲ್ದಾಣದಿಂದ ಚೆನ್ನೈಗೆ ಪ್ರಯಾಣ ಬೆಳೆಸಿತು.

'ಮೇಕ್ ಇನ್ ಇಂಡಿಯಾ' ಪರಿಕಲ್ಪನೆಯಡಿ ಚೆನ್ನೈ ಬಳಿಯ ಪೆರಂಬೂರಿನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ (ಐಎಫ್‌ಸಿ) ಈ ಬೋಗಿಗಳನ್ನು ವಿನ್ಯಾಸಗೊಳಿಸಿದೆ. ಸುಸಜ್ಜಿತ ಆಸನ, ವಿಶಾಲ ಗಾಜಿನ ಕಿಟಕಿ, ಸೆನ್ಸಾರ್‌ನೊಂದಿಗೆ ಸ್ವಯಂಚಾಲಿತ ಬಾಗಿಲುಗಳು, ಹೈಟೆಕ್ ಶೌಚಾಲಯ, ಪ್ರತೀ ಬೋಗಿಗಳಲ್ಲಿ ಎರಡೆರಡು ಸಿಸಿ ಕ್ಯಾಮರಾಗಳು, ಲಗ್ಗೇಜ್ ಇರಿಸಲು ಸೂಕ್ತ ಸ್ಥಳಾವಕಾಶ, ಮೊಬೈಲ್ ಚಾರ್ಜಿಂಗ್ ಪಾಯಿಂಟ್‌ಗಳು, ಸೀಟ್ ಬಳಿ ನೀರಿನ ಬಾಟಲಿ ಇರಿಸಲು ಸ್ಥಳಾವಕಾಶ, ಊಟ–ತಿಂಡಿ ಸೇವನೆಗೆ ಸೂಕ್ತವಾಗಿ ಪುಟ್ಟ ಡೈನಿಂಗ್ ಟೇಬಲ್ ಸೇರಿದಂತೆ ಸುಖಕರ ಪ್ರಯಾಣಕ್ಕೆ ಈ ಟ್ರೇನ್‌ನಲ್ಲಿ ಹೈಟೆಕ್ ಸೌಲಭ್ಯ ಒದಗಿಸಲಾಗಿದೆ ಎಂದರು.

ಮೈಸೂರು–ಚೆನ್ನೈ ನಡುವೆ ಶತಾಬ್ದಿ ಎಕ್ಸ್‌ಪ್ರೆಸ್ ರೈಲು ಎಂದಿನಂತೆ ಸಂಚರಿಸಲಿದ್ದು, ಹೆಚ್ಚುವರಿಯಾಗಿ ವಂದೇ ಭಾರತ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಈ ಎರಡೂ ನಗರಗಳ ನಡುವೆ ಸಂಚರಿಸಲಿದೆ. ನವೆಂಬರ್ 11ರಂದು ಪ್ರಧಾನಮಂತ್ರಿ ಅವರು ಬೆಂಗಳೂರಿನಲ್ಲಿ ದೇಶದ 5ನೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ. ಅದೇ ವೇಳೆ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ)ದ ಟರ್ಮಿನಲ್–2 ಅನ್ನೂ ಪ್ರಧಾನಮಂತ್ರಿಗಳು ಉದ್ಘಾಟಿಸಲಿದ್ದಾರೆ. ನವೆಂಬರ್ 11ರಿಂದ ಅಧಿಕೃತವಾಗಿ ಸಂಚರಿಸಲಿರುವ ವಂದೇ ಭಾರತ್ ಹೈಸ್ಪೀಡ್ ರೈಲಿನ ಪ್ರಯಾಣ ದರ, ಲಗ್ಗೇಜ್ ದರ, ಆನ್‌ಲೈನ್ ಟಿಕೆಟ್ ರಿಸರ್ವೇಷನ್ ವ್ಯವಸ್ಥೆ ಇನ್ನಿತರ ಮಾಹಿತಿಯನ್ನೊಳಗೊಂಡಂತೆ ರೈಲ್ವೇ ಇಲಾಖೆ ಸದ್ಯದಲ್ಲೇ ಅಧಿಸೂಚನೆ ಹೊರಡಿಸಲಿದೆ ಎಂದು ವಿಜಯ ತಿಳಿಸಿದರು.

ವಿಶೇಷತೆಗಳು

ಗಂಟೆಗೆ ಗರಿಷ್ಠ 160 ಕಿ.ಮೀ.ವೇಗದ ಸಾಮರ್ಥ್ಯ ಹೊಂದಿರುವ ವಂದೇ ಭಾರತ್ ರೈಲು ಚೆನ್ನೈ ಮತ್ತು ಮೈಸೂರು ನಡುವೆ 75 ಕಿ.ಮೀ. ವೇಗದಲ್ಲಿ ಸಂಚರಿಸಲಿದೆ. ಚೆನ್ನೈ ಮತ್ತು ಮೈಸೂರು ನಡುವಿನ 504 ಕಿ.ಮೀ. ದೂರವನ್ನು 7 ತಾಸುಗಳಲ್ಲಿ ಕ್ರಮಿಸಲಿದೆ. ಈ ರೈಲಿನಲ್ಲಿ ಸೀಟುಗಳನ್ನು ವಿಮಾನದ ರೀತಿ ನಿರ್ಮಿಸಲಾಗಿದೆ. ಹವಾನಿಯಂತ್ರಿತ ಎಕಾನಮಿ ಮತ್ತು ಎಕ್ಸಿಕ್ಯೂಟಿವ್ ಕ್ಲಾಸ್‌ಗಳಿವೆ. ರೈಲಿನಲ್ಲಿ ಆನ್‌ಬೋರ್ಡ್ ಉಪಾಹಾರ ವ್ಯವಸ್ಥೆ ವೈ–ಫೈ, ಚಾರ್ಜಿಂಗ್ ಪಾಯಿಂಟ್, ರೀಡಿಂಗ್ ಲೈಟ್ ವ್ಯವಸ್ಥೆ, ಸ್ವಯಂಚಾಲಿತ ಬಾಗಿಲು, ಸಿಸಿ ಟಿವಿ ಬಯೋ ಶೌಚಾಲಯಗಳಿರುವ ಈ ರೈಲು, 16 ಬೋಗಿಗಳನ್ನು ಹೊಂದಿದ್ದು, 384 ಮೀಟರ್ ಉದ್ದವಿದೆ. ಪ್ರತ್ಯೇಕ ಇಂಜಿನ್ ಇಲ್ಲ. 1128 ಪ್ರಯಾಣಿಕರ ಆಸನವಿದೆ.

ವಂದೇ ಭಾರತ್ ರೈಲಿನ ಟಿಕೆಟ್ ದರ

ಅಂತರ	ಎಕಾನಮಿ ಕ್ಲಾಸ್	ಎಕ್ಸಿಕ್ಯೂಟಿವ್ ಕ್ಲಾಸ್
ಚೆನ್ನೈ–ಮೈಸೂರು	921 ರೂ.	1880 ರೂ.
ಬೆಂಗಳೂರು–ಮೈಸೂರು	368	768

ಬಿಜೆಪಿ ರಥಯಾತ್ರೆಗೆ ಸಿದ್ಧತೆ

ಹಂತದಲ್ಲಿವೆ. ಬಿಜೆಪಿ ಅಧಿಕಾರಕ್ಕೆ ಬಂದು ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ಸಾಧನೆ, ನಮ್ಮ ಕಾರ್ಯಕ್ರಮಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ರಾಜ್ಯಕ್ಕೆ ನೀಡಿರುವ ಕೊಡುಗೆಗಳನ್ನು ಬಿಂಬಿಸುವುದೇ ಈ ಯಾತ್ರೆಯ ಉದ್ದೇಶ. ಪ್ರತಿಪಕ್ಷ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಡಿರುವ ಆರೋಪಗಳಿಗೆ ರಥಯಾತ್ರೆಯ ಮೂಲಕವೇ ಜನತೆಗೆ ಉತ್ತರ ನೀಡಲು ಬಿಜೆಪಿ ನಾಯಕರು ತೀರ್ಮಾನಿಸಿದ್ದಾರೆ. ರಥಯಾತ್ರೆ ಎಲ್ಲಿ ಆರಂಭಗೊಂಡು ಎಲ್ಲಿ ಅಂತ್ಯಗೊಳ್ಳಬೇಕು. ರಾಷ್ಟ್ರೀಯ ನಾಯಕರು ಯಾವ ಯಾವ ಸ್ಥಳಗಳಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಬೇಕು ಎಂಬ ರೋಡ್ ಮ್ಯಾಪ್ ಸಿದ್ಧಗೊಳ್ಳುತ್ತಿದೆ. ಚುನಾವಣಾ ಪ್ರಚಾರಕ್ಕಾಗಿ ರಥಯಾತ್ರೆ ಕೈಗೊಳ್ಳುತ್ತಿರುವುದನ್ನು ಮುಖ್ಯಮಂತ್ರಿ ಬೊಮ್ಮಾಯಿ ಖಚಿತಪಡಿಸಿ ದ್ದಾರೆ. ಜನ ಸಂಕಲ್ಪ ಯಾತ್ರೆ ಪ್ರಾರಂಭವಾಗಿದೆ. ಈ ಯಾತ್ರೆಯಿಂದ ಜನರ ಸಮಸ್ಯೆಗಳಲ್ಲಿ ಹಾಲಿಸಿ ಪರಿಹರಿಸುವ ಕೆಲಸ ಮಾಡುತ್ತಿದ್ದೇವೆ. ಈ ಯಾತ್ರೆ ನಮ್ಮಲ್ಲಿ ಉತ್ಸಾಹವನ್ನು ಹೆಚ್ಚಿಸಿದೆ. ನಮಗೆ ಹೋದೆಡೆಯಲ್ಲೆಲ್ಲ ಜನ ಬೆಂಬಲ ದೊರೆತಿದೆ. ಈ ಯಾತ್ರೆ ಮುಗಿದ ನಂತರ ಉತ್ತರ ದಕ್ಷಿಣ ಎರಡೂ ದಿಕ್ಕಿನಿಂದ ರಥಯಾತ್ರೆ ಪ್ರಾರಂಭವಾಗಲಿದೆ ಎಂದರು.

ಚಿರತೆಗಳ ಕಣ್ಣಾಮುಚ್ಚಾಲೆ ಆಟ

ಮೂರು ಬೋನ್ ಇರಿಸಿ ಸತತ ಕಾರ್ಯಾಚರಣೆ ನಡೆಸಿದರೂ ಚಿರತೆಗಳು ಬೋನಿನ ಕಡೆ ಮುಖ ಮಾಡುತ್ತಿಲ್ಲ. ಚಿರತೆ ಇಷ್ಟು ದಿನ ಜನನಿಬಿಡ ಪ್ರದೇಶಗಳತ್ತ ಬರುತ್ತಿರಲಿಲ್ಲ. ಆದರೆ ನಿನ್ನೆ ಬೃಂದಾವನದಲ್ಲಿ ಟಿಕೆಟ್ ಕೊಡುವ ಕೌಂಟರ್‌ನ ಸ್ವಲ್ಪ ದೂರದಲ್ಲೇ ಮೀನುಗಾರಿಕೆ ಇಲಾಖೆಯ ಸಿಬ್ಬಂದಿಗೆ ಕಾಣಿಸಿಕೊಂಡಿದೆ. ಈ ಭಾಗದಲ್ಲಿ ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಅವರ ಮೇಲೇನಾದರೂ ದಾಳಿ ನಡೆಸಿದರೆ ಗತಿ ಏನು ಎಂದು ಅಧಿಕಾರಿಗಳಲ್ಲೇ ದಿಗಿಲು ಮೂಡಿದೆ.

ಚಿರತೆ ಸೆರೆ ಹಿಡಿಯಲು ನಾವು ಶ್ರೀರಂಗಪಟ್ಟಣ, ಪಾಂಡವಪುರ– ಎರಡೂ ರೇಂಜ್ ಸಿಬ್ಬಂದಿಗಳನ್ನು ಬಳಸಿದ್ದು, ಅವರು ರಾತ್ರಿ ಹಾಗೂ ಹಗಲು ಎರಡೂ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವು ಚಿರತೆ ಸೆರೆಗೆ 5 ಟ್ರ್ಯಾಪಿಂಗ್ ಕ್ಯಾಮರಾಗಳನ್ನು ಅಳವಡಿಸಿದ್ದು, ಚಿರತೆಯ ಚಲನ–ವಲನಗಳನ್ನು ಗಮನಿಸಲಾಗುತ್ತಿದೆ. ಆದಷ್ಟು ಬೇಗ ಚಿರತೆ ಸೆರೆ ಹಿಡಿಯಲಾಗುವುದು. ಸಾರ್ವಜನಿಕರಾಗಲೀ ಅಥವಾ ಸಿಬ್ಬಂದಿಗಳಾಗಲೀ ಅಣೆಕಟ್ಟೆ ಹಾಗೂ ಬೃಂದಾವನಗಳ ಸುತ್ತ– ಮುತ್ತ ಒಂಟಿಯಾಗಿ ಪೊದೆಗಳ ಬಳಿ ಹೋಗಬಾರದು.

–ರುದ್ರನ್, ಡಿಸಿಎಫ್ ಮಂಡ್ಯ.

ವರ್ಷದ ಕೊನೇ ಚಂದ್ರ ಗ್ರಹಣ

ಜ್ಯೋತಿಷ್ಯಶಾಸ್ತ್ರದ ಪ್ರಕಾರ, ಚಂದ್ರಗ್ರಹಣದ ಸಮಯದಲ್ಲಿ, ಸೂತಕ ಅವಧಿಯು ಗ್ರಹಣ ಪ್ರಾರಂಭವಾಗುವ 9 ಗಂಟೆಗಳ ಮೊದಲು ಇರ ಲಿದೆ. ಈ ಚಂದ್ರಗ್ರಹಣವು ಭಾರತದ ಕೆಲವು ಭಾಗಗಳಲ್ಲಿ ಗೋಚರಿಸುತ್ತದೆ. ಆದ್ದರಿಂದ, ಚಂದ್ರ ಗ್ರಹಣದ ಸೂತಕ ಅವಧಿಯು ಮಾನ್ಯವಾಗಿರು ತ್ತದೆ. ಈ ಚಂದ್ರಗ್ರಹಣ ಭಾರತದಲ್ಲಿ ಕೋಲ್ಕತ್ತಾ, ಸಿಲಿಗುರಿ, ಪಾಟ್ನಾ, ರಾಂಚಿ, ಗುವಾಹಟಿಯಲ್ಲಿ ಗೋಚರಿಸುತ್ತದೆ ಮತ್ತು

ಜಗತ್ತಿನಲ್ಲಿ ಉತ್ತರ ಮತ್ತು ಪೂರ್ವ ಯುರೋಪ್, ಏಷ್ಯಾ, ಆಸ್ಟ್ರೇ ಲಿಯಾ, ಪೆಸಿಫಿಕ್ ಮಹಾಸಾಗರ, ಹಿಂದೂ ಮಹಾ ಸಾಗರ, ಉತ್ತರ ಅಮೇರಿಕಾ ಮತ್ತು ದಕ್ಷಿಣ ಅಮೇರಿಕಾದಲ್ಲಿ ಕಾಣಿಸುತ್ತದೆ. ನವೆಂಬರ್ 8, 2022 ರಂದು ಚಂದ್ರನು ಭೂಮಿಯ ನೆರಳಿನಲ್ಲಿ ಹಾದುಹೋಗುತ್ತಾನೆ. ಈ ವೇಳೆ ಚಂದ್ರ ಕೆಂಪು ಬಣ್ಣಕ್ಕೆ ತಿರುಗುತ್ತಾನೆ. ಇದು ಸುಮಾರು ಮೂರು ವರ್ಷಗಳ ಕೊನೆಯ ಸಂಪೂರ್ಣ ಚಂದ್ರಗ್ರಹಣವಾಗಿದೆ ಎಂದು ಬಾಹ್ಯಾಕಾಶ ಸಂಸ್ಥೆ ನಾಸಾ ಟ್ವೀಟ್ ಮಾಡಿದೆ. ರಕ್ತ ಚಂದ್ರ ಎಂದೂ ಕರೆಯಲ್ಪಡುವ ಸಂಪೂರ್ಣ ಚಂದ್ರಗ್ರಹಣವು ಸೂರ್ಯ ಮತ್ತು ಚಂದ್ರನ ನಡುವೆ ಭೂಮಿ ಬಂದಾಗ ಸಂಭವಿಸುತ್ತದೆ. ಈ ವೇಳೆ ಚಂದ್ರನು ಕೆಂಪು ಬಣ್ಣಕ್ಕೆ ತಿರುಗುತ್ತಾನೆ. ಹೀಗಾಗಿ ಇದನ್ನು 'ಬ್ಲಡ್ ಮೂನ್' ಎಂತಲೂ ಕರೆಯಲಾಗುತ್ತದೆ.


ಸ್ಪರ್ಧಿಸಬೇಕೆಂದು ನಿರ್ಧರಿಸಬೇಕಷ್ಟೇ...

ಕರೆಯುತ್ತಿದ್ದಾರೆ, ಹೀಗೆ ಬೇರೆ ಬೇರೆ ಕಡೆಗಳಿಂದ ಸ್ಪರ್ಧೆಗೆ ಆಹ್ವಾನ ಬರುತ್ತಿದೆ. ಎಲ್ಲಿಂದ ನಿಲ್ಲಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ಅಮಿತ್ ಶಾ ಈ ಹಿಂದೆ ಗಡಿಪಾರಾಗಿದ್ದವರು. ಅವರೀಗ ದೇಶದ ಗೃಹ ಸಚಿವರಾಗಿದ್ದಾರೆ, ಕೊಲೆ ಆರೋಪ ಇರುವವರು ಬೇಕಾದಷ್ಟು ಜನ ಶಾಸಕರಾಗಿದ್ದಾರೆ, ಸಂಸದರಾಗಿದ್ದಾರೆ. ಎಲ್ಲಿಯವರೆಗೂ ಅವರು ಅಪರಾಧಿ ಎಂದು ಸಾಬೀತಾಗುವು ದಿಲ್ಲವೋ ಅಲ್ಲಿಯವರೆಗೆ ಅವರು ಅಮಾಯಕರು. ಅಪರಾಧಿ ಸ್ಥಾನದಲ್ಲಿ ಇರುವವರು ತಪ್ಪಿತಸ್ಥರಲ್ಲ ಎಂದು ಕ್ರಿಮಿನಲ್ ಕಾನೂನು ಹೇಳುತ್ತದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಸಿಎಂ ಇಬ್ರಾಹಿಂ ನನ್ನ ಒಳ್ಳೆಯ ಗೆಳೆಯ, ಆದರೆ ಅವರು ನಮ್ಮನ್ನು ಬಿಟ್ಟು ಜೆಡಿಎಸ್‌ಗೆ ಹೊರಟು ಹೋಗಿ ಅಧ್ಯಕ್ಷರಾಗಿ ದ್ದಾರೆ. ಅವರು ಭದ್ರಾವತಿಯಿಂದ ಬೇಕಾದರೆ ಸ್ಪರ್ಧೆ ಮಾಡಬಹುದು, ಅಲ್ಲಿ ಅಪ್ಪಾಜಿಗೌಡ ಅವರು ತೀರಿಹೋಗಿದ್ದಾರೆ ಎಂದು ಸಿದ್ದರಾಮಯ್ಯ ಇದೇ ಸಂದರ್ಭದಲ್ಲಿ ನುಡಿದರು.

ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಅವರ 'ಸುಧರ್ಮಾ' ಕೃತಿ ಬಿಡುಗಡೆ

ಮೈಸೂರು ಭವ್ಯ ಪರಂಪರೆಯಲ್ಲಿ ಸುಧರ್ಮಾ ಪತ್ರಿಕೆಗೂ ಸ್ಥಾನವಿದೆ

ಪರಂಪರೆ ಉಳಿಸಿ ಬೆಳೆಸಲು ಸಮಾಜದ ಬೆಂಬಲ ಅಗತ್ಯ ; ಹಿರಿಯ ಪತ್ರಕರ್ತ ಹೆಚ್.ಆರ್.ಶ್ರೀಶ



ಮೈಸೂರು,ನ.7(ಪಿಎಂ)– 'ಸುಧರ್ಮಾ' ಸಂಸ್ಕೃತ ಪತ್ರಿಕೆ ನಮ್ಮ ನೆಲದ ಸಂಸ್ಕೃತಿಯ ಪ್ರತೀಕ. ಮೈಸೂರಿನ ಭವ್ಯ ಪರಂಪರೆಯಲ್ಲಿ ಇದಕ್ಕೂ ಸ್ಥಾನವಿದೆ. ಈ ಪತ್ರಿಕೆಯ ಪರಂಪರೆ ಉಳಿಸಿ ಬೆಳೆಸಲು ಸಮಾಜದ ಬೆಂಬಲ ಅಗತ್ಯ ಎಂದು ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಹಿರಿಯ ಪತ್ರಕರ್ತ ಹೆಚ್.ಆರ್.ಶ್ರೀಶ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಸಂಘ ಹಾಗೂ ಬೆಂಗಳೂರಿನ ಶ್ರೀ ಜಯತೀರ್ಥ ಪಬ್ಲಿಕೇಷನ್ಸ್ ಜಂಟಿ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಅವರ 'ಸುಧರ್ಮಾ ; ಐದು ದಶಕ ಕಂಡ ಜಗತ್ತಿನ ಏಕೈಕ ಸಂಸ್ಕೃತ ದಿನಪತ್ರಿಕೆ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಸಮಾಜಕ್ಕೆ ಏನಾದರೂ ಒಳಿತು ಮಾಡಬೇಕೆಂಬ ಉದ್ದೇಶದಿಂದ ಸುಧರ್ಮಾ ಸಂಸ್ಥಾಪಕ ವರದರಾಜ ಅಯ್ಯಂಗಾರ್ ಮತ್ತು ಅವರ ಪುತ್ರ ಸಂಪತ್‌ಕುಮಾರ್ ಸುಧರ್ಮಾ ಮುನ್ನಡೆಸಿದರು. ಸುಧರ್ಮಾ ಕೇವಲ ಪತ್ರಿಕೆ ಮಾತ್ರವಲ್ಲ. ಅದು ನಮ್ಮ ಸಂಸ್ಕೃತಿಯ ಪ್ರತೀಕ. ಈ ಪತ್ರಿಕೆ ಸಂಸ್ಕೃತ ಭಾಷೆ ಮತ್ತು ನಮ್ಮ ಸಂಸ್ಕೃತಿ ಉಳಿಸುವ ಕೆಲಸ ಮಾಡುತ್ತಿದೆ. ಸಂಸ್ಕೃತ ಯಾವುದೋ ಒಂದು ಸಮುದಾಯಕ್ಕೆ ಸೀಮಿತ ಎಂದು ತಿಳಿದುಕೊಳ್ಳುವುದು ತಪ್ಪು. ಅದರಲ್ಲಿರುವ ಜ್ಞಾನವನ್ನು ಪೂರ್ಣ ಪ್ರಮಾಣದಲ್ಲಿ ಬೇರೆ ಭಾಷೆಯಲ್ಲಿ ತರಲು ಇನ್ನೂ ಸಾಧ್ಯವಾಗಿಲ್ಲ. ಸಂಸ್ಕೃತ ಒಂದು ಜ್ಞಾನ ಸಂಪತ್ತು. ವಿಜ್ಞಾನ ಕ್ಷೇತ್ರದಲ್ಲಿ ಅದೆಷ್ಟೋ ಸಂಶೋಧನೆ ಆಗಿದೆ. ಆದರೆ ಅವುಗಳಿಗೆಲ್ಲಾ ಮೂಲ ಆಧಾರ ಸಂಸ್ಕೃತ ಭಾಷೆಯೇ ಆಗಿದೆ ಎಂದರು.

ಮೈಸೂರಿನಲ್ಲಿ ಅಂದು ಎಂ.ವೆಂಕಟಕೃಷ್ಣಯ್ಯ ಆಡಳಿತದ ಸರ್ವಾಧಿಕಾರಿ ಧೋರಣೆ ವಿರುದ್ಧ ಒಂದು ಪತ್ರಿಕೆ ನಿಲ್ಲಬಹುದು ಎಂದು ತೋರಿಸಿಕೊಟ್ಟರು. ಆದರೆ ಅವರ ಬಗ್ಗೆ ಯಾರೂ ತಿಳಿಯುವುದಿಲ್ಲ. ಪತ್ರಕರ್ತನಾದವನು ತಾನು ಇರುವ ನೆಲದ ಭಾಷೆ, ಸಂಸ್ಕೃತಿ ಮತ್ತು ಇತಿಹಾಸ ತಿಳಿದುಕೊಳ್ಳಬೇಕು. 'ಕನ್ನಡ' ಕರ್ನಾಟಕ ಹೊರತಾಗಿ ಬೇರೆಡೆ ಉಳಿಸಲು ಸಾಧ್ಯವಿಲ್ಲ. ಅದು ನಮ್ಮಲ್ಲೇ ಉಳಿದು ಬೆಳೆಯಬೇಕು. ಇಂಗ್ಲಿಷ್ ನಮಗೆ ಸಂವಹನ ಮಾಧ್ಯಮ. ನಮ್ಮ ಮನೆಯಲ್ಲಿ ಮಾತನಾಡಲು ಇಂಗ್ಲಿಷ್ ಬೇಕಿಲ್ಲ. ಗೋಕಾಕ್ ಚಳವಳಿಗೆ ಮೈಸೂರು ಹಾಗೂ ಇಲ್ಲಿನ ಪತ್ರಿಕೋದ್ಯಮದಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಇಂತಹ ಅನೇಕ ಇತಿಹಾಸವನ್ನು ನಾವು ಬೇಗ ಮರೆಯುತ್ತಿದ್ದೇವೆ. ಮುಂದಿನ ಪೀಳಿಗೆಗೆ ಇತಿಹಾಸ ತಿಳಿಸಬೇಕು. ಇದನ್ನು ಪತ್ರಿಕೋದ್ಯಮ ಮಾಡಬೇಕು ಎಂದು ಹೇಳಿದರು.

ವರದರಾಜ ಅಯ್ಯಂಗಾರ್ ಸುಧರ್ಮಾ ಪತ್ರಿಕೆಗಾಗಿ ಜೀವನ ಸವೆಸಿದ್ದಾರೆ. ಸುಧರ್ಮಾ ಪತ್ರಿಕೆ ಒಂದು ಪರಂಪರೆಯೇ ಆಗಿದ್ದು, ಅದನ್ನು ನಾವು ಮುಂದುವರೆಸಬೇಕು. ಹಾಗಾಗಿ ಪತ್ರಿಕೆಗೆ ಯಾವ ರೀತಿ ಬೆಂಬಲ ಕೊಡಬೇಕೆಂದು ಆಲೋಚಿಸಬೇಕು. ಅದಕ್ಕಾಗಿ ಸರ್ಕಾರ ನೆರವು ಪಡೆಯಬೇಕೆಂದು ನಾನು ಹೇಳುವುದಿಲ್ಲ. ಎಲ್ಲದ್ದಕ್ಕೂ ಸರ್ಕಾರವನ್ನೇ ಅವಲಂಬಿಸುವುದು ತಪ್ಪು. ಆ ಕೆಲಸವನ್ನು ಸಮಾಜ ಮಾಡಬೇಕು. ಸಮಾಜ ಅಂದರೆ ನಾವು–ನೀವೇ ಆಗಿದ್ದೇವೆ ಎಂದು ತಿಳಿಸಿದರು.

ಪುಸ್ತಕ ಕುರಿತು ಮಾತನಾಡಿದ ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರೂ ಆದ ಹಿರಿಯ ಪತ್ರಕರ್ತ ಕಂ.ಕ.ಮೂರ್ತಿ, ಅತ್ಯಂತ ಶ್ರದ್ಧೆಯಿಂದ ಸಂಶೋಧನಾತ್ಮಕ ನೆಲೆಯಲ್ಲಿ ಈ ಕೃತಿ ರಚನೆಯಾಗಿದೆ. ಈ ಕೃತಿ ನಮ್ಮಲ್ಲಿ ಪ್ರಜ್ಞೆ ಅರಳಿಸಲಿದೆ. ಸುಧರ್ಮಾದ ಜೊತೆಗೆ ಭಾರತದ ಪತ್ರಿಕೋದ್ಯಮದ ಇತಿಹಾಸವೂ ಇದರಲ್ಲಿ ಅನಾವರಣಗೊಂಡಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವವನ್ನೂ ಹೊಂದಿರುವ ಸುಧರ್ಮಾ, ಸಂಸ್ಕೃತ ಭಾಷೆಯ ಪ್ರಸಾರ ಮಾಡಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲೂ ವರದರಾಜ ಅಯ್ಯಂಗಾರ್ ನಿರ್ಭೀತಿಯಿಂದ ಪತ್ರಿಕೆ ತಂದರು. ಈ ಎಲ್ಲಾ ಅಂಶಗಳನ್ನು ಲೇಖಕರು ಯಾವುದೇ ಸಿದ್ಧಾಂತದ ಪೊರೆ ಇಟ್ಟುಕೊಳ್ಳದೇ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಕೃತಿ ಕರ್ತೃ ಹಾಗೂ ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸುಧರ್ಮಾ ದಿನಪತ್ರಿಕೆ ಸಂಪಾದಕಿ ಜಯಲಕ್ಷ್ಮೀ, ಸಂಸ್ಕೃತ ವಿದ್ವಾಂಸ ಡಾ.ಟಿ.ವಿ. ಸತ್ಯನಾರಾಯಣ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಪತ್ರಕರ್ತ ಬಿ.ರಾಘವೇಂದ್ರ ಮತ್ತಿತರರು ಹಾಜರಿದ್ದರು.

ಈಗ ಪತ್ರಿಕೋದ್ಯಮದಲ್ಲಿ ಜಾತೀಯತೆ, ಭ್ರಷ್ಟಾಚಾರ ಸೇರ್ಪಡೆ

ಮೈಸೂರು,ನ7(ಪಿಎಂ)– ಜಾತೀಯತೆ ಮತ್ತು ಭ್ರಷ್ಟಾಚಾರ ಇರುವ ಕಾರಣಕ್ಕೆ ಸರ್ಕಾರಿ ಹುದ್ದೆಗೆ ಅವಕಾಶವಿದ್ದರೂ ನಾನು ಹೋಗಲಿಲ್ಲ. ಆದರೆ ಈಗ ಪತ್ರಿಕೋದ್ಯಮದಲ್ಲಿ ಈ ಎರಡೂ ಬಂದು ಬಿಟ್ಟಿವೆ ಎಂದು ಹಿರಿಯ ಪತ್ರಕರ್ತ ಹೆಚ್.ಆರ್.ಶ್ರೀಶ ಬೇಸರ ವ್ಯಕ್ತಪಡಿಸಿದರು.

ಜಾತೀಯತೆ ಮತ್ತು ಭ್ರಷ್ಟಾಚಾರ ಈ ಎರಡನ್ನು ಮೊದಲು ತೆಗೆದರೆ ಪತ್ರಿಕೋದ್ಯಮ ಉಳಿಯಲಿದೆ. ಜನ ಪತ್ರಿಕೆ ಈಗಲೂ ಓದುತ್ತಿದ್ದಾರೆ. ವಿದ್ಯುನ್ಮಾನ ಮತ್ತು ಡಿಜಿಟಲ್ ಮಾಧ್ಯಮ ಯಾವುದೇ ಬಂದಿದ್ದರೂ ಮುದ್ರಣ ಮಾಧ್ಯಮ ಉಳಿಯಲಿದೆ. ನಾನು ಪತ್ರಿಕೋದ್ಯಮದಲ್ಲಿ ವೃತ್ತಿ ಆರಂಭಿಸಿದಾಗ, ದೇಶದಲ್ಲಿ ತುರ್ತು ಪರಿಸ್ಥಿತಿ ಇತ್ತು. ಆಗ ಪತ್ರಿಕೆ ಬಗ್ಗೆ ಏನೂ ಗೊತ್ತಿಲ್ಲದ ಅಧಿಕಾರಿಗಳು ಪ್ರಕಟಣೆಗೂ ಮುನ್ನ ಪರಿಶೀಲಿಸುತ್ತಿದ್ದರು. ಪತ್ರಿಕೋದ್ಯಮದಲ್ಲಿ ಕಾರ್ಯನಿರ್ವಹಿಸುವುದು ಈಗ ವೃತ್ತಿಯಾಗಿದೆ. ಆದರೆ ಆ ಕಾಲದಲ್ಲಿ ನಮಗೆ ಅದೊಂದು ಹುಚ್ಚು ಎಂದರು.

ಈ ಹುಚ್ಚು ಕೆಲವರಿಗೆ ಮಾತ್ರ ಇರುತ್ತದೆ. ನಮಗೆ ಬರೆಯುವುದು ಬಿಟ್ಟರೆ ಬೇರೇನೂ ಗೊತ್ತಿಲ್ಲ. ಪತ್ರಿಕೋದ್ಯಮದಲ್ಲಿ ಬರೆಯುವ ಹುಚ್ಚಿದ್ದವರು ಮಾತ್ರ ಇರಬೇಕೇ ಹೊರತು ಇಲ್ಲಿ ಹಣ ಸಂಪಾದಿಸಬಹುದು–ಆಸ್ತಿ ಮಾಡಬಹುದು ಎನ್ನುವ ಆಸೆ ಹೊಂದಿರುವವರು ಇರಬಾರದು. ಅಂತಹವರು ಬೇರೆ ಕ್ಷೇತ್ರಕ್ಕೆ ಹೋಗುವುದೇ ಸರಿ. ಏಕೆಂದರೆ ಈ ಕ್ಷೇತ್ರ ಇರುವುದು ಸಮಾಜಕ್ಕೆ ಒಳಿತು ಮಾಡುವುದಕ್ಕೆ ಹೊರತು ಹಣ ಮಾಡುವುದಕ್ಕಲ್ಲ ಎಂದು ತಿಳಿಸಿದರು.

ಕಬ್ಬಿಗೆ ವೈಜ್ಞಾನಿಕ ದರಕ್ಕೆ ಆಗ್ರಹಿಸಿ ರೈತರ ಬಾರುಕೋಲು ಚಳವಳಿ

ರೈತರ ಪರ ನಿಲ್ಲದೇ ಹೋದರೆ ಚುನಾವಣೆಯಲ್ಲಿ ತಕ್ಕ ಪಾಠ ಕಳಿಸುವ ಎಚ್ಚರಿಕೆ



ಮೈಸೂರು,ನ.7(ಎಂಟಿವೈ)– ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಗಾಗಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆ ಮುಂದುವರಿದಿದ್ದು, 8ನೇ ದಿನವಾದ ಸೋಮವಾರ ಬಾರುಕೋಲು ಚಳವಳಿ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಇಂದು ಬೆಳಗ್ಗೆ ಕಬ್ಬು ಬೆಳೆಗಾರರು ಚಾವಟಿ ಹಿಡಿದು ಬೀಸುವ ಮೂಲಕ ಜನಪ್ರತಿನಿಧಿಗಳಿಗೆ ಮುಂದಿನ ಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಸಿದರು. 'ಜನಪ್ರತಿನಿಧಿಗಳು ರೈತರ ಪರ ಇಲ್ಲ, ಬಂಡವಾಳಶಾಹಿಗಳ ಪರವಿದ್ದಾರೆ. ಇವರೆಲ್ಲ ಎಮ್ಮೆ ಕಾಯಲು ಲಾಯಕ್ಕು' ಎಂದು ಘೋಷಣೆ ಕೂಗಿ, ಕಿಡಿಕಾರಿದರು.

ಇದೇ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಸರ್ಕಾರ ಬಂಡವಾಳಶಾಹಿಗಳ ರಿಮೋಟ್ ಕಂಟ್ರೋಲ್ ರೀತಿ ಕಾರ್ಯನಿರ್ವಹಿಸುತ್ತಿರುವುದರಿಂದ ರೈತರು ಬಲಿಪಶುಗಳಾಗುತ್ತಿದ್ದಾರೆ. ಟನ್ ಕಬ್ಬಿಗೆ 7500 ರೂ. ಹೆಚ್ಚು ಆದಾಯ ಇದೆ. ಒಂದು ಟನ್ ಕಬ್ಬಿನಿಂದ ನೂರು ಲೀಟರ್ ಎಥನಾಲ್ ದೊರೆಯಲಿದೆ. ಕೇಂದ್ರ ಸರ್ಕಾರ ನಿಗದಿ ಮಾಡಿರುವ ಇದರ ದರ ಲೀಟರಿಗೆ 65 ರೂ., ಟನ್ ಕಬ್ಬಿನ ಸಿಪ್ಪೆಯಿಂದ 144 ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ನಂತರ ಮಡ್ಡಿಯಿಂದಲೂ ಗೊಬ್ಬರ ಉತ್ಪಾದಿಸಲಾಗುತ್ತದೆ. ಹೀಗೆ ಎಲ್ಲಾ ಸೇರಿ 7500 ರೂ. ಆದಾಯ ಬರುತ್ತದೆ. ವರ್ಷವಿಡೀ ಕಷ್ಟಪಟ್ಟು ಕಬ್ಬು ಬೆಳೆದ ರೈತನಿಗೆ ಕೇವಲ 3000 ರೂ. ಆದಾಯ ದೊರೆಯುತ್ತಿದೆ. ಈ ರೀತಿ ಅನ್ಯಾಯ ಏಕೆ ಎಂದು ಪ್ರಶ್ನಿಸಿದರು.

60–70 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ರೈತರ ಜಮೀನನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆದಿದೆ. ಲಕ್ಷಾಂತರ ರೈತರನ್ನು ಒಕ್ಕಲೆಬ್ಬಿಸುವ ಯತ್ನವೂ ನಡೆಯುತ್ತಿದೆ. ಸಾಗುವಳಿ ರೈತರಿಗೆ ಅನ್ಯಾಯವಾಗುತ್ತಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಿ ನ್ಯಾಯ ಒದಗಿಸಬೇಕು ಎಂಬುದು ನಮ್ಮ ಹೋರಾಟದ ಗುರಿ. ಆದರೆ, ಶಾಸಕರು, ಸಚಿವರು ಜನಸೇವೆಗೆಂದು ಬಂದು ಜನರನ್ನು ಮರೆತಿದ್ದಾರೆ. ಅವರನ್ನು ಎಚ್ಚರಿಸಲು ಬಾರುಕೋಲು ಚಳವಳಿ ನಡೆಸಲಾಗಿದೆ. ಇನ್ನು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಚುನಾವಣೆಯಲ್ಲಿ ಹಳ್ಳಿಗಳಿಗೆ ಬಂದಾಗ ರೈತರು ಬಾರುಕೋಲು ಮೂಲಕವೇ ಉತ್ತರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಅತ್ತಹಳ್ಳಿ ದೇವರಾಜ್, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕೆರೆಹುಂಡಿ ರಾಜಣ್ಣ, ಹಾಡ್ಯ ರವಿ, ಅಂಬಳೆ ಮಂಜುನಾಥ್, ಲಕ್ಷ್ಮೀಪುರ ವೆಂಕಟೇಶ್, ವರಕೂಡು ಜಯರಾಮು, ಟಿ.ರಾಮೇಗೌಡ, ಸೋನಹಳ್ಳಿ ದೊರೆಸ್ವಾಮಿ, ಬಸವಣ್ಣ, ಮಂಜುನಾಥ್, ಕುರುಬೂರು ಮಂಜು, ಮಾರ್ಬಳ್ಳಿ ನೀಲಕಂಠಪ್ಪ, ಚುಂಚ ರಾಯನಹುಂಡಿ ತಮಯಪ್ಪ, ಮಲ್ಲಪ್ಪ, ಮಾದೇವಸ್ವಾಮಿ, ಮುದ್ದಹಳ್ಳಿ ಶಿವಣ್ಣ, ದಿನೇಶ್ ಹಾಜರಿದ್ದರು.

ಜಾನುವಾರುಗಳಲ್ಲಿ ಚರ್ಮ ಗಂಟು ರೋಗ; ರೈತರಿಗೆ ಸಲಹೆ

ಮೈಸೂರು, ನ.7(ಆರ್‌ಕೆಬಿ)– ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ತಾಲೂಕುಗಳಲ್ಲಿ ಜಾನುವಾರುಗಳಲ್ಲಿ ಚರ್ಮ ಗಂಟು ರೋಗವು ಕಂಡುಬಂದಿದ್ದು, ರೋಗವು ವ್ಯಾಪಕವಾಗಿ ಹರಡುವ ಸಾಧ್ಯತೆ ಇರುತ್ತದೆ. ಇದೊಂದು ವೈರಾಣು ರೋಗವಾಗಿದ್ದು, ಈ ಸೊಳ್ಳೆ ಕಡಿತದಿಂದ ಹರಡುವ ಈ ರೋಗವನ್ನು ತಡೆಗಟ್ಟಲು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ರೈತರಿಗೆ ಸಲಹೆ ನೀಡಿದ್ದಾರೆ.

ಜಾನುವಾರುಗಳ ಚರ್ಮ ಗಂಟು ರೋಗವನ್ನು ತಡೆಗಟ್ಟಲು ರೈತರು ರಾಸುಗಳ ಕೊಟ್ಟಿಗೆಯನ್ನು ಶುಚಿಯಾಗಿಡಬೇಕು. ಕೊಟ್ಟಿಗೆಗೆ ಸೊಳ್ಳೆ ಪರದೆ ಅಳವಡಿಸಿ, ಜಾನುವಾರುಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಸಾಕಣೆದಾರರು ಪ್ರಥಮ ಆದ್ಯತೆ ನೀಡುವುದು ಸೂಕ್ತ. ಈ ರೋಗದ ಲಕ್ಷಣ ಕಂಡು ಬಂದಲ್ಲಿ ರೋಗಗ್ರಸ್ಥ ಜಾನುವಾರುಗಳನ್ನು ಬೇರ್ಪಡಿಸಿ, ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಮೈಮೇಲಿನ ಗಂಟುಗಳು ಒಡೆದಾಗ ಗಾಯಗಳು ನಂಜಾಗದಂತೆ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಬೇಕು.

ರೋಗ ನಿರೋಧಕ ಶಕ್ತಿಯನ್ನು ಬಲಗೊಳಿಸಲು ಉತ್ತಮವಾದ ಸಮತೋಲನ ಪಶು ಆಹಾರ, ಹಸಿ ಮೇವು, ಖನಿಜ ಮಿಶ್ರಣಗಳನ್ನು ನೀಡಿ ಶಾರೀರಿಕ ಸದೃಢತೆಯನ್ನು ಕಾಪಾಡುವುದು ಅತೀ ಮುಖ್ಯವಾಗಿದೆ. ಸೋಂಕಿನಿಂದ ಮರಣ ಹೊಂದಿದ ಜಾನುವಾರುಗಳನ್ನು ಆಳವಾದ ಗುಂಡಿಗಳಲ್ಲಿ ಹೂಳಬೇಕು ಎಂದು ರೈತರಿಗೆ ಸಲಹೆ ನೀಡಿದ್ದಾರೆ.



ಮೈಸೂರಿನ ಮಂಡಿಮೊಹಲ್ಲಾ ವಾರ್ಡ್ ನಂ.24ರ ಅಕ್ಬರ್ ರಸ್ತೆಯಲ್ಲಿ ಭುವನೇಶ್ವರಿ ಯುವಕರ ಸೇನಾ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಶಾಲಾ ಮಕ್ಕಳಿಗೆ ಪುಸ್ತಕ ವಿತರಿಸಲಾಯಿತು. ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷೆ ಶ್ರೀಮತಿ ಹೇಮಾ, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿ (ರಾಜಕೀಯ), ಸೂರಜ್, ಜಯಚಂದ್ರ, ಶೋಭಾ, ಮಧು, ಮಂಜು ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಭಗವದ್ಗೀತೆ ಕಂಠಪಾಠ ಸ್ಪರ್ಧೆ

ಮೈಸೂರು, ನ. 7– ಮೈಸೂರಿನ ಶ್ರೀಕಾಂತ ಸಂಸ್ಕೃತ ಪಾಠಶಾಲಾ ವತಿಯಿಂದ ಡಿ. 4 ರಂದು ಬೆಳಗ್ಗೆ 10 ಗಂಟೆಯಿಂದ ಭಗವದ್ಗೀತೆ ಕಂಠಪಾಠ ಮತ್ತು ಇತರೆ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಮಾಹಿತಿಗೆ 98805 43135, 9739414323 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಕೆ

ಮೈಸೂರು, ನ. 7 – ಕೆನ್ನಾನ್ ಕ್ಲಬ್ ಆಫ್ ಮೈಸೂರು ವತಿಯಿಂದ ನ. 12 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಚಾಮುಂಡಿಪುರಂನ ಪಶು ಆಸ್ಪತ್ರೆಯಲ್ಲಿ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸಿ ಕೆಸಿಐ ರಿಜಿಸ್ಟ್ರೇಷನ್ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 98440 79165, 94480 54778 ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ನ. 7 – ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನ. 10 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಜಾನುವಾರುಗಳಿಗೆ ಕಾಲು, ಬಾಯಿ ಜ್ವರ:ತಿಂಗಳ ಕಾಲ ಲಸಿಕಾ ಅಭಿಯಾನ





ಮೈಸೂರು, ನ.7(ಎಂಟಿವೈ)– ಕಾಲು–ಬಾಯಿ ಜ್ವರ ಬಾಧೆಯಿಂದ ಜಾನುವಾರುಗಳನ್ನು ಕಾಪಾಡುವ ನಿಟ್ಟಿನಲ್ಲಿ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯು ಒಂದು ತಿಂಗಳ ಲಸಿಕಾ ಅಭಿಯಾನ ಆರಂಭಿಸಿದೆ.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಕಾಲುಬಾಯಿ ರೋಗದ ಮೂರನೇ ಹಂತದ ಲಸಿಕಾ ಅಭಿಯಾನ ನ.7ರಿಂದ ಡಿ.7ರವರೆಗೆ ನಡೆಯಲಿದ್ದು, ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ರೈತರ ಜಾನುವಾರುಗಳಿಗೆ ಲಸಿಕೆ ಹಾಕಲು ವಿಶೇಷ ಅಭಿಯಾನ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 5.14 ಲಕ್ಷ ರಾಸುಗಳಿಗೆ ಈ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಅದಕ್ಕಾಗಿ ಲಸಿಕೆ ದಾಸ್ತಾನು ಮಾಡಲಾಗಿದೆ. ಅಲ್ಲದೇ, ತಾಲೂಕುವಾರು ಗ್ರಾಮೀಣ ಪ್ರದೇಶಕ್ಕೆ ತೆರಳಿ ಲಸಿಕೆ ಹಾಕಲು ಸಂಚಾರಿ ತಂಡವನ್ನು ರಚಿಸಲಾಗಿದೆ.

ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಪಶು ಆಸ್ಪತ್ರೆ ಆವರಣದಲ್ಲಿ ಕಾಲುಬಾಯಿ ರೋಗದ ಲಸಿಕಾ ಅಭಿಯಾನಕ್ಕೆ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಂಟಿ ನಿರ್ದೇಶಕ ಡಾ.ವೀರಭದ್ರಯ್ಯ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಕೈಗೊಂಡಿರುವ ಕಾಲುಬಾಯಿ ರೋಗದ ಲಸಿಕಾ ಅಭಿಯಾನಕ್ಕೆ ಗೋಪಾಲಕರು, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವವರು ಹಾಗೂ ರೈತರು ಸಹಕರಿಸಬೇಕು. ಈಗಾಗಲೇ ಹಲವೆಡೆ ಕಾಲುಬಾಯಿ ರೋಗದಿಂದ ಜಾನುವಾರುಗಳು ನರಳುತ್ತಿರುವುದು ವರದಿಯಾಗಿದೆ. ಇದರಿಂದ ರೈತರಿಗೂ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗೋಪಾಲಕರು ತಪ್ಪದೇ ಲಸಿಕೆ ಹಾಕಿಸಬೇಕು ಎಂದು ಸಲಹೆ ನೀಡಿದರು.

ಕಾಲುಬಾಯಿ ರೋಗವು ಎತ್ತು, ಹೋರಿ, ಹಸು, ಎಮ್ಮೆ ಹಾಗೂ ಹಂದಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅತಿಯಾದ ಜ್ವರ, ಬಾಯಲ್ಲಿ ಹುಣ್ಣು, ಜೊಲ್ಲು ಸುರಿಯುವುದು, ಕುಂಟುವುದು, ಕೆಚ್ಚಲಿನ ಮೇಲೆ ಗುಳ್ಳೆಗಳಾಗುವುದು ಕಾಲುಬಾಯಿ ರೋಗದ ಲಕ್ಷಣಗಳಾಗಿವೆ. ರೋಗಗ್ರಸ್ಥ ಪ್ರಾಣಿಗಳ ಸಂಪರ್ಕ, ವೈರಾಣುವಿನಿಂದ ಕಲುಷಿತಗೊಂಡಿರುವ ಮೇವು ಹಾಗೂ ನೀರು, ಗಾಳಿ ಸೇವನೆ, ದನಗಳ ಜಾತ್ರೆ ಹಾಗೂ ಸಂತೆಗಳಿಂದಲೂ ಈ ರೋಗ ವ್ಯಾಪಕವಾಗಿ ಹರಡಲಿದೆ. ಈ ಬಗ್ಗೆ ರೈತರು ಜಾಗೃತರಾಗಿರಬೇಕು ಎಂದರು.

ಈ ರೋಗಕ್ಕೆ ತುತ್ತಾದ ರಾಸುಗಳನ್ನು ಪ್ರತ್ಯೇಕವಾಗಿರಿಸಿ ಉಪಚರಿಸಬೇಕು. ಕಾಲು ಮತ್ತು ಬಾಯಲ್ಲಾಗಿರುವ ಹುಣ್ಣಿಗೆ ಶೇ.0.5ರಷ್ಟು ಅಡುಗೆ ಸೋಡಾ ದ್ರಾವಣದಿಂದ ತೊಳೆಯಬೇಕು. ಮೃದು ಆಹಾರವಾದ ಗಂಜಿ, ಬಾಳೆಹಣ್ಣು, ರಾಗಿ ಗಂಜಿ ಕುಡಿಸಬೇಕು. ಆಂಟಿಬಯೋಟಿಕ್ಸ್ ಹಾಗೂ ವಿಟಮಿನ್ ಇಂಜೆಕ್ಷನ್ ಕೊಡಿಸಬೇಕು. ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಿ, ಕೊಟ್ಟಿಗೆಯನ್ನು ದಿನಕ್ಕೆ 3–4 ಬಾರಿಯಾದರೂ ಕ್ರಿಮಿನಾಶಕ ದ್ರಾವಣದಿಂದ ಶುದ್ಧೀಕರಿಸಬೇಕು. ಈ ರೋಗದಿಂದ ಜಾನುವಾರುಗಳನ್ನು ಪಾರು ಮಾಡಲು ಲಸಿಕೆಯೊಂದೇ ಮಾರ್ಗವಾಗಿದೆ. ಪ್ರತಿ ಆರು ತಿಂಗಳಿಗೊಮ್ಮೆ ಲಸಿಕೆ ಹಾಕಿಸಬೇಕು. ಈ ಹಿಂದೆ ಹಾಕಿಸಿದ್ದರೂ ಮತ್ತೊಮ್ಮೆ ಲಸಿಕೆ ಹಾಕಿಸಿ ಜಾನುವಾರುಗಳನ್ನು ಕಾಲುಬಾಯಿ ರೋಗದಿಂದ ರಕ್ಷಿಸಿಕೊಳ್ಳಲು ಸಹಕರಿಸುವಂತೆ ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗಾಗಿ ಪಶುಪಾಲಕರ ಸಹಾಯವಾಣಿ **8277100200** ಸಂಖ್ಯೆ(ಉಚಿತ ಕರೆ) ಕರೆ ಮಾಡಬಹುದಾಗಿದೆ. ಈ ಸಂದರ್ಭದಲ್ಲಿ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಷಡಕ್ಷರಮೂರ್ತಿ, ಮುಖ್ಯ ಪಶುವೈದ್ಯಾಧಿಕಾರಿ ಡಾ.ಬಾಲರಾಜ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಹುಣಸೂರು ಗ್ರಾಮದಲ್ಲಿ ಬಾಬೂಜಿ ಸಮುದಾಯ ಭವನ ಉದ್ಘಾಟನೆ



ಕ್ಷೇತ್ರವಾರು ಅಭಿವೃದ್ಧಿಗೆ 25 ಕೋಟಿ ರೂ. ಅನುದಾನ ನೀಡಲಾಗಿತ್ತು. ಗ್ರಾಮದಲ್ಲಿ ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣಕ್ಕೆ 5 ಲಕ್ಷ, ಬಸ್ ನಿಲ್ದಾಣ ಕಾಮಗಾರಿಗೆ 9 ಲಕ್ಷ ರೂ., ವಾಲ್ಮೀಕಿ ಭವನ ನಿರ್ಮಾಣಕ್ಕೆ 12 ಲಕ್ಷ ರೂ.ಗಳನ್ನು ಶಾಸಕರ ನಿಧಿಯಿಂದ ನೀಡಲಾಗಿದ್ದು, ಪ.ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ 30 ಲಕ್ಷ ಅನುದಾನ ನೀಡಿದ್ದು, ವಿಶ್ವಕರ್ಮ ಭವನ ನಿರ್ಮಿಸಲು ಸರ್ಕಾರಕ್ಕೆ 15 ಲಕ್ಷ ರೂ. ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದು, ಡಿಸೆಂಬರ್‌ನಲ್ಲಿ ಅನುದಾನ ಬಿಡುಗಡೆಯಾಗಲಿದೆ. - ಡಾ.ಯತೀಂದ್ರ, ಶಾಸಕರು.

ತಿ.ನರಸೀಪುರ, ನ.7– ನನ್ನ ತಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ವರುಣಾ ಕ್ಷೇತ್ರಕ್ಕೆ 17 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ನೀಡಿದ್ದರಿಂದ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಯಿತು ಎಂದು ಶಾಸಕ ಡಾ.ಯತೀಂದ್ರ ತಿಳಿಸಿದರು.

ತಾಲೂಕಿನ ಹುಣಸೂರು ಗ್ರಾಮದಲ್ಲಿ 22 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಾಬು ಜಗಜೀವನರಾಂ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ತಂದೆ ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ನೀಡಿದ್ದ ಹೆಚ್ಚಿನ ಅನುದಾನದಿಂದ ವರುಣಾ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗಿತ್ತು. ಆದರೆ ಬಿಜೆಪಿ ಸರ್ಕಾರದಲ್ಲಿ ಅನುದಾನ ಕಡಿಮೆಯಾಗಿದ್ದರಿಂದ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಗಲಿಲ್ಲ. ಬಂದ ಅನುದಾನದಲ್ಲೇ ಅಗತ್ಯ ಕಾಮಗಾರಿ ಕೈಗೊಳ್ಳಲಾಗಿದೆ ಎಂದರು.

ಗ್ರಾಮದಲ್ಲಿ ನಿರ್ಮಾಣವಾಗಿರುವ ಬಾಬೂಜಿ ಭವನದಲ್ಲಿ ಈ ಹಿಂದೆ ರಾಚಪ್ಪಾಜಿ ದೇವಾಲಯವಿತ್ತು. ರಾಚಪ್ಪಾಜಿ ಕಂಡಾಯದ ಜೊತೆಗೆ ಸಮುದಾಯ ಭವನವನ್ನು ಒಂದೇ ಕಡೆ ನಿರ್ಮಿಸಿಕೊಡುವಂತೆ ಗ್ರಾಮಸ್ಥರ ಬೇಡಿಕೆಗೆ ಅನುಗುಣವಾಗಿ ಸಮುದಾಯ ಭವನ ನಿರ್ಮಿಸಲಾಗಿದೆ. ಸಮುದಾಯ ಭವನಕ್ಕೆ ಅನುದಾನ ಸಿಗುವುದು ಕಡಿಮೆ. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುದಾನ ಬಾರದ ಕಾರಣ ಶಾಸಕರ ನಿಧಿ ಹಾಗೂ ವಿವಿಧ ಕಾಮಗಾರಿಗಳ ಉಳಿಕೆ ಹಣದಲ್ಲಿ ಭವನ ನಿರ್ಮಿಸಿಕೊಟ್ಟಿದ್ದೇನೆ. ಅಲ್ಲದೇ ಮುಂದುವರೆದ ಕಾಮಗಾರಿಗೆ 5 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಸೌಹಾರ್ದಯುತ ಚರ್ಚೆ ಮಾಡಿ, ಸಮಾಜಮುಖಿ ಕಾರ್ಯಕ್ರಮ ರೂಪಿಸಲು ಸಮುದಾಯ ಭವನಗಳ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು. ಇಂದು ಜಾತಿ ವ್ಯವಸ್ಥೆ ದೇಶಾದ್ಯಂತ ತಾಂಡವ ವಾಡುತ್ತಿದೆ. ಎಲ್ಲಿಗೆ ಹೋದರೂ, ಜಾತಿ ಯಾವುದೆಂದು ಕೇಳಿ ನಂತರ ಮಾತನಾಡುವ ವ್ಯವಸ್ಥೆ ಜಾರಿಯಲ್ಲಿದೆ. ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡುವುದು ಸವಾಲಾಗಿದ್ದು, ಜಾತಿ ವ್ಯವಸ್ಥೆ ರಕ್ತಗತವಾಗಿ ಬಂದಿದ್ದು ಅದರ ನಿರ್ಮೂಲನೆ ಸಾಧ್ಯವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಭಾಗ್ಯ, ಸಿ.ನಿಂಗರಾಜು, ಶಿವರಾಜು, ಗ್ರಾಪಂ ಮಾಜಿ ಅಧ್ಯಕ್ಷೆ ಚಂದ್ರಮ್ಮ, ಪುರಸಭೆ ಮಾಜಿ ಅಧ್ಯಕ್ಷ ಸೋಮು, ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಗ್ರಾಪಂ ಮಾಜಿ ಅಧ್ಯಕ್ಷ ರವಿ, ಸದಸ್ಯ ನಾಗರಾಜು, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಹುಣಸೂರು ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಕಟ್ಟಡ ಕಾರ್ಮಿಕರ ಸಂಘದ ಉಪಾಧ್ಯಕ್ಷ ರಾಚಪ್ಪ ನಿಂಗರಾಜು, ಫೈನಾನ್ಸ್ ಕಾಂತರಾಜು, ಎನ್.ಲಕ್ಷ್ಮಣ್, ಕಮಲಾ, ಡೈರಿ ಅಧ್ಯಕ್ಷ ಮಂಟೇಲಿಂಗಪ್ಪ, ಸೋಮಣ್ಣ, ಸರೋಜಮ್ಮ, ಗಿರಿಜಾ, ರಾಜೇಶ್ವರಿ, ಮಹೇಶ್, ಚಿನ್ನತಾಯಮ್ಮ, ಯಜಮಾನರಾದ ಚಿಕ್ಕಮಾದು, ಸಿದ್ದರಾಜು, ಗುರುದೇವ್, ಡಿ.ಶಿವಪ್ಪ, ಮಹದೇವ್, ಸಿ.ಪುಟ್ಟಯ್ಯ, ಜಯಂತ್, ರಾಜಪ್ಪ, ಕಂಟ್ರಾಕ್ಟರ್ ಸಿದ್ದರಾಜು, ತಹಸೀಲ್ದಾರ್ ಸಿ.ಜಿ.ಗೀತಾ, ತಾಪಂ ಇಓ ಕೃಷ್ಣಕುಮಾರ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಕೆಇಬಿ ಕುಮಾರ ಸ್ವಾಮಿ, ನಿರ್ಮಿತಿ ಕೇಂದ್ರದ ಸಂಜಯ್, ಮಹದೇವ್ ಮತ್ತಿತರರಿದ್ದರು.



ಪಿರಿಯಾಪಟ್ಟಣದ ಒಕ್ಕಲಿಗರ ಬೀದಿಯಲ್ಲಿ ಶ್ರೀರಾಮ ಮಂದಿರದ ಸಮುದಾಯ ಭವನದ ನಿರ್ಮಾಣ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನಡೆಸಿದರು. ಈ ವೇಳೆ ಸಮುದಾಯದ ಮುಖಂಡರಾದ ಪಿ.ಕೆ. ವಾಸುದೇವ್, ಪುರಸಭಾಧ್ಯಕ್ಷ ಮಹೇಶ್, ಪುರಸಭಾ ಸದಸ್ಯರಾದ ಭಾರತಿ, ಪ್ರಕಾಶ್‌ಸಿಂಗ್, ಸ್ವಾಮಿ, ಜಾಕಿ ಸುರೇಶ್, ಶಂಕರ್, ಪುರುಷೋತ್ತಮ್ ಸೇರಿದಂತೆ ಇತರರಿದ್ದರು.

ವೀರಶೈವ ಲಿಂಗಾಯಿತ ವಧುವರರ ಸಮಾವೇಶ

ಮೈಸೂರು, ನ.7– ನಂಜನಗೂಡಿನ ದೇವಿರಮ್ಮನ ಗೇಟ್‌ನಲ್ಲಿರುವ ಶ್ರೀಶರಣ ಸಂಗಮ ಮಠದಲ್ಲಿ ನ.27 ರಂದು ಬೆಳಗ್ಗೆ 11 ರಿಂದ ಸಂಜೆ 4 ರವರೆಗೆ ವೀರಶೈವ ಲಿಂಗಾಯಿತ ವಧುವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ವೀರಶೈವ ಲಿಂಗಾಯಿತ ಬಂಧುಗಳು ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಕೋರಲಾಗಿದೆ. ಆಸಕ್ತರು ನ. 26 ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ ಮೊ. 9686205346, 9972703737 ಸಂಪರ್ಕಿಸಬಹುದು.

ಕೆಂಪೇಗೌಡರ ಮೃತ್ತಿಕೆ ಸಂಗ್ರಹ ರಥಯಾತ್ರೆಗೆ ಅದ್ದೂರಿ ಸ್ವಾಗತ



ಚುಂಚನಕಟ್ಟೆ ನ.7– ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದ ಆವರಣದಲ್ಲಿ ನ.11ರಂದು ಪ್ರಧಾನಿ ಮೋದಿ ಅವರು 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣಗೊಳಿಸುವ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಸಂಚರಿಸುತ್ತಿರುವ ಪವಿತ್ರ ಮೃತ್ತಿಕೆ ಸಂಗ್ರಹ ರಥಯಾತ್ರೆಗೆ ಸಾಲಿಗ್ರಾಮ ತಾಲೂಕಿನ ಹಾಡ್ಯಗೇಟ್ ಬಳಿ ತಾಲೂಕು ಆಡಳಿತ ಮತ್ತು ಒಕ್ಕಲಿಗರ ಸಂಘದಿಂದ ಅದ್ದೂರಿ ಸ್ವಾಗತ ಕೋರಲಾಯಿತು.

ರಾಜ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಹಿರಿಯ ಉಪಾಧ್ಯಕ್ಷ ಹೆಚ್.ಪಿ. ಪರಶುರಾಂ, ಖಜಾಂಚಿ ಹೆಚ್.ಪಿ.ಶಿವಣ್ಣ, ತಹಸೀಲ್ದಾರರಾದ ಎಂ.ಎಸ್.ಯದುಗಿರೀಶ್, ಮೋಹನ್‌ಕುಮಾರ್, ತಾಪಂ ಇಓ ಹೆಚ್.ಕೆ.ಸತೀಶ್ ಮತ್ತಿತರರು ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಸಂಭ್ರಮದಿಂದ ಬರಮಾಡಿಕೊಂಡರು.

ಈ ವೇಳೆ ಹಾಜರಿದ್ದ ನೂರಾರು ಮಂದಿ ನಾಡಪ್ರಭು ಕೆಂಪೇಗೌಡರಿಗೆ ಜೈಕಾರ ಕೂಗಿದರಲ್ಲದೆ ಅವರ ಜೀವನ ಮತ್ತು ಸಾಧನೆ ಗುಣಗಾನ ಮಾಡಿದರು. ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕರಾದ ಎಸ್.ಟಿ.ಕೀರ್ತಿ, ಎಸ್.ಎಸ್.ಭದ್ರೇಗೌಡ, ಎಂ.ಕೆ.ಮಹದೇವ್, ಒಕ್ಕಲಿಗ ಸಮಾಜದ ಮುಖಂಡರಾದ ಶಿವಣ್ಣ, ಎ.ಟಿ.ಗೋಪಾಲ್, ವಡ್ಡರವಿ, ವಿದ್ಯಾರ್ಥಿ ಮುಖಂಡ ಎಸ್.ಜೀವನ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್‌ಕುಮಾರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೆಚ್.ಟಿ.ಸುದರ್ಶನ್, ಎಪಿಎಂಸಿ ಮಾಜಿ ನಿರ್ದೇಶಕರಾದ ಕುಚೇಲ, ಹೆಚ್.ವಿ.ಅನಿಲ್‌ಕುಮಾರ್, ಉಪ ತಹಸೀಲ್ದಾರ್ ಶರತ್‌ಕುಮಾರ್, ಪಿಡಿಓ ಪುಟ್ಟೇಗೌಡ, ಕಂದಾಯಾಧಿಕಾರಿ ಚಿದಾನಂದ್ ಮತ್ತಿತರರಿದ್ದರು.

ಅಧಿಕಾರಿ ವರ್ಗಾವಣೆ ಹುನ್ನಾರ ಖಂಡಿಸಿ ಕೋಟೆಯಲ್ಲಿ ಪ್ರತಿಭಟನೆ



ಹೆಚ್.ಡಿ.ಕೋಟೆ, ನ.7– ತಾಲೂಕಿನ ರೈತರ ದಾಖಲಾತಿಗಳನ್ನು ಸಮರ್ಪಕವಾಗಿ ನಿರ್ವಹಿಸಿ ಅಕ್ರಮ ಸಕ್ರಮ ಸಮಿತಿಗೆ ಸಲ್ಲಿಸುವ ಎಲ್‌ಎನ್‌ಡಿ ಅಧಿಕಾರಿ ಸಿದ್ದರಾಮು ಅವರನ್ನು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ವರ್ಗಾವಣೆ ಮಾಡಬಾರದೆಂದು ಒತ್ತಾಯಿಸಿ ತಾಲೂಕು ದಲಿತ ಸಂಘಟನೆ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಮಾತನಾಡಿ, ಕೆಲವರು ತಾಲೂಕು ಕಚೇರಿಯಲ್ಲಿ ಕೆಲಸ ಮಾಡುವ ಅಧಿಕಾರಿ ಮತ್ತು ನೌಕರರಿಗೆ ಉದ್ದೇಶಪೂರ್ವಕವಾಗಿ ತೊಂದರೆ ನೀಡುತ್ತಿದ್ದಾರೆ. ಇದರಿಂದ ರೈತರ ಮತ್ತು ಸಾರ್ವಜನಿಕರ ಕೆಲಸ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿದರು.

ಈ ಹಿಂದಿನ ತಹಸೀಲ್ದಾರ್ ನರಗುಂದ ಇದ್ದ ವೇಳೆ ಅಧಿಕಾರಿ ಸಿದ್ದರಾಮು ಮತ್ತು ಇನ್ನಿತರರು ಸಮರ್ಪಕವಾಗಿ ಕೆಲಸ ನಿರ್ವಹಿಸಿ ಅಕ್ರಮ ಸಕ್ರಮ ಸಮಿತಿಗೆ ದಾಖಲೆ ನೀಡುತ್ತಿದ್ದರಿಂದ ರೈತರ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿತ್ತು. ಹೊಸದಾಗಿ ಬಂದ ತಹಸೀಲ್ದಾರ್ ರತ್ನಾಂಬಿಕಾ ಕೆಲಸ ನಿರ್ವಹಿಸಿದ ವೇಳೆ ಸಿದ್ದರಾಮು ಅವರನ್ನು ಉದ್ದೇಶಪೂರ್ವಕವಾಗಿ ಅಂತರಸಂತೆಗೆ ವರ್ಗಾವಣೆಗೊಳಿಸಲಾಯಿತು. ಇತ್ತೀಚೆಗೆ ನಡೆದ ಅಕ್ರಮ ಸಕ್ರಮ ಸಮಿತಿ ಸಭೆಗಳಲ್ಲಿ ಈಗಿನ ಅಧಿಕಾರಿಗಳು ರೈತರ ದಾಖಲಾತಿಗಳನ್ನು ಸಮರ್ಪಕವಾಗಿ ನೀಡದ ಹಿನ್ನೆಲೆ ಅನೇಕ ಸಭೆ ಮುಂದೂಡಲಾಯಿತು. ಇದರಿಂದ ರೈತರ ಕೆಲಸ ಕಾರ್ಯಕ್ಕೆ ಹಿನ್ನಡೆಯಾಗಿದ್ದರಿಂದ ಸಾರ್ವಜನಿಕರು, ರೈತರು ಅನೇಕ ಮುಖಂಡರು ಅಕ್ರಮ ಸಕ್ರಮ ಸಮಿತಿಗೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮತ್ತೆ ರೈತರ ಕೆಲಸ ಸುಸೂತ್ರವಾಗಿ ನಡೆಯಲೆಂದು ಸಿದ್ದರಾಮು ಅವರನ್ನು ತಾಲೂಕು ಕಚೇರಿಯ ಎಲ್‌ಎನ್‌ಡಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಲು ನೇಮಕ ಮಾಡಿದ್ದರು. ಇದೀಗ ಪಟ್ಟಭದ್ರ ಹಿತಾಸಕ್ತಿಗಳು ಅವರು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಬಿಡದೆ ವರ್ಗಾವಣೆ ಮಾಡುವಂತೆ ಆರೋಪಿಸುತ್ತಿರುವುದು ಸರಿಯಲ್ಲ. ಒಂದು ವೇಳೆ ವರ್ಗಾವಣೆ ಮಾಡಿದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ನಂತರ ಪ್ರತಿಭಟನಾಕಾರರು ತಹಸೀಲ್ದಾರ್ ಸಣ್ಣರಾಮಪ್ಪ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ. ಸಾಗರ್ ಬಣದ ತಾಲೂಕು ಸಂಚಾಲಕ ಪುಟ್ಟಮಾದು, ನಾಗೇಶ್, ಮಾಲಗಯ್ಯ, ಅಮೀರ್, ಲಿಂಗರಾಜು, ಮಹದೇವಯ್ಯ, ಸಿದ್ದರಾಜು, ರಾಜಣ್ಣ, ಬಾಲಯ್ಯ, ದಾಸಯ್ಯ, ಮಂಜು, ಕಾರ್ತಿಕ್, ದಿವಾಕರ್, ರಮೇಶ, ನಿಂಗರಾಜು, ಸಿದ್ದರಾಮು, ಜವರಯ್ಯ, ಪೃಥ್ವಿ, ಚಂದ್ರು, ವೇಣು ಸೇರಿದಂತೆ ಇತರರಿದ್ದರು.

ಹಂಚೀಪುರ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷೆಯಾಗಿ ಗೀತಾ, ಉಪಾಧ್ಯಕ್ಷೆಯಾಗಿ ಮಣಿ ಆಯ್ಕೆ



ಸರಗೂರು, ನ.7– ತಾಲೂಕಿನ ಹಂಚೀಪುರ ಗ್ರಾಪಂ ಅಧ್ಯಕ್ಷೆಯಾಗಿ ಗೀತಾ, ಉಪಾಧ್ಯಕ್ಷೆಯಾಗಿ ಮಣಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗೀತಾ ಹಾಗೂ ಸತೀಶ್, ಉಪಾಧ್ಯಕ್ಷ ಸ್ಥಾನಕ್ಕೆ ಮಣಿ ಹಾಗೂ ಶೋಭಾ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ತಲಾ 7 ಮತ ಪಡೆದು ಅಧ್ಯಕ್ಷೆಯಾಗಿ ಗೀತಾ, ಉಪಾಧ್ಯಕ್ಷೆಯಾಗಿ ಮಣಿ ಆಯ್ಕೆಯಾದರೆ, ಪ್ರತಿಸ್ಪರ್ಧಿಗಳಾದ ಸತೀಶ್, ಶೋಭಾ ತಲಾ 6 ಮತ ಪಡೆದು ಪರಾಭವಗೊಂಡರು. ಕಬಿನಿ ಜಲಾಶಯದ ಎಇ ಜನಾರ್ಧನ್, ಪಿಡಿಓ ಬಿ.ಚನ್ನಪ್ಪ, ಸಿಇಓ ಗಜೇಂದ್ರ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು. ಈ ವೇಳೆ ಗ್ರಾಪಂ ಸದಸ್ಯರಾದ ಡಿ.ಎಸ್.ಜಯರಾಜ್, ಎಂ.ಎಸ್. ಮಂಜುಳ, ಮಂಜುಳ ಶಿವರಾಜು, ರುಕ್ಮಿಣಿ, ಎಂ.ನಟರಾಜು, ಕರಿಗೌಡ, ಶಿವಮ್ಮ, ಚಂದ್ರಶೇಖರ್, ಎಸ್.ಎನ್.ಮಹದೇವಪ್ಪ, ತಾಲೂಕು ಬಿಜೆಪಿ ಅಧ್ಯಕ್ಷ ಹೆಚ್.ಸಿ.ಗುರುಸ್ವಾಮಿ, ತಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಗ್ರಾಮದ ಮುಖಂಡರಾದ ದೇವರಾಜು, ಶೇಖರ್, ತೇಜ, ಪಿ.ಚಿನ್ನಯ್ಯ, ಶ್ರೀನಿವಾಸ್, ಡಿ.ಪಿ.ಪ್ರಕಾಶ್, ರಘುಪತಿ, ಕುಮಾರ, ಲೋಕೇಶ್, ಶಿವರುದ್ರ, ಬಿಲ್ ಕಲೆಕ್ಟರ್ ಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಕಸಾಪ ಹೋರಾಟ



ತಿ.ನರಸೀಪುರ, ನ.7– ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಸಾಹಿತ್ಯ ಪರಿಷತ್ ಹೋರಾಡಲು ಸದಾ ಸಿದ್ಧವಿದೆ ಎಂದು ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ತಾಲೂಕಿನ 10 ಮಂದಿಯನ್ನು ಕಸಾಪ ವತಿಯಿಂದ ಸನ್ಮಾನಿಸಿ ಮಾತನಾಡಿದ ಅವರು, ನಾಡು ನುಡಿಗಾಗಿ ನಡೆಯುವ ಎಲ್ಲಾ ಚಳುವಳಿಗಳಿಗೂ ಬೆಂಬಲವಾಗಿ ನಿಂತು, ಕನ್ನಡ ಸಾಹಿತ್ಯ ಪರಿಷತ್ ಬಗ್ಗೆ ಕನ್ನಡಿಗರು ಇಟ್ಟಿರುವ ಗೌರವವನ್ನು ಸದಾ ಮನ್ನಿಸಿ ಅವರ ಭಾವನೆಗಳಿಗೆ ಧಕ್ಕೆ ತರದಂತೆ ಗೌರವ ಕಾಪಾಡಿಕೊಂಡು ಮುನ್ನಡೆಯುವ ಮೂಲ ಉದ್ದೇಶ ನಮ್ಮದಾಗಿದೆ ಎಂದರು.

ಭಾಷೆ ಗಟ್ಟಿಯಾಗಿ ಉಳಿಸುವ ನಿಟ್ಟಿನಲ್ಲಿ ಎಲ್ಲರೂ ಕನ್ನಡವನ್ನು ಶುದ್ಧ ಅಂತಃಕರಣದಿಂದಲೇ ಮಾತನಾಡಿ ಭಾಷೆ ಉಳಿವಿಗಾಗಿ ಎಲ್ಲರೂ ಸ್ಪಂದಿಸುವಂತಾಗಬೇಕು ಎಂದು ಮನವಿ ಮಾಡಿದರು. ಕನ್ನಡ ಅಭಿಮಾನ ಎಂಬುದು ವರ್ಷದ ಒಂದು ತಿಂಗಳಿಗೆ ಸೀಮಿತವಾಗಿರುವುದು ದುರದೃಷ್ಟಕರ. ನೀರು ಹಾಗೂ ನೆಲದ ವಿಚಾರದಲ್ಲಿ ಬೀದಿಗೆ ಇಳಿಯುವ ನಾವು ಭಾಷೆ ವಿಷಯದಲ್ಲಿ ಮೌನಕ್ಕೆ ಜಾರಿರುವುದು ಏಕೆ ಎಂಬುದರ ಬಗ್ಗೆ ಪ್ರತಿಯೊಬ್ಬ ಕನ್ನಡಿಗರು ಚಿಂತಿಸುವಂತಾಗಬೇಕು. ಕನ್ನಡ ಶಾಲೆಗಳ ಉಳಿವಿಗಾಗಿ ನಾವು ಧ್ವನಿ ಎತ್ತಬೇಕಾಗಿದೆ ಎಂದರು.

ಪ್ರಶಸ್ತಿ ಪುರಸ್ಕೃತರಾದ ಆರ್.ಮಂಜುನಾಥ್, ವೈ.ಜಿ.ಮಹದೇವ್, ರಾಜೇಶ್ ಹೆಗಡೆ, ಮುಸುವಿನಕೊಪ್ಪಲು ಪ್ರಕಾಶ್, ಪದ್ಮ ಅವರನ್ನು ಸಂಘದ ಕಚೇರಿಯಲ್ಲಿ ಸನ್ಮಾನಿಸಿದರೆ, ಸಿ.ಬಿ.ಹುಂಡಿ ಪ್ರಕಾಶ್, ರೇಖಾ, ಮಹದೇವಸ್ವಾಮಿ, ರೋಜಾ, ಶ್ರೀನಿವಾಸ್ ಅವರನ್ನು ಅವರ ಮನೆಗಳಿಗೆ ತೆರಳಿ ಸನ್ಮಾನಿಸಲಾಯಿತು.

ಕಸಾಪ ಖಜಾಂಚಿ ಜ್ಞಾನೇಂದ್ರಮೂರ್ತಿ, ಜೂನಿಯರ್ ನರಸಿಂಹರಾಜು, ಜೂನಿಯರ್ ದ್ವಾರಕೇಶ್, ಟೌನ್ ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯದರ್ಶಿ ನಾಗೇಂದ್ರ, ಸಂಚಾಲಕ ಚೌಹಳ್ಳಿ ಮಲ್ಲೇಶ್, ಮುಖಂಡರಾದ ಬಸಪ್ಪ, ಹಾಲಿನ ಸತ್ಯ, ಅರ್ಜುನ್, ನಾರಾಯಣ್, ನಿಂಗರಾಜು, ರಮೇಶ್, ಪ್ರಕಾಶ್ ಮತ್ತಿತರರಿದ್ದರು.

ಪೌರಕಾರ್ಮಿಕರ ಸಮಸ್ಯೆ ಆಲಿಕೆಗೆ ಸಭೆ

ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ



ಹುಣಸೂರು, ನ.7– ಸಫಾಯಿ ಕರ್ಮಚಾರಿಗಳ ಕುಂದು ಕೊರತೆ ಚರ್ಚೆ ಮತ್ತು ಪರಿಹಾರಕ್ಕಾಗಿ ಡಿಸೆಂಬರ್‌ನಲ್ಲಿ ಹುಣಸೂರಿನಲ್ಲಿ ಅಧಿಕಾರಿಗಳ ಸಭೆ ನಡೆಸಲಾಗುವುದು ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಭರವಸೆ ನೀಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪೌರಕಾರ್ಮಿಕರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳ ಕುರಿತು ಈಗಾಗಲೇ ಸಭೆ ನಡೆಸಿದ್ದೇನೆ. ಮೈಸೂರು ಜಿಲ್ಲೆಯಲ್ಲಿ ಹುಣಸೂರು, ಪಿರಿಯಾಪಟ್ಟಣ ಮತ್ತು ಕೆ.ಆರ್.ನಗರ ತಾಲೂಕುಗಳಿಗೆ ಭೇಟಿ ನೀಡಬೇಕಿದೆ. ಹುಣಸೂರಿನಲ್ಲಿ ಡಿಸೆಂಬರ್‌ನಲ್ಲಿ ಅಧಿಕಾರಿಗಳು ಮತ್ತು ಸಫಾಯಿ ಕರ್ಮಚಾರಿಗಳನ್ನು ಒಳಗೊಂಡು ಸಭೆ ನಡೆಯಲಿದೆ. ತಾಲೂಕಿನ ಪೌರಕಾರ್ಮಿಕರ ಮತ್ತು ಸಫಾಯಿ ಕರ್ಮಚಾರಿಗಳ ಸಮಸ್ಯೆಗಳು ಸಾಕಷ್ಟಿದ್ದು, ಸಭೆಯಲ್ಲಿ ಪರಿಹಾರೋಪಾಯ ಕೈಗೊಳ್ಳಲಾಗುವುದು ಎಂದರು.

ಅಭಿವೃದ್ಧಿಗಾಗಿ ಯೋಜನೆ: ರಾಜ್ಯ ಮತ್ತು ಕೇಂದ್ರ ಸರ್ಕಾರ ಸಫಾಯಿ ಕರ್ಮಚಾರಿಗಳ ಸರ್ವತೋಮುಖ ಅಭಿವೃದ್ಧಿಗೆ ನಿರ್ಣಯಿಸಿವೆ. ರಾಜ್ಯಾಧ್ಯಕ್ಷನಾದ ನಂತರ ದೇಶದ ಇತರ ರಾಜ್ಯಗಳಲ್ಲಿ ಸಫಾಯಿ ಕರ್ಮಚಾರಿಗಳ ಸ್ಥಿತಿಗತಿ, ಅವರಿಗಾಗಿರುವ ಕಾರ್ಯಕ್ರಮಗಳ ಕುರಿತು ತಿಳಿಯಲು ಈಗಾಗಲೇ ಪ್ರವಾಸ ನಡೆಸಿ ಮಾಹಿತಿ ಪಡೆದಿದ್ದೇನೆ. ಅಲ್ಲದೆ ರಾಜ್ಯ ಸರ್ಕಾರ 17 ಜನರ ತಂಡ ರಚಿಸಿದ್ದು, ಸಿಂಗಾಪುರ ಪ್ರವಾಸ ಕೈಗೊಂಡು ಅಲ್ಲಿನ ಸಫಾಯಿ ಕರ್ಮಚಾರಿಗಳಿಗಾಗಿ ಕೈಗೊಂಡಿರುವ ಅಭಿವೃದ್ಧಿಪರ ಕಾರ್ಯಕ್ರಮಗಳ ಮಾಹಿತಿ ಪಡೆಯಲಿದೆ ಎಂದರು.

ಸಿಎಂ ಸಕಾರಾತ್ಮಕ ಸ್ಪಂದನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗಾಗಿ ಕಟಿಬದ್ಧರಾಗಿದ್ದಾರೆ. ಅದಕ್ಕೆ ಉದಾಹರಣೆಯೆಂದರೆ ಈಗಾಗಲೇ ರಾಜ್ಯದ 11 ಸಾವಿರಕ್ಕೂ ಹೆಚ್ಚು ಪೌರಕಾರ್ಮಿಕರ ಸೇವೆ ಖಾಯಂಗೊಳಿಸಿರುವುದು. ಡಿಸೆಂಬರ್ ಅಂತ್ಯದ ವೇಳೆಗೆ ಉಳಿದವರನ್ನು ಸರ್ಕಾರ ಖಾಯಂಗೊಳಿಸಲಿದೆ. ಸಫಾಯಿ ಕರ್ಮಚಾರಿಗಳ ಆರೋಗ್ಯ, ಶಿಕ್ಷಣ, ವಸತಿ ಮುಂತಾದವುಗಳ ಕುರಿತು ತೀವ್ರ ಕಾಳಜಿ ಹೊಂದಿದ್ದು, ರಾಜ್ಯದ ಈ ಸಮುದಾಯದಲ್ಲಿ ಬದಲಾವಣೆ ಪರ್ವವನ್ನು ಮುಖ್ಯಮಂತ್ರಿಗಳು ಮಾಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ: ಪೌರಕಾರ್ಮಿಕರ ವಾರ್ಡ್‌ಗಳಿಗೆ ಕಾವೇರಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಮಿಕ್ಕ ವಾರ್ಡ್‌ಗಳಿಗೆ ಸರಬರಾಜು ಆಗುತ್ತಿದೆ. ಆದರೆ, ನಮಗೆ ಮಾತ್ರ ಇಂದಿಗೂ ಬೋರ್‌ವೆಲ್ ನೀರು ನೀಡಲಾಗುತ್ತಿದೆ. ಕಾಲೋನಿಯ ನಾಲ್ಕೈದು ರಸ್ತೆಗಳಲ್ಲಿ ಬೀದಿ ದೀಪವಿಲ್ಲದೆ ನಾಗರಿಕರು ತೊಂದರೆಗೊಳಗಾಗಿದ್ದಾರೆ. ನಗರಸಭೆ ಸಾಮಾನ್ಯ ಸಭೆಯಲ್ಲೂ ಈ ಬಗ್ಗೆ ಗಮನ ಸೆಳೆದಿದ್ದೇನೆ. ಇಂತಹ ತಾರತಮ್ಯ ಸರಿಯೇ ಎಂದು ನಗರಸಭಾ ಸದಸ್ಯೆ ರಾಣಿ ಪೆರುಮಾಳ್ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಭಾರ ಪೌರಾಯುಕ್ತೆ ಎಲ್.ರೂಪ, ಕಾವೇರಿ ನೀರು ಪೂರೈಕೆಗಾಗಿ ನಗರದಲ್ಲಿ 3 ಓವರ್ ಹೆಡ್ ಟ್ಯಾಂಕ್ ನಿರ್ಮಾಣಗೊಂಡಿದೆ. ಇನ್ನು ಕೆಲವೇ ತಿಂಗಳಲ್ಲಿ ಕಾವೇರಿ ನೀರು ಪೂರೈಕೆಯಾಗಲಿದೆ ಎಂದರು.

ತಾಲೂಕು ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಮುರುಗೇಶ್, ನಗರಸಭೆ ಮಾಜಿ ಅಧ್ಯಕ್ಷ ಎಂ.ಶಿವಕುಮಾರ್, ಮುಖಂಡರಾದ ಎಚ್.ಸಿ.ಮಾದು, ಪೆರುಮಾಳ್, ಕೃಷ್ಣ, ರಮೇಶ್, ದಲಿತ ಮುಖಂಡರಾದ ಕೆಂಪರಾಜು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬನಾರಸ್ (ಕ): ಬೆ10.15ಕ್ಕೆ, ಮ.1.15ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ರಾ.7.20ಕ್ಕೆ, ಡಬ್ಬಲ್ XL (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಮಿಲಿ (ಹಿಂ): ಬೆ.10.45ಕ್ಕೆ, ರಾ.7.20ಕ್ಕೆ, ನಿಥಮ್ ಒರು ವಾನಂ (ತ): ಮ.1.15ಕ್ಕೆ, ಕಾಫಿ ವಿತ್ ಕಾದಲ್ (ತ): ಸಂ.4.25ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.9.50ಕ್ಕೆ.
ಸ್ಕ್ರೀನ್ 4	ಗಂಧದಗುಡಿ (ಕ): ಬೆ.11.10ಕ್ಕೆ, ಮ.1.30ಕ್ಕೆ, ಮ.3.40ಕ್ಕೆ, ಸಂ.5.40ಕ್ಕೆ, ರಾ.7.45ಕ್ಕೆ, ಸಟರ್‌ಡೇ ನೈಟ್ (ಮ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಂಧದ ಗುಡಿ (ಕ): ಬೆ.9.45ಕ್ಕೆ, ಮ.2.55ಕ್ಕೆ, ರಾ.8.10ಕ್ಕೆ, ಕಾಂತಾರ (ಕ): ಬೆ.11.50ಕ್ಕೆ, ಸಂ.5.05ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಫೋನ್ ಭೂತ್ (ಹಿಂ): ಬೆ.9.15ಕ್ಕೆ, ರಾ.10.30ಕ್ಕೆ, ಗಂಧದ ಗುಡಿ (ಕ): ಮ.12ಕ್ಕೆ, ಸಂ.5.15ಕ್ಕೆ, ಸೆಪ್ಟೆಂಬರ್ 13 (ಕ): ಮ.2.10ಕ್ಕೆ, ಕಾಂತಾರ (ಕ): ರಾ.7.25ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.9.20ಕ್ಕೆ, ಮ.2.35ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಮ.12.20ಕ್ಕೆ, ರಾ.7.50ಕ್ಕೆ, ನೀ ಮಾಯೆಯೊಳಗೊ ಮಾಯೆ ನಿನ್ನೊಳಗೊ (ಕ): ಸಂ.5.40ಕ್ಕೆ, ಕಾಫಿ ವಿತ್ ಕಾದಲ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ಬನಾರಸ್ (ಕ): ಬೆ.10.10ಕ್ಕೆ, ಸಂ.6.55ಕ್ಕೆ, ಕಂಬ್ಳಿಹುಳ (ಕ): ಮ.1.10ಕ್ಕೆ, ಫೋನ್ ಭೂತ್ (ಹಿಂ): ಸಂ.4.05ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕಂಬ್ಳಿಹುಳ (ಕ): ಬೆ.10.30ಕ್ಕೆ, ನಹೀ ಜ್ಞಾನೇನ ಸದೃಶಂ (ಕ): ಮ.1.15ಕ್ಕೆ, ನೀ ಮಾಯೆಯೊಳಗೊ ಮಾಹೆ ನಿನ್ನೊಳಗೊ (ಕ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ಸಂ.6.30ಕ್ಕೆ, ಸರ್ದಾರ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.30ಕ್ಕೆ, ರಾ.7.54ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.45ಕ್ಕೆ, ಮ.1ಕ್ಕೆ, ಸಂ.4ಕ್ಕೆ, ಸಂ.6.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಬನಾರಸ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಫೋನ್ ಭೂತ್ (ಹಿಂ): ಮ.1.30ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಕಾಂತಾರ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬನಾರಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲವ್ ಟುಡೇ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಬನಾರಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ದಾರ್ (ತ)	4 ಪ್ರದರ್ಶನಗಳು
ಪ್ರಭಾ	
ಊರ್ವಶಿವೋ ರಾಕ್ಷಸಿವೋ (ತೆ)	4 ಪ್ರದರ್ಶನಗಳು

ಉಚಿತ ಕಣ್ಣಿನ ತಪಾಸಣಾ ಶಿಬಿರ

ಹುಣಸೂರು, ನ.7– ತಾಲೂಕಿನ ಗಾವಡಗೆರೆಯ ಗುರುಲಿಂಗ ಜಂಗಮದೇವರ ಮಠದಲ್ಲಿ ನ.8ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದು ನಗರಸಭೆ ಸದಸ್ಯ ಗಣೇಶ್ ಕುಮಾರ ಸ್ವಾಮಿ ತಿಳಿಸಿದ್ದಾರೆ. ಮಾಹಿತಿಗೆ ದೂ: 9448390792, 8660291387 ಸಂಪರ್ಕಿಸಿ.

ಟ್ರಾಕ್ಟರ್ ಹರಿದು ಗೃಹಿಣಿ ಸಾವು



ನಂಜನಗೂಡು, ನ.7– ಟ್ರಾಕ್ಟರ್ ಹರಿದು ಗೃಹಿಣಿಯೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ಮಲ್ಲನಮೂಲೆ ಬಳಿ ಸೋಮವಾರ ನಡೆದಿದೆ. ಮೈಸೂರಿನ ಸಾತಗಳ್ಳಿ ನಿವಾಸಿ ಸ್ವಾಮಿ ಎಂಬುವರ ಪತ್ನಿ ಗೌರಮ್ಮ (36) ಸಾವನ್ನಪ್ಪಿದವರು.

ವಿವರ: ಗೌರಮ್ಮ ಅವರು ಶ್ರೀಕಂಠೇಶ್ವರನ ದರ್ಶನಕ್ಕೆ ತನ್ನ ತಂಗಿ ಶೋಭಾ ಜೊತೆ ತಮ್ಮ ಹೋಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ ಮೈಸೂರಿನಿಂದ ನಂಜನಗೂಡಿಗೆ ಆಗಮಿಸುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಟ್ರಾಕ್ಟರ್ ತಾಲೂಕಿನ ಮಲ್ಲನಮೂಲೆ ಬಳಿ ಸ್ಕೂಟರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕೂಟರ್‌ನಿಂದ ಕೆಳಗೆ ಬಿದ್ದ ಗೌರಮ್ಮ ಅವರು ಹೆಲ್ಮೆಟ್ ಧರಿಸಿದ್ದರೂ, ತಲೆ ಮೇಲೆ ಟ್ರಾಕ್ಟರ್ ಚಕ್ರ ಹರಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂದರ್ಭ ಸ್ಕೂಟರ್ ಹಿಂಬದಿ ಕುಳಿತ್ತಿದ್ದ ಶೋಭಾ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆ ಬಳಿಕ ಟ್ರಾಕ್ಟರ್ ಚಾಲಕ ಪರಾರಿಯಾಗಿದ್ದಾನೆ. ಈ ಸಂಬಂಧ ಮೃತರ ಪತಿ ಸ್ವಾಮಿ ನಗರದ ಸಂಚಾರಿ ಠಾಣೆಗೆ ದೂರು ನೀಡಿದ್ದು, ಸ್ಥಳಕ್ಕೆ ಎಸ್‌ಐ ಯಾಸ್ಮಿನ್ ತಾಜ್ ಭೇಟಿ ನೀಡಿ ಪರಿಶೀಲಿಸಿ ಟ್ರಾಕ್ಟರ್ ವಶಪಡಿಸಿಕೊಂಡಿದ್ದಾರೆ.

ವಿದ್ಯುತ್ ಸ್ಪರ್ಶ: ಬಾಲಕ ಸಾವು



ಹೆಬ್ಬಾಳು(ಕೆ.ಆರ್.ನಗರ), ನ.7– ವಿದ್ಯುತ್ ಸ್ಪರ್ಶಿಸಿ ಬಾಲಕನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಕೆ.ಆರ್.ನಗರ ತಾಲೂಕಿನ ಮಳಲಿ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.

ಗ್ರಾಮದ ಕಾಡೇಗೌಡ ಎಂಬುವರ ಪುತ್ರ ಹಾಗೂ ಮಾವತ್ತೂರು ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ತರಗತಿ ಮನೋಜ್ (16) ಸಾವನ್ನಪ್ಪಿದ ಬಾಲಕ. ಈತ ಮುಂಜಾನೆ 7 ಗಂಟೆ ಸಮಯದಲ್ಲಿ ತಮ್ಮ ಸಂಬಂಧಿಕರ ಮನೆಗೆ ಬಂದಿದ್ದ ವೇಳೆ, ಮನೆ ಮುಂದೆ ಇದ್ದ ನುಗ್ಗೆ ಮರಕ್ಕೆ 11 ಕೆವಿ ವಿದ್ಯುತ್ ತಂತಿ ತಗುಲಿದೆ. ಇದನ್ನರಿಯದ ಮನೋಜ್ ಮರದ ಬಳಿ ಹೋಗುವ ವೇಳೆ ವಿದ್ಯುತ್ ಸ್ಪರ್ಶಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಎಂ.ಎಸ್.ಯದುಗಿರೀಶ್ ಮತ್ತು ಸೆಸ್ಕಾಂ ಎಇಇ ಅರ್ಕೇಶ್ವರಮೂರ್ತಿ ಬಾಲಕನ ಪೋಷಕರಿಗೆ ಸಾಂತ್ವನ ಹೇಳಿದರು. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೌರಮ್ಮ ನಿಧನ



ಹುಣಸೂರು, ನ.7– ಪತ್ರಕರ್ತ ಮಹದೇವ್ ಅವರ ತಾಯಿ ಗೌರಮ್ಮ (87) ಭಾನುವಾರ ರಾತ್ರಿ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಮಾರಗೋಡನಹಳ್ಳಿಯ ಮೃತರ ತೋಟದಲ್ಲಿ ಸೋಮವಾರ ನಡೆಯಿತು.


50 TH YEAR Birthday
ಜಿ. ಮಂಜುಗೌಡ ರವರಿಗೆ
50ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು
ಜಿ.ಮಂಜು (ಮಂಜುಗೌಡ)
ನಿಕಟಪೂರ್ವ ಅಧ್ಯಕ್ಷರು, ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ
ಅಧ್ಯಕ್ಷರು, ಭಾಗ್ಯಸಾಗರ ಎಜುಕೇಷನಲ್ ಟ್ರಸ್ಟ್(ರಿ.),
ಪ್ರಧಾನಕಾರ್ಯದರ್ಶಿ, ಮೈಸೂರು ನಗರ ಜೆ.ಡಿ.ಎಸ್
ಗುತ್ತಿಗೆದಾರರು ದಸರಾ ವಸ್ತು ಪ್ರದರ್ಶನ
ಮಾಲೀಕರು, ಜಿ.ಎಂ ಕಾವೇರಿ ಸಿಲ್ಕ್ ಅಂಡ್ ಹ್ಯಾಂಡಿಕ್ರಾಫ್ಟ್ ಎಂಪೋರಿಯಂ
ಮಾಲೀಕರು, ಅಶ್ವಿನಿ ಎಂಟರ್‌ಪ್ರೈಸಸ್ ಅಂಡ್ ಬಿಲ್ಡರ್ಸ್
ಮಾಲೀಕರು, ಅಶ್ವಿನಿ ಗೋಲ್ಡ್ ಕಂಪನಿ
ಕೋರುವವರು : ದಸರಾ ವಸ್ತು ಪ್ರದರ್ಶನ ಮಳಿಗೆದಾರರು


ಉದ್ಯಮಿಗಳು ಹಾಗೂ
ಅಶ್ವಿನಿ ಎಂಟರ್‌ಪ್ರೈಸಸ್ ಅಂಡ್ ಬಿಲ್ಡರ್ಸ್ ಮಾಲೀಕರು
50 TH YEAR Birthday
ಜಿ. ಮಂಜುಗೌಡ
50ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ಜಿ. ಮಂಜುಗೌಡ ಸ್ನೇಹ ಬಳಗ
ಮೈಸೂರು ಹಾಗೂ ಮಂಡ್ಯ


ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷರು
ಹಾಗೂ ಜೆ.ಡಿ.ಎಸ್. ನಗರ ಪ್ರದಾನ ಕಾರ್ಯದರ್ಶಿಗಳಾದ
50 ಹುಟ್ಟುಹಬ್ಬದ ಸಂಭ್ರಮ
ಜಿ. ಮಂಜುಗೌಡ
50ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು
ಜಿ.ಮಂಜು (ಮಂಜುಗೌಡ)
ನಿಕಟಪೂರ್ವ ಅಧ್ಯಕ್ಷರು,
ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ
ಅಧ್ಯಕ್ಷರು ಭಾಗ್ಯಸಾಗರ ಎಜುಕೇಷನಲ್ ಟ್ರಸ್ಟ್(ರಿ.),
ಪ್ರಧಾನಕಾರ್ಯದರ್ಶಿ, ಮೈಸೂರು ನಗರ ಜೆ.ಡಿ.ಎಸ್
ಗುತ್ತಿಗೆದಾರರು ದಸರಾ ವಸ್ತು ಪ್ರದರ್ಶನ
ಮಾಲೀಕರು, ಜಿ.ಎಂ ಕಾವೇರಿ ಸಿಲ್ಕ್ ಶ್ರೀ ಹ್ಯಾಂಡಿಕ್ರಾಫ್ಟ್ ಎಂಪೋರಿಯಂ
ಮಾಲೀಕರು, ಅಶ್ವಿನಿ ಎಂಟರ್‌ಪ್ರೈಸಸ್ ಶ್ರೀ ಬಿಲ್ಡರ್ಸ್
ಮಾಲೀಕರು, ಅಶ್ವಿನಿ ಗೋಲ್ಡ್ ಕಂಪನಿ
ಶುಭಕೋರುವವರು : ಜೆ.ಡಿ.ಎಸ್. ಕಾರ್ಯಕರ್ತರು, ಮೈಸೂರು